# ಕೌಜಲಗಿ ನಿಂಗವ್ವ



ಡಾ॥ ಶ್ರೀರಾಮ ಇಟ್ಟಣ್ಣವರ

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ
೧೪/೩, ನೃಪತುಂಗ ರಸ್ತೆ, ಬೆಂಗಳೂರು-೫೬೦ ೦೦೧

# ಕೌಜಲಗಿ ನಿಂಗವ್ವ

ಡಾ॥ ಶ್ರೀರಾಮ ಇಟ್ಟಣ್ಣವರ

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ
ನೃಪತುಂಗ ರಸ್ತೆ, ಬೆಂಗಳೂರು - ೫೬೦ ೦೦೨

**KOUJALAGININGAVVA** - A Life sketch and achievements of Koujalagi Ningavva by Dr. Shriram Ittannavar. Published by the Registrar, Karnataka Janapada and Yakshagana Academy, Bangalore-2. Pp.45, Price : Rs.10-00

ಮೊದಲನೆಯ ಮುದ್ರಣ : ೧೯೯೬

© ಹಕ್ಕುಗಳು : ಲೇಖಕರದು

ಬೆಲೆ : ರೂ. ೧೦-೦೦

ಮುದ್ರಕರು : ಆಬ್ಯಾಕಸ್ ಡಿಟಿಪಿ ಮತ್ತು ಆಫ್‌ಸೆಟ್

# ಅಧ್ಯಕ್ಷರ ಮಾತು

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಜಾನಪದ ಕ್ಷೇತ್ರ ಕಾರ್ಯ, ಜನಪದ ಕಲಾಪ್ರದರ್ಶನ, ಕಲಾತರಬೇತಿ, ಕಲೆಗಳನ್ನು ಕುರಿತ ವಿಡಿಯೋ ಕಮ್ಮಟಗಳನ್ನು ಅಭಿರುಚಿ ಶಿಬಿರಗಳು ಮುಂತಾದ ಕಾರ್ಯಕ್ರಮಗಳನ್ನು ನಿರ್ವಹಿಸುತ್ತಿರುವುದರ ಜೊತೆಗೆ ಜಾನಪದ ಕ್ಷೇತ್ರದ ಹಲವು ಮುಖಗಳ ಬಗ್ಗೆ ಪರಿಚಯ ಮಾಹಿತಿ ಹಾಗೂ ಸಂಶೋಧನಾ ಗ್ರಂಥಗಳನ್ನು ಕೂಡ ಪ್ರಕಟಿಸುತ್ತಿದೆ. ಶಿಷ್ಟ ಸಾಹಿತಿಗಳ ಜೀವನ ವಿವರಗಳು ನಾನಾ ಕಾರಣಗಳಿಂದ ದಾಖಲಾಗುತ್ತಾ ಅವರ ಪರಿಚಯವನ್ನು ಅಕ್ಷರ ಜಗತ್ತಿನ ಗಮನಕ್ಕೆ ಬಹಳ ಬೇಗನೆ ಬರುತ್ತದೆ. ಮಾತ್ರವಲ್ಲ ಸಾಹಿತ್ಯ ಚರಿತ್ರೆಯ ಹಾಗೂ ವಿಮರ್ಶೆಯ ಭಾಗಗಳಾಗಿಯೂ ಮೌಲಿಕಥೆಯನ್ನು ಪಡೆದಿವೆ. ಆದರೆ ಜಾನಪದ ಜಗತ್ತಿನ ಕವಿ ಕಲಾವಿದರಿಗೆ ಇಂತಹ ಅದೃಷ್ಟವಿಲ್ಲ. ಈ ಕಾರಣದಿಂದ ಶಿಷ್ಟ ಸಾಹಿತ್ಯ ಮತ್ತು ಕಲೆಗಳಿಗೆ ಅಪೂರ್ವ ಪ್ರೇರಣೆಯನ್ನು ಒದಗಿಸಿದ ಮತ್ತು ಒದಗಿಸುತ್ತಿರುವ ಜನಪದ ಕವಿಗಳು ಮತ್ತು ಕಲಾವಿದರು ನಾಗರಿಕ ಜಗತ್ತಿನ ಕಣ್ಣಿಗೆ ಇನ್ನೂ ಅಜ್ಞಾತವಾಗಿ ಉಳಿದಿದ್ದಾರೆ. ಇಂತಹ ಜಾನಪದ ಲೋಕದ ವಿಶಿಷ್ಟರನ್ನು ಅಕ್ಷರ ಜಗತ್ತಿನ ಬೆಳಕಿಗೆ ತಂದು ಅವರು ನಮ್ಮ ಸಂಸ್ಕೃತಿ ನಿರ್ಮಾಣದಲ್ಲಿ ವಹಿಸುತ್ತಿರುವ ವೈಶಿಷ್ಟಪೂರ್ಣ ಪಾತ್ರವನ್ನು ಗುರುತಿಸುವುದು ಅತ್ಯಂತ ತುರ್ತಾಗಿ ಆಗಬೇಕಾದ ಅಗತ್ಯಗಳಲ್ಲಿ ಒಂದಾಗಿದೆ. ಈ ಕಾರಣದಿಂದ ಅಕಾಡೆಮಿ ತಮ್ಮ ಜೀವಮಾನವನ್ನೆಲ್ಲ ಜಾನಪದಕ್ಕಾಗಿಯೇ ಸಮರ್ಪಿಸಿಕೊಂಡು ಜನಮನದಲ್ಲಿ ಪಸಿರಿನ ಹೊಳೆಯಾಗಿ ಹರಿದು ಜೀವನ ಸತ್ವವನ್ನು ಮೂಡುತ್ತಿರುವ ಗ್ರಾಮೀಣ ಪ್ರತಿಭಾವಂತರನ್ನು ಪರಿಚಯ ಮಾಡಿಕೊಡುವ ಪುಸ್ತಕಗಳನ್ನು ಬಲ್ಲವರಿಂದ ಬರೆಯಿಸಿ ಪ್ರಕಟಿಸುತ್ತಿದೆ. ಇಂತಹ ಕೃತಿಗಳಲ್ಲಿ 'ಕೌಜಲಗಿ ನಿಂಗವ್ವ' ಎಂಬ ಪ್ರಸ್ತುತ ಹೊತ್ತಿಗೆಯೂ ಸಹ ಒಂದಾಗಿದೆ.

ಕೌಜಲಗಿ ನಿಂಗವ್ವ ಶ್ರೀಕೃಷ್ಣಪಾರಿಜಾತ ರಂಗಲೋಕದ ಒಂದು ಧ್ರುವತಾರೆ. ಉತ್ತರ ಕರ್ನಾಟಕದ ಜನಪದ ರಂಗಭೂಮಿಯಲ್ಲಿ ಶ್ರೀಕೃಷ್ಣ ಪಾರಿಜಾತ ಮತ್ತು ಬಯಲಾಟಗಳು ಅತ್ಯಂತ ಮಹತ್ವದ ಸ್ಥಾನವನ್ನು ಪಡೆದಿವೆ. ಶ್ರೀಕೃಷ್ಣಪಾರಿಜಾತ ಒಂದು ವಿಸ್ಮಯಕಾರಿಯಾದ ಅಪರೂಪದ ರಂಗಮಾಧ್ಯಮ. ಪಾರಿಜಾತ ರಂಗಭೂಮಿ ಎಂದೇ ಪ್ರತ್ಯೇಕವಾಗಿ

ಹೆಸರಿಸಬಹುದಾದಷ್ಟು ವ್ಯಾಪಕತೆಯನ್ನು, ಇತಿಹಾಸವನ್ನು, ಜನಪ್ರಿಯತೆಯನ್ನು ಮತ್ತು ವೈಶಿಷ್ಟ್ಯವನ್ನು ಪಡೆದ ರಂಭೂಮಿಯಿದು. ಉತ್ತರಕರ್ನಾಟಕದ ಹಳ್ಳಿಹಳ್ಳಿಗಳಲ್ಲಿ ಜನರನ್ನು ರಂಜಿಸುವ, ಅರಿವನ್ನು ಮೂಡುವ ತರ್ಕ ಶಕ್ತಿಯನ್ನು ಮೊನಚುಗೊಳಿಸುವ ಮತ್ತು ಅಧ್ಯಾತ್ಮದ ನರುಗಂಪನ್ನು ಪಸರಿಸುವ ಸಾಧನವಾಗಿದೆ ಇದು. ನೂರಾರು ಕಂಪನಿಗಳು, ಸಾವಿರಾರು ಜನ ಸ್ತ್ರೀ ಪುರುಷ ಕಲಾವಿದರು ಈ ರಂಗಭೂಮಿಗೆ ಜೀವಂತಿಕೆಯನ್ನು ಶ್ರೀಮಂತಿಕೆಯನ್ನು ಮತ್ತು ಕಲಾವಂತಿಕೆಯನ್ನು ತುಂಬಿದ್ದಾರೆ. ಹಳ್ಳಿಹಳ್ಳಿಗಳಲ್ಲಿ ಕೃಷ್ಣಪಾರಿಜಾತದ ಹಾಡುಗಳನ್ನು ಮಾತುಗಳನ್ನು ಸದಾ ಪಲುಕುವ ಜನ ಅತ್ಯಧಿಕ ಸಂಖ್ಯೆಯಲ್ಲಿದ್ದು ಅದು ಅವರ ರಸಿಕತೆಗೆ ಸಾಕ್ಷಿಯೂ ಆಗಿದೆ. ಬಯಲಾಟಗಳಲ್ಲಿ ವಿವಿಧ ಕಥಾವಸ್ತುಗಳು ರಂಗದ ಮೇಲೆ ಜೀವಂತಗೊಂಡು ಅಭಿವ್ಯಕ್ತವಾದರೆ ಶ್ರೀಕೃಷ್ಣಪಾರಿಜಾತ, ಶ್ರೀಕೃಷ್ಣ ರುಕ್ಮಿಣಿ, ಸತ್ಯಭಾಮೆಯರ ಸುತ್ತ ಸುತ್ತುವ ಮಧುರ ಮೋಹಕ, ಸರಸ ಸುಂದರ ಕೌಟುಂಬಿಕ ಕಥನಕವಾಗಿದೆ. ಅಪರಾಳ ತಮ್ಮಣ್ಣ, ಕಾವ್ಯರೂಪವಾಗಿ ಬರೆದ ಶ್ರೀಕೃಷ್ಣಪಾರಿಜಾತದ ಕಥೆ ಕುಲಗೋಡ ತಮ್ಮಣ್ಣನಿಂದ ರಂಗಭೂಮಿಯ ರಂಗನ್ನು ಕ್ರಿಯಾವಂತಿಕೆಯನ್ನು ಪಡೆದು ಚೇತೋಹಾರಿಯಾಗಿ ಬೆಳೆಯಿತು. ಕಥೆ, ಮೈನವಿರೇಳಿಸುವ ತರ್ಕಬದ್ಧ ಸಂವಾದಗಳು, ಪ್ರೇಕ್ಷಕರನ್ನು ಸಮ್ಮೋಹನಗೊಳಿಸುವ ವಿವಿಧ ಮಟ್ಟುಗಳ ವೈಶಿಷ್ಟ್ಯಮಯವಾದ ದೇಶೀಯ ರಾಗಗಳು, ಮಾನಸಿಕ ಭಾವವನ್ನು ಅಂಗಾಂಗಗಳ ಮೂಲಕ ಪರಿಣಾಮಕಾರಿಯಾಗಿ ಅಭಿವ್ಯಕ್ತಿಸುವ ಅಭಿನಯ, ಸರಳವಾದ ಲಲಿತನೃತ್ಯ, ಮನಸೆಳೆಯುವ ವೇಷಭೂಷಣ ಇವೆಲ್ಲ ಶ್ರೀ ಕೃಷ್ಣಪಾರಿಜಾತವನ್ನು ಉತ್ತರ ಕರ್ನಾಟಕದ ಮನೆ ಮನೆಯ ಪರಿಮಳದ ಪಾರಿಜಾತವಾಗಿಸಿದ ಅಂಶಗಳು. ಅಲ್ಲಿಂದ ಇಲ್ಲಿಯವರೆಗೆ ನೂರೈವತ್ತು ವರ್ಷಗಳವರೆಗೂ ಹೆಚ್ಚುಕಾಲ ಇದು ಜನಪದರ ಮನಸ್ಸು ಮತ್ತು ಭಾವಗಳನ್ನು ಆಳಿದೆ: ಮಾತ್ರವಲ್ಲ, ಇಂದೂ ಕೂಡ ಅದೇ ಪ್ರಭಾವ ಮತ್ತು ಪರಿಣಾಮಗಳನ್ನು ಪ್ರೇಕ್ಷಕ ವರ್ಗದಲ್ಲಿ ಬೀರುವಲ್ಲಿ ಯಶಸ್ವಿಯಾಗಿದೆ. ಸುಮಾರು ಒಂದೂವರೆ ಶತಮಾನದ ಕಾಲದ ಕೃಷ್ಣಪಾರಿಜಾತದ ವರ್ಣಮಯ ಇತಿಹಾಸದಲ್ಲಿ ಜನಮನದಲ್ಲಿ ಅಳಿಯದ ಅವಿಸ್ಮರಣೀಯ ನೆನಪಾಗಿ ಉಳಿದುಕೊಂಡಿರುವ ಮಹಾನ್ ಕಲಾಸಾಮ್ರಾಜ್ಞಿ ಕೌಜಲಗಿ ನಿಂಗವ್ವ. ಸಮಾಜದ ಅತ್ಯಂತ ಕೆಳವರ್ಗದಲ್ಲಿ ಹುಟ್ಟಿದ ನಿಂಗವ್ವ ಶ್ರೀಕೃಷ್ಣಪಾರಿಜಾತದ ಅನಧಿಕೃತ ಸಾಮ್ರಾಜ್ಞಿಯಾಗಿ ಮೆರೆದದ್ದು ದಂತಕತೆಯಷ್ಟೇ ರೋಚಕ ಮತ್ತು ಆಕರ್ಷಕ ಗಾಥೆ. ಬೆಳಗಾವಿ ಜಿಲ್ಲೆಯ ಗೋಕಾಕ್ ತಾಲೂಕಿನ ಕೌಜಲಗಿಯಲ್ಲಿ ಸುಮಾರು ೧೮೫೦ರಲ್ಲಿ ಜನಿಸಿದ ಕೌಜಲಗಿ ನಿಂಗವ್ವ ತನ್ನ ಕಲಾಬಿಜ್ಞತೆಯ ಕಾರಣದಿಂದ ತನ್ನ ಹುಟ್ಟೂರಿನ ಹೆಸರನ್ನು ಪಾರಿಜಾತ ರಂಗಭೂಮಿಯ ಇತಿಹಾಸದ ಪುಟಗಳಲ್ಲಿ ಚಿರಸ್ಥಾಯಿಯಾಗಿಸಿದವಳು. ನಿಮ್ನ ವರ್ಗದಲ್ಲಿ ಕಡುಬಡತನದಲ್ಲಿ ಅಂಧ ಸಂಪ್ರದಾಯಗಳ ಮೊಸಳೆ ಹಿಡಿತದಲ್ಲಿ ಹುಟ್ಟಿದ ಈಕೆ ಈ ಕಲೆಗೆ ಒಲಿದಿದ್ದು ಮತ್ತು ಆ ಮೂಲಕ ಈ ಕಲೆಗೆ ಬೆಲೆಯನ್ನು ತಂದುಕೊಟ್ಟದ್ದು ಈಗ

ಇತಿಹಾಸದ ಮಾತಾಗಿದೆ. ಅನಕ್ಷರಸ್ಥ ಮುಗ್ಧ ಕುಟುಂಬದಲ್ಲಿ ಹುಟ್ಟಿದರೂ ತನ್ನ ತಾಯಿಯ ಪ್ರೋತ್ಸಾಹದಿಂದ ಹಾಗೂ ತನ್ನಂಥ ಜೀವನವನ್ನು ತನ್ನ ಮಗಳು ಬದುಕದೆ ಸುಖ ಸಂತೋಷಗಳ ದಾರಿಯನ್ನು ಆಕೆ ತಿಳಿಯಲೆಂಬ ತಾಯಿಯ ಮಹದಾಸೆಯಿಂದ ಕೃಷ್ಣಪಾರಿಜಾತದ ತೆಕ್ಕೆಯಲ್ಲಿ ಸಿಕ್ಕಿಬಿದ್ದವಳು ನಿಂಗವ್ವ. ಯಾದವಾಡದ ಮಲಕಪ್ಪ ಮತ್ತು ಕುಲಗೋಡ ತಮ್ಮಣ್ಣ ಮುಂತಾದ ಪ್ರತಿಭಾವಂತ ರಂಗ ಪರಿಣತರ ಗರಡಿಯಲ್ಲಿ ಬೆಳೆದ ನಿಂಗವ್ವ ಅವರಿಂದ ಜನಪದ ಸಂಗೀತದ ಇಡಿ ಲೋಕವನ್ನೇ ಆತ್ಮಸಾತ್ ಮಾಡಿಕೊಂಡಳು. ಸ್ವತಃ ಕವಿಗಳು, ನಟರೂ, ಸಂಗೀತಗಾರರೂ ಆಗಿದ್ದ ಈ ಆದರ್ಶ ಗುರುಗಳ ಒಲುಮೆಯ ತೊಟ್ಟಿಲಲ್ಲಿ ಬೆಳೆದ ನಿಂಗವ್ವ ಜನಪದ ರಂಗಭೂಮಿ ಮೇಲೆ ಸತ್ಯಭಾಮೆಯಾಗಿ ಮೆರೆಯುತ್ತಾ ತನ್ನ ಅಭಿಜಾತ ಪ್ರತಿಭೆಯಿಂದ ಆ ರಂಗಲೋಕವನ್ನು ದಂಗುಬಡಿಸಿದರು. ಹೆಣ್ಣುಮಕ್ಕಳು ರಂಗಭೂಮಿ ಮೇಲೆ ಬರಲು ಅಳುಕುತ್ತಿದ್ದ ಮಡಿವಂತಿಕೆಯ ಪರಿಸರದಲ್ಲಿ ನಿಂಗವ್ವ ತನ್ನ ಮಧುರವಾದ ಕಂಠ, ಅಪಾರ ಪರಿಶ್ರಮದಿಂದ ಹೃದ್ಗತ ಮಾಡಿಕೊಂಡಿದ್ದ ನೂರಾರು ಬಗೆಯ ಜನಪದ ಹಾಗೂ ಕರ್ನಾಟಕ ಸಂಗೀತದ ರಾಗಗಳು, ಶ್ರದ್ಧಾಪೂರ್ವಕವಾಗಿ ಅಭ್ಯಾಸ ಮಾಡಿದ ಭಾಷಾ ಸಿದ್ಧಿಯ ಅರ್ಥಪೂರ್ಣ ಹಾಗೂ ಸಂದರ್ಭೋಚಿತ ಮಾತುಗಾರಿಕೆ, ಭಾವಪ್ರಕಟಣಾಕಾರಿಯಾದ ಅಭಿನಯ ಮುಂತಾದವುಗಳಿಂದ ಉತ್ತರ ಕರ್ನಾಟಕದ ಜನಮಾನಸವನ್ನು ಗೆದ್ದು ಕೃಷ್ಣಪಾರಿಜಾತಕ್ಕೆ ಅನನ್ಯ ಕೀರ್ತಿಯ ಕಿರೀಟವನ್ನು ತೊಡಿಸಿದಳು. ಬರಗಿ ರಾಚಯ್ಯ ಶಿವಗುರಿ, ಮಹಲಿಂಗಪುರದ ರಾಜೇಸಾಬ, ನಣದಿ ರಾಮಣ್ಣಾ, ಬರಗಿ ಅಪ್ಪಾಲಾಲ ಮುಂತಾದ ಅದ್ವಿತೀಯ ಕಲಾವಿದರ ಜೊತೆಯಲ್ಲಿ ನಟಿಸಿದ ನಿಂಗವ್ವ ಕಾಲಕ್ರಮೇಣ ಅವರೆಲ್ಲರನ್ನು ಮೀರಿಸಿ ಏಕಮೇವಾದ್ವಿತೀಯಳಾಗಿ ಮೆರೆದಳು. ಕೌಜಲಗಿ ನಿಂಗವ್ವ ಪಾತ್ರ ಕಟ್ಟುತ್ತಾಳೆಂದರೆ ಸಾವಿರ, ಸಾವಿರ ಸಂಖ್ಯೆಯಲ್ಲಿ ಪ್ರೇಕ್ಷಕರು ಮುಗಿಬೀಳುತ್ತಿದ್ದರು. ಆಕೆಯ ಹಾಡನ್ನು ಕೇಳುವುದು, ಆಕೆಯ ಪಟಪಟನೆ ಉದುರುವ ಭಾವಪೂರ್ಣ ಹಾಗೂ ತರ್ಕಬದ್ಧ ಮಾತನ್ನು ಆಲಿಸುವುದು ರಂಗದಲ್ಲಿ ಸಾಕ್ಷತ್ ಸತ್ಯಭಾಮೆಯೇ ಬಂದಳೆಂಬಂತೆ ಕಾಣುವ ಆಕೆಯ ಕಲಾ ವ್ಯಕ್ತಿತ್ವವನ್ನು ಆರಾಧಿಸುವುದು ತಮ್ಮ ಪೂರ್ವ ಜನ್ಮದ ಪುಣ್ಯವೆಂಬಂತೆ ಕಲಾಸಕ್ತರು ಕಿಕ್ಕಿರಿದು ಆಕೆ ಅಭಿನಯಿಸುವ ಪಾರಿಜಾತವನ್ನು ಆಸ್ವಾದಿಸುತ್ತಿದ್ದರು. ಆಕೆಯ ಕಾರಣದಿಂದಾಗಿಯೇ ಮತ್ತು ಸ್ಫೂರ್ತಿಯಿಂದಾಗಿಯೇ ನೂರಾರು ಪಾರಿಜಾತದ ಕಂಪನಿಗಳು ಉತ್ತರ ಕರ್ನಾಟಕದಲ್ಲಿ ಹುಟ್ಟಿಕೊಂಡವು. ಕೆಳವರ್ಗದ ಹೆಣ್ಣಾಗಿ ರಂಗಮಂಚವನ್ನೇರಿ ಸುಮಾರು ೬೦ ಕ್ಕೂ ಹೆಚ್ಚು ವರ್ಷಗಳ ಕಾಲ ತನ್ನ ಅಪೂರ್ವ ಕಲೆಯನ್ನು ಮೆರೆದದ್ದು ಒಂದು ಸಾಧನೆಯಾದರೆ, ಪುರುಷರೇ ಬೆರಳು ಕಚ್ಚುವಂತೆ ಪಾರಿಜಾತ ಕಂಪನಿಯನ್ನೇ ಕಟ್ಟಿ ನೂರಾರು ಕಲಾವಿದರಿಗೆ ಆಶ್ರಯವಿತ್ತು ತರಬೇತಿ ನೀಡಿ ಕಂಪನಿಯ ಒಡತಿಯಾದ ಸಾಧನೆಯೇ ಮತ್ತೊಂದು ಸಾಹಸದ ಕಥೆ. ಆಕೆಯ ಅಭಿನಯ

ನೈಪುಣ್ಯ, ಸಂಗೀತ ಪ್ರವೀಣತೆ ವಾಕ್ಶುದ್ಧಿ, ಸಹಕಲಾವಿದರನ್ನು ಮಕ್ಕಳಂತೆ ಸೋದರ ಸೋದರಿಯರಂತೆ ನಡೆಸಿಕೊಳ್ಳುತ್ತಿದ್ದ ಅಪಾರ ಮಾನವೀಯತೆ, ಕಷ್ಟನಷ್ಟಗಳನ್ನು ಲೆಕ್ಕಿಸದೇ ಕಂಪನಿಯನ್ನು ನಡೆಸಿದ ಕಾರ್ಯದಕ್ಷತೆ ಇಂದೂ ಕೂಡ ಉತ್ತರ ಕರ್ನಾಟಕದ ಕಲಾರಂಗದಲ್ಲಿ ಮನೆ ಮಾತಾಗಿದೆ. ಇಂತಹ ಅಪೂರ್ವ ಅಭಿಜಾತ ಜನಪದ ಕಲಾವಿದೆಯೊಬ್ಬಳ ಜೀವನ, ಸಾಧನೆಯ ಚಿತ್ರವನ್ನು ಈ ಕಿರುಹೊತ್ತಿಗೆಯ ಮೂಲಕ ನಮ್ಮ ಪ್ರಸಿದ್ಧ ಜನಪದ ವಿದ್ವಾಂಸರಲ್ಲಿ ಒಬ್ಬರಾದ ಡಾ|| ಶ್ರೀರಾಮ ಇಟ್ಟಣ್ಣನವರು ಇಲ್ಲಿ ಅತ್ಯಂತ ಅಚ್ಚುಕಟ್ಟಾಗಿ, ನಿಂಗವ್ವನ ವ್ಯಕ್ತಿತ್ವ ಓದುಗರ ಮನದಲ್ಲಿ ಕಡದು ಮೂಡುವಂತೆ ಚಿತ್ರಿಸಿದ್ದಾರೆ. ಕಲಾವಿದರ ಬಗೆಗಿನ ಆಳವಾದ ಅಂತಃಕರಣ ಶ್ರೀಕೃಷ್ಣಪಾರಿಜಾತದ ಬಗೆಗಿನ ಸ್ಥಲಸ್ಪರ್ಶಿಯಾದ ಅಭ್ಯಾಸ ಮತ್ತು ಕೌಜಲಗಿ ನಿಂಗವ್ವನ ಬಗೆಗಿನ ಗೌರವಗಳು ಇಲ್ಲಿ ಮುಪ್ಪರಿಯಾಗಿ ಚೊಕ್ಕ ಕೃತಿಯಾಗಿ ಮೂಡಿವೆ. ರೋಚಕ ಕಾದಂಬರಿಯೊಂದಕ್ಕೆ ವಸ್ತುವಾಗಬಹುದಾದ ಕಲಾವಿದೆ ಕೌಜಲಗಿ ನಿಂಗವ್ವನ ಜೀವನವನ್ನು ಈ ೪೧ ಪುಟಗಳ ಮಿತಿಯಲ್ಲಿ ಹರಳುಗೊಳಿಸಲು ಲೇಖಕರು ಪ್ರಯತ್ನಿಸಿ ಯಶಸ್ವಿಯಾಗಿದ್ದಾರೆ. ಇಂಥದೊಂದು ವಿಶಿಷ್ಟ ಕೃತಿಯನ್ನು ಬರೆದುಕೊಟ್ಟ ಡಾ|| ಶ್ರೀರಾಮ ಇಟ್ಟಣ್ಣ ಅವರಿಗೆ ಮತ್ತು ಅಚ್ಚುಕಟ್ಟಾಗಿ ಮುದ್ರಿಸಿಕೊಟ್ಟ ಅಬ್ಯಾಕಸ್ ಪ್ರಿಂಟರ್ಸ್ ಅವರಿಗೆ ಅಕಾಡೆಮಿ ಪರವಾಗಿ ಕೃತಜ್ಞತೆಗಳು.

**ಡಾ|| ಎಚ್.ಜೆ.ಲಕ್ಕಪ್ಪಗೌಡ**

ಅಧ್ಯಕ್ಷರು

# ಲೇಖಕನ ಮಾತು

ಕೌಜಲಗಿ ನಿಂಗವ್ವ ಶ್ರೀಕೃಷ್ಣ ಪಾರಿಜಾತ ರಂಗಭೂಮಿಯ ಆರಂಭದ ಕಲಾವಿದೆ. ನಟಿಯಾಗಿ ಕಂಪನಿಯೊಂದರ ಒಡತಿಯಾಗಿ ಜೀವನ ಸವೆಸಿದ ಕೌಜಲಗಿ ನಿಂಗವ್ವನ ಬದುಕು ಪಾರಿಜಾತ ರಂಗಭೂಮಿಯ ಇತಿಹಾಸದಲ್ಲಿ ಒಂದು ರೋಚಕ ಅಧ್ಯಾಯ. ಇಷ್ಟೊಂದು ಹೆಸರುವಾಸಿಯಾಗಿರುವ ನಿಂಗವ್ವನ ವಿಷಯಕ್ಕೆ ಇಂದು ಬರೆಯಲು ಹೊರಟರೆ ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ – ಮುಖ್ಯವಾಗಿ ದಾಖಲೆಗಳ ಕೊರತೆಯಿದೆ.

ಕೌಜಲಗಿ ನಿಂಗವ್ವನ ಕಲೆ, ಸ್ವಭಾವ, ಜೀವನಕ್ಕೆ ಸಂಬಂಧಿಸಿದ ಅಂಶಗಳಿಗೆಲ್ಲಾ ನಾನು ಹಿರಿಯ ತಲೆಮಾರಿನ ವ್ಯಕ್ತಿಗಳ ಹೇಳಿಕೆಗಳನ್ನು ಆಧಾರವಾಗಿಟ್ಟುಕೊಂಡಿದ್ದೇನೆ. ಈ ಹೇಳಿಕೆಗಳಲ್ಲಿಯೇ ಭಿನ್ನಾಭಿಪ್ರಾಯ ಇರಬಹುದು, ನನ್ನ ಗಮನಕ್ಕೆ ಬಾರದೇ ಕೆಲವು ಅಂಶಗಳು ಉಳಿದುಕೊಂಡಿರಬಹುದು. ನಿಂಗವ್ವನ ಜೀವನೇತಿಹಾಸಕ್ಕೆ ಸಂಬಂಧಪಟ್ಟಂತೆ ಅನೇಕ ಅನುಮಾನಗಳಿವೆ. ಅವುಗಳಿಗೆಲ್ಲ ಈ ಸಣ್ಣ ಪುಸ್ತಕದಲ್ಲಿ ಪರಿಹಾರ ದೊರೆತಿದೆಯೆಂದಲ್ಲ. ಇರುವ ಅನೇಕ ಅನುಮಾನಗಳ ಮಧ್ಯೆಯೂ ನಿಂಗವ್ವನ ಬಹುದೊಡ್ಡ ವ್ಯಕ್ತಿತ್ವವನ್ನು ಈ ಮೂಲಕ ಕ್ರೋಢೀಕರಿಸಲು ಯತ್ನಿಸಿದ್ದೇನೆ.

ನಮ್ಮ ಜನಪದ ಕಲಾವಿದರನೇಕರು ಕಲೆಗಾಗಿ ಆಯುಷ್ಯವನ್ನೇ ಕಳೆದು ಈ ಸಂಪತ್ತನ್ನು ಬೆಳೆಯಿಸಿದರು, ಅವರು ಚರಿತ್ರೆಯಾಗಿ ಉಳಿಯಬೇಕು. ಈ ನಿಟ್ಟಿನಲ್ಲಿ ಜನಪದ ಕಲಾವಿದರ ಚರಿತ್ರಕೋಶದ ಸಂಪುಟಗಳು ನಿರ್ಮಾಣಗೊಳ್ಳಬೇಕಿರುವುದು ಇಂದಿನ ಅಗತ್ಯವಾಗಿದೆ.

ಕೌಜಲಗಿ ನಿಂಗವ್ವನ ಜೀವನ ವಿಷಯಕ್ಕೆ ಅನೇಕ ಹಿರಿಯರು, ಹಿರಿಯ ಕಲಾವಿದರು ತಮಗೆ ಗೊತ್ತಿರುವುದನ್ನೆಲ್ಲ ಹೇಳಿದ್ದಾರೆ. ಇವರೆಲ್ಲರ ಉಪಕಾರವನ್ನು ಸ್ಮರಿಸುತ್ತೇನೆ. ಡಾ.ಜೀ.ಶಂ. ಪರಮಶಿವಯ್ಯನವರು ತಾವು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಗೆ ಅಧ್ಯಕ್ಷರಾಗಿದ್ದಾಗ ಈ ಪುಸ್ತಕ ರಚನೆಯನ್ನು ನನಗೆ ಒಪ್ಪಿಸಿದರು. ಈಗ ಅಕಾಡೆಮಿಯ ಅಧ್ಯಕ್ಷರಾಗಿರುವ ಡಾ.ಎಚ್.ಜೆ. ಲಕ್ಕಪ್ಪಗೌಡ, ರಿಜಿಸ್ಟ್ರಾರ್ ಎಂ. ಎಸ್. ಸಿದ್ದೇಗೌಡ ಹಾಗೂ ಸರ್ವಸದಸ್ಯರ ಆಸ್ಥೆಯಿಂದ ಪ್ರಸ್ತುತ ಗ್ರಂಥ ಹೊರಬರುತ್ತಿದೆ. ಇವರೆಲ್ಲರಿಗೂ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

ಬೀಳಗಿ — ಶ್ರೀರಾಮ ಇಟ್ಟಣ್ಣವರ

# ಪರಿವಿಡಿ

| | | |
|---|---|---|
| ೧. | ನಿಂಗವ್ವನ ಪ್ರವೇಶಕ್ಕೆ ಮೊದಲು | ... ೧ |
| ೨. | ಹುಟ್ಟು-ಬಾಲ್ಯ ಮುಂತಾಗಿ | ... ೫ |
| ೩. | ಯಾದವಾಡ ಮಲಕಪ್ಪನ ಶಿಷ್ಯಳಾಗಿ | ... ೯ |
| ೪. | ನಿಂಗವ್ವನ ಕಂಪನಿ : ಐತಿಹಾಸಿಕ ನಡೆ | ... ೧೪ |
| ೫. | ನಿಂಗವ್ವನ ಕಂಪನಿ : ಪ್ರಯೋಗಶೀಲತೆ | ... ೨೩ |
| ೬. | ಕಲಾವಿದೆಯಾಗಿ ನಿಂಗವ್ವ | ... ೨೯ |
| ೭. | ನಿಂಗವ್ವನ ಸ್ವಭಾವ | ... ೩೪ |
| ೮. | ನಿಂಗವ್ವನ ವಂಶ | ... ೪೦ |
| ೯. | ಸಮಾರೋಪ | ... ೪೩ |
| ೧೦. | ಸಹಾಯಕ ಸಾಹಿತ್ಯ | ... ೪೫ |

# ನಿಂಗವ್ವನ ಪ್ರವೇಶಕ್ಕೆ ಮೊದಲು

ಶ್ರೀಕೃಷ್ಣ ಪಾರಿಜಾತ ಉತ್ತರ ಕರ್ನಾಟಕದ ಜನಪ್ರಿಯ ಜನಪದ ರಂಗಮಾಧ್ಯಮ. ನೂರಾರು ಕಂಪನಿಗಳು ಈ ರಂಗಭೂಮಿ ಬೆಳೆಯಲು ಕಾರಣವಾಗಿವೆ. ಸಾವಿರಾರು ಜನ ಕಲಾವಿದರು ಇದಕ್ಕೆ ಅಂದಚೆಂದ ತುಂಬಲು ಶ್ರಮಿಸಿದ್ದಾರೆ, ಸಮರ್ಪಣಾಭಾವದಿಂದ ದುಡಿದಿದ್ದಾರೆ.

ಕುಲಗೋಡ ತಮ್ಮಣ್ಣ, ಯಾದವಾಡ ಮಲಕಪ್ಪ, ಹುಕ್ಕೇರಿ ಸಿದ್ರಾಮಪ್ಪ, ಬಡಕುಂದ್ರಿ ಬಸಪ್ಪ, ಕೌಜಲಗಿ ನಿಂಗವ್ವ, ಬಾರ್ಕಿ ನೀಲವ್ವ, ಸಿದ್ದಯ್ಯ ಚಟ್ಟಿಮಠ ಇವರೆಲ್ಲ ಪ್ರಾರಂಭದ ಕಲಾವಿದರು. ಇವರು ಊರಿದ ಬೀಜ ಮಹಾವೃಕ್ಷವಾಗಿ ಬೆಳೆಯುತ್ತ ಶ್ರೀ ಕೃಷ್ಣ ಪಾರಿಜಾತವೇ ಕನ್ನಡ ಜನಪದ ರಂಗಭೂಮಿಯಲ್ಲಿ ಒಂದು ವಿಶಿಷ್ಟ ಪ್ರಕಾರವೆನಿಸಿಕೊಂಡಿತು. ಮುಂಚಿನ ನೀರು, ಸತ್ವಗಳನ್ನು ಹೀರಿಕೊಳ್ಳುತ್ತ ಎಷ್ಟೊಂದು ಜನ ಪಾರಿಜಾತಕ್ಕೆ ಹೊಸಕಳೆ ತಂದುಕೊಟ್ಟು, ಹೊಸಹೊಸ ಆವಿಷ್ಕಾರಗಳನ್ನು ತುಂಬಿದರು! ನಣದಿ ರಾಮಣ್ಣ (ರಾಮಚಂದ್ರ, ಕೃಷ್ಣಾಜಿ, ಸಾವಂತ ಸೌ.ನಣದಿ), ಸವದಿ ಮಲ್ಲಯ್ಯ ಮೋಳೆ ರಾಮಣ್ಣ, ಸವದಿ ಚೂಡಪ್ಪ, ಧರ್ಮಣ್ಣಗೌಡರು, ತಾಳದ ಮಲ್ಲಪ್ಪ ಮುಂತಾದವರು ಪಾರಿಜಾತವನ್ನು ದ್ವಿತೀಯ ಘಟ್ಟದಲ್ಲಿ ಅತ್ಯಂತ ಜನಪ್ರಿಯಗೊಳಿಸಿದ ಕಲಾವಿದರು. ಜಮಖಂಡಿ ಅಪ್ಪಾಲಾಲ, ಲೋಕಾಪುರ ದೇಶಪಾಂಡೆ, ಟಕ್ಕಳಕೆ–ವಿಠ್ಠಲ ಬರಗಿ ರಾಚಯ್ಯ, ಸೂಳಿಕೇರಿ ಯಮನವ್ವ, ಲೋಕಾಪುರ ಯಲ್ಲವ್ವ ಮುಂತಾದ ಕಲಾವಿದ–ಕಲಾವಿದೆಯರು ಇಂದಿಗೂ ಪಾರಿಜಾತ ರಂಗಭೂಮಿ ಜೀವಂತವಾಗಿರಲು ಕಾರಣರಾಗಿದ್ದಾರೆ. ಇವರೆಲ್ಲರ ಮಧ್ಯದಲ್ಲಿ ಕೌಜಲಗಿ ನಿಂಗವ್ವ ವಿಶಿಷ್ಟವಾದ ವ್ಯಕ್ತಿತ್ವ ಪಡೆದವಳು, ತನ್ನದೇ ಆದ ಮಾಸದ ಹೆಸರು ಮೂಡಿಸಿ ಹೋದವಳು.

ಕೌಜಲಗಿ ನಿಂಗವ್ವ ಶ್ರೀಕೃಷ್ಣ ಪಾರಿಜಾತದ ಆಟ್ಟವನ್ನು ಹತ್ತಲು ಪ್ರಾರಂಭಿಸಿದ ದಿನಗಳಲ್ಲಿ ಈ ರಂಗಭೂಮಿಯ ಮೇಲೆ ಕಣ್ಣುಹಾಸಿದರೆ ತುಂಬಾ ಕೌತುಕಪೂರ್ಣ ವಿಷಯಗಳು ಎದುರಾಗುತ್ತವೆ. ಈ ಹಂತದಲ್ಲಿ ನಿಂಗವ್ವ ಪಡೆದ ಪ್ರಭಾವವನ್ನು ಅರಿತುಕೊಂಡರೆ ತರುವಾಯದ ದಿನಗಳಲ್ಲಿ ಅವಳು ಬೆಳೆಯಿಸಿಕೊಂಡ ಸ್ವತಂತ್ರ ವ್ಯಕ್ತಿತ್ವವೇನು, ತನ್ಮೂಲಕ ಈ ರಂಗಪ್ರಕಾರಕ್ಕೆ ಸಲ್ಲಿಸಿರುವ ಕಾಣಿಕೆಯೇನು ಎಂಬುದು ಸ್ವಯಂ ವೇದ್ಯವಾಗುತ್ತದೆ. ಅವಳು ಚಿಕ್ಕಂದಿನಲ್ಲಿ ಪಡೆದ ಪರಿಸರ ಅವಳ ಮುಂದಿನ

ಕಲಾಜೀವನದಲ್ಲಿ ಬಗೆದಷ್ಟೂ ನೀರು ಕೊಡುವ ಒರತೆಯಾಯಿತು ಎಂಬುದಕ್ಕಾದರೂ ಆ ಹಿನ್ನೆಲೆಯನ್ನು ನಾವು ಗಮನಿಸಬೇಕಾಗುತ್ತದೆ. ನಿಂಗವ್ವನ ಈ ಆರಂಭವನ್ನು ನೋಡುವುದೆಂದರೆ ಪಾರಿಜಾತ ರಂಗಭೂಮಿಯ ಪ್ರಥಮ ಘಟ್ಟವನ್ನು ಅವಲೋಕಿಸುವುದೆಂದೇ ಅರ್ಥ.

ಪಾರಿಜಾತದ ಇತಿಹಾಸ ಮೂರು ಹಂತಗಳಲ್ಲಿ ತೋರುತ್ತದೆ.

೧. ಆರಂಭದ ಕಾಲ
೨. ಮಧ್ಯಕಾಲ
೩. ಆಧುನಿಕ ಕಾಲ.

ಕೌಜಲಗಿ ನಿಂಗವ್ವನ ಪಾರಿಜಾತ ಕಲಾವೈಭವವೆಲ್ಲ ಶಿಖರ ಮುಟ್ಟಿದ ವಿಷಯ ಮಧ್ಯಕಾಲದಲ್ಲಿ ಸಮಾವೇಶಗೊಂಡರೂ ಅವಳ ಆದಿಮ ಹೆಜ್ಜೆಗಳು 'ಆರಂಭದ ಕಾಲ' ದಲ್ಲೇ ದೊರೆಯುತ್ತವೆ. ಈ ಹಂತದಲ್ಲಿ ಅವಳ ಪ್ರಾರಂಭದ ಕಲಾಜೀವನದ ಮೇಲೆ ಅತ್ಯಂತ ಪ್ರಭಾವ ಬೀರಿದ ಇಬ್ಬರು ವ್ಯಕ್ತಿಗಳೆಂದರೆ ಕುಲಗೋಡ ತಮ್ಮಣ್ಣ ಮತ್ತು ಯಾದವಾಡ ಮಲಕಪ್ಪ.

ಅಪರಾಳ ತಮ್ಮಣ್ಣನು ಕಾವ್ಯದಲ್ಲಿ ಬರೆದ ಶ್ರೀ ಕೃಷ್ಣ ಪಾರಿಜಾತದ ಕಥೆಯನ್ನು ರಂಗಭೂಮಿಗೆ ಅಳವಡಿಸಿದವನು ಕುಲಗೋಡ ತಮ್ಮಣ್ಣ – ೧೯ನೆಯ ಶತಮಾನದ ಮಧ್ಯಭಾಗದಲ್ಲಿ. ಕುಲಗೋಡ ತಮ್ಮಣ್ಣ ಕಾವ್ಯರಚನಾ ಶಕ್ತಿಯನ್ನು ಪಡೆದವನಾಗಿದ್ದ; ಸಂಗಡವೇ ಅಭಿನಯ ಕಲೆಯನ್ನೂ ಬಲ್ಲವನಾಗಿದ್ದ. ಇವನು ಅಪರಾಳ ತಮ್ಮಣ್ಣನ ಕಾವ್ಯದ ವಿಷಯವನ್ನು ತನ್ನ ಆಟಕ್ಕೆ ಆಧಾರವಾಗಿಟ್ಟುಕೊಂಡರೂ ರಂಗದ ಮೇಲೆ ಅದನ್ನು ಯಥಾವತ್ತಾಗಿ ನಿರೂಪಿಸಲಿಲ್ಲ. ಕುಲಗೋಡ ತಮ್ಮಣ್ಣ ಆಟದ ಪ್ರಾರಂಭದಲ್ಲಿ ತಾನು ಸ್ವತಃ ಐದು ದೃಶ್ಯಗಳನ್ನು ಆಟಕ್ಕೆ ಸಂಯೋಜಿಸಿದ. ತಾನು ಬರೆದ ಪದ್ಯಗಳನ್ನು ಈ ದೃಶ್ಯಗಳಿಗೆ ಅಳವಡಿಸಿದ, ಹೀಗಾಗಿ ಪಾರಿಜಾತದ ಕಥೆಯನ್ನು ಆಟಕ್ಕೆ ತೊಡಗಿಸಬೇಕೆಂಬ ಹಂಬಲದಿಂದಾಗಿ, ದೃಶ್ಯಗಳನ್ನು ಸಂಯೋಜಿಸಿದ್ದರಿಂದಾಗಿ ಕುಲಗೋಡ ತಮ್ಮಣ್ಣ ಆಟದ ನಿರ್ಮಾತೃವಾಗಿ ಈ ಪರಂಪರೆಯಲ್ಲಿ ಮೂಲಸೆಲೆಯಾಗಿ ತೋರುತ್ತಾನೆ. ಕುಲಗೋಡ ತಮ್ಮಣ್ಣನ ಪದ್ಯಗಳಿಗೆ ಅವನ ಅಧಿದೈವ ಕುಲಗೋಡ ಬಲಭೀಮ (ಮಾರುತಿ–ದೇವರು)ನ ಅಂಕಿತವಿರುವ ಪದ್ಯಗಳು ಈ ದೃಶ್ಯಗಳಲ್ಲಿ ಕಾಣಸಿಗುವದರಿಂದ ತಮ್ಮಣ್ಣ ಆಟದ ನಿರ್ಮಾಣದಲ್ಲಿ ಬಹು ಮುಖ್ಯ ವ್ಯಕ್ತಿಯಾಗಿ ಕಾಣುತ್ತಾನೆ.

ಇದೇ ಹೊತ್ತಿಗೆ ಯಾದವಾಡ ಮಲಕಪ್ಪನೆಂಬ ಕಲಾವಿದ ಪ್ರಮುಖನಾಗಿ ಪ್ರಸ್ತಾಪಿಸಲ್ಪಡುತ್ತಾನೆ. ಕುಲಗೋಡ ತಮ್ಮಣ್ಣ, ಯಾದವಾಡ ಮಲಕಪ್ಪ ಇಬ್ಬರೂ ಕೂಡಿಯೇ ಇಡೀ ಆಟವನ್ನು ರೂಪಿಸಿದರು. ಈ ಕೆಲಸ ನಡೆದುದು ಕುಲಗೋಡದಲ್ಲಿಯೇ ಯಾದವಾಡದಲ್ಲಿಯೇ ಎಂಬ ವಿಷಯದಲ್ಲಿ ಭಿನ್ನಾಭಿಪ್ರಾಯಗಳಿವೆ. ಆದರೆ ಒಂದು ಮಾತು

ಸ್ಪಷ್ಟ. ಪ್ರಾರಂಭದಲ್ಲಿ ಪಾರಿಜಾತ ಸಂಗೀತದ ವಿಷಯದಲ್ಲಿ ಮಲಕಪ್ಪನ ಪಾಲು ದೊಡ್ಡದು.

ಆಟ ರೂಪುಗೊಂಡ ಮೇಲೆ ಮೊಟ್ಟಮೊದಲ ಪ್ರಯೋಗ ಎಲ್ಲಿ ಆಯಿತು? ಈ ಮೊಟ್ಟ ಮೊದಲ ಪ್ರಯೋಗದ ಕಲಾವಿದರಾರು? ಎಂಬ ವಿಷಯ ಇನ್ನೂ ಅಸ್ಪಷ್ಟವಾಗಿದೆ. ತರುವಾಯದ ದಿನಗಳಲ್ಲಿ ಕುಲಗೋಡ ತಮ್ಮಣ್ಣನ ನೇತೃತ್ವದಲ್ಲಿ ಆಟ ಮುಂದುವರಿದುದನ್ನು ಅನೇಕ ಜನ ಹಿರಿಯರು ಹೇಳುತ್ತಾರೆ. ಕುಲಗೋಡದ ಅನೇಕ ಹಿರಿಯರು ಹೇಳುವಂತೆ ತಮ್ಮಣ್ಣ ಭಾಗವತ ಪಾತ್ರ ಮಾಡುತ್ತಿದ್ದ, ಕೌಜಲಗಿ ನಿಂಗವ್ವ, ಬಾರ್ಕಿ ನೀಲವ್ವ, ಹುಕ್ಕೇರಿ ಸಿದ್ರಾಮಪ್ಪ ಮುಂತಾದವರು ಇತರ ಕಲಾವಿದರಾಗಿದ್ದರು.

ಕುಲಗೋಡ ತಮ್ಮಣ್ಣನ ನೇತೃತ್ವದಲ್ಲಿ ಆಟ ಮಾಡಿದಾಗ ನಿಂಗವ್ವ ತೀರ ಚಿಕ್ಕವಳಾಗಿದ್ದಳು. ಆಟ ಮಾಡುತ್ತಾಳೆ ಎಂದರೆ ನಿಂಗವ್ವನಿಗೆ ಆಗ ಕನಿಷ್ಟ ಪಕ್ಷ ಹನ್ನೆರಡರಿಂದ ಹದಿಮೂರು ವರ್ಷವಾದರೂ ಆಗಿರಬೇಕು, ೧೮೭೦ರ ಸುಮಾರಿಗೆ ಕುಲಗೋಡ ತಮ್ಮಣ್ಣನೊಂದಿಗೆ ಆಟವಾಡಿದ್ದಾಳೆ.

ಮುಂದೆ ವಿವರಣೆಯನ್ನು ನೋಡುವಂತೆ ಯಾದವಾಡ ಮಲಕಪ್ಪನ ಶಿಷ್ಯಳಾದ ಕೌಜಲಗಿ ನಿಂಗವ್ವ ಯಾದವಾಡದಲ್ಲಿಯೂ ಕೂಡ ಪ್ರಾರಂಭದ ದಿನಮಾನಗಳಲ್ಲಿ ಆಟವಾಡಿದ್ದಾಳೆ. ಯಾದವಾಡದ ಈರಯ್ಯ ಚಟ್ಟಿಮಠ ಅವರು ಹೇಳಿದಂತೆ ನಿಂಗವ್ವ ಯಾದವಾಡದಲ್ಲಿ ಆಟ ಕಲಿಯುತ್ತಿದ್ದಳು. ಆಗ ಅವಳ ಸಂಗಡ ಕೃಷ್ಣ ಪಾತ್ರ ಮಾಡಿದವನು ಸಿದ್ದಯ್ಯ ಚಟ್ಟಿಮಠ. ಆದರೆ ಇದು ಯಾವ ವರ್ಷವೆಂಬುದು ಗೊತ್ತಾಗುವುದಿಲ್ಲ. 'ಕಲಿಯುತ್ತಿದ್ದಳು' ಎಂದರೆ ಇದೂ ೧೮೭೦ ಸುಮಾರಿಗೇ ಇರಬೇಕು.

ಹೀಗೆ ನಿಂಗವ್ವ ಕುಲಗೋಡ ಮತ್ತು ಯಾದವಾಡ ಎರಡೂ ಊರುಗಳಲ್ಲಿ ಪ್ರಾರಂಭದ ದಿನಗಳಲ್ಲಿ ಕಲಿತಿದ್ದಾಳೆ, ಆಟವಾಡಿದ್ದಾಳೆ. ಕುಲಗೋಡದಲ್ಲಿ ತಮ್ಮಣ್ಣ ನೇತೃತ್ವವನ್ನು ವಹಿಸಿದ್ದರೆ ಯಾದವಾಡದಲ್ಲಿ ಮಲಕಪ್ಪನ ನೇತೃತ್ವವಿರುತ್ತಿತ್ತು. ಕೌಜಲಗಿ ನಿಂಗವ್ವ ಮಲಕಪ್ಪನ ಶಿಷ್ಯಳಾಗಿದ್ದರೂ ಕೊನೆಯವರೆಗೂ ಮಲಕಪ್ಪನ ಕಂಪನಿಯಲ್ಲಿಯೇ ಅಥವಾ ಆತನ ಅಧೀನದಲ್ಲಿಯೇ ಆಟವಾಡಿದಂತೆ ತೋರುವುದಿಲ್ಲ. ಯಾಕೆಂದರೆ ೧೮೯೦ರ ಸುಮಾರಿಗೆ ಮಲಕಪ್ಪನ ಆಟ ಬೆಟಗೇರಿಗೆ ಬಂದಾಗ ಅದರಲ್ಲಿ ಕೌಜಲಗಿ ನಿಂಗವ್ವ ಇರಲಿಲ್ಲ. ಯಾದವಾಡ ಮಲಕಪ್ಪನೂ ಕಂಪನಿ ಮಾಡಿದ್ದ ಎಂಬ ವಿಷಯವನ್ನು ಬೆಟಗೇರಿಯ ಶ್ರೀ ಬ. ಶ್ರೀ ಪಾಟೀಲರವರು ಕೊಟ್ಟು ೧೮೯೦ರ ಸುಮಾರಿಗೆ ಮಲಕಪ್ಪ ಬೆಟಗೇರಿಗೆ ಆಟ ತೆಗೆದುಕೊಂಡು ಬಂದದ್ದನ್ನು ಹೇಳಿ ಪಾತ್ರ ವಿವರವನ್ನೂ ಕೂಡ ಒದಗಿಸುತ್ತಾರೆ.

ಯಾದವಾಡ ಮಲಕಪ್ಪ – ಭಾಗವತ
ಸತ್ತಿಗೇರಿ ರುದ್ರಯ್ಯ – ರುಕ್ಮಿಣಿ
ಕುಲಗೋಡ ಭೀಮವ್ವ – ಸತ್ಯಭಾಮ
ಸತ್ತಿಗೇರಿಯವನೊಬ್ಬ – ಕೃಷ್ಣ

ಕೌಜಲಗಿ ನಿಂಗವ್ವ ೧೯೦೪-೦೫ರ ಸುಮಾರಿಗೆ ಕೌಜಲಗಿಯನ್ನು ಬಿಟ್ಟು ಮಹಾಲಿಂಗಪುರಕ್ಕೆ ಶಾಶ್ವತವಾಗಿ ವಲಸೆಹೋದಳು. ಕುಲಗೋಡ ತಮ್ಮಣ್ಣನ ಮರಣಾನಂತರ ಆಕೆ ಎಲ್ಲಿ ಎಲ್ಲಿ ಆಟವಾಡಿದಳು, ಯಾರೊಂದಿಗೆ ಆಟವಾಡಿದಳು ಮುಂತಾದ ವಿಷಯಗಳು ಈ ಅವಧಿಯವರೆಗೆ ಅಸ್ಪಷ್ಟವಾಗಿಯೇ ಇವೆ. ಬೇರೆ ಬೇರೆಯವರ ಕಂಪನಿಗಳಲ್ಲಿ ಆಟವಾಡುತ್ತ ಗಳಿಸಿದ ಅನುಭವದಿಂದ ಕ್ರಮೇಣ ತನ್ನದೇ ಆದ ಕಂಪನಿಯೊಂದನ್ನು ಕಟ್ಟಿಕೊಳ್ಳಬೇಕೆಂಬ ಹಂಬಲ ಬಹುಶಃ ಆಕೆಗೆ ಕೌಜಲಗಿಯಲ್ಲಿರುವಾಗಲೇ ಉಂಟಾಗಿರಬೇಕು. ಮಹಾಲಿಂಗಪುರ ರಾಜೇಸಾಬನಂಥ ಒಳ್ಳೆಯ ಕಲಾವಿದ ಕೃಷ್ಣ ಪಾತ್ರಕ್ಕೆ ದೊರೆತ ಮೇಲೆ ತನ್ನದೇ ಆದ ಕಂಪನಿಯೊಂದನ್ನು ೧೯೦೦ ರ ಸುಮಾರಿಗೆ ಕೌಜಲಗಿಯಲ್ಲಿಯೇ ಕಟ್ಟಿಕೊಂಡಳು.

# ಹುಟ್ಟು - ಬಾಲ್ಯ ಮುಂತಾಗಿ

ಕೌಜಲಗಿ ನಿಂಗವ್ವ ಬೆಳಗಾವಿ ಜಿಲ್ಲೆಯ ಗೋಕಾಕ ತಾಲೂಕಿನ ಕೌಜಲಗಿಯಲ್ಲಿ ೧೮೫೭ರ ಸುಮಾರಿಗೆ[೧] ಹುಟ್ಟಿದಳು. ಇವಳು ತನ್ನ ಮಧ್ಯ ವಯಸ್ಸಿನಲ್ಲಿ ಮಹಾಲಿಂಗಪುರಕ್ಕೆ ಹೋಗಿ ಅಲ್ಲಿಯೇ ಮೆಟ್ಟು ಮಾಡಿದ್ದರಿಂದ ತರುವಾಯ 'ಮಹಾಲಿಂಗಪುರ ನಿಂಗವ್ವ' ಆದಳು. 'ನಿಂಗಾಸಾನಿ' ಎಂದೂ ಜನ ಪ್ರೀತಿಯಿಂದ ಕರೆಯುತ್ತಿದ್ದರು. ಈ ಮೂರು ಹೆಸರುಗಳು ಬಳಕೆಯಲ್ಲಿದ್ದರೂ ಅವಳ ಹುಟ್ಟೂರು ಹಿಡಿದು 'ಕೌಜಲಗಿ ನಿಂಗವ್ವ' ಎಂಬ ಹೆಸರೇ ಹೆಚ್ಚು ಪ್ರಚಾರದಲ್ಲಿದೆ. ಇವಳ ತಾಯಿ ಡೊಂಬರ ಜಾತಿಗೆ ಸೇರಿದ ಹೆಣ್ಣು ಮಗಳು. ನಿಂಗವ್ವನ ತಾಯಿ ಓಕುಳಿಯಲ್ಲಿ ನೀರು ಉಗ್ಗಿಸಿಕೊಳ್ಳಲು ಹೋಗುತ್ತಿದ್ದಳು.[೨] ಕೌಜಲಗಿಯಲ್ಲಷ್ಟೇ ಅಲ್ಲ, ಪ್ರತಿ ವರ್ಷ ಬೆಟಗೇರಿಯ ಹತ್ತಿರ ನಿಂಗಾಪುರಕ್ಕೂ ಇದಕ್ಕಾಗಿ ಬರುತ್ತಿದ್ದಳಂತೆ.

ಮೇಲುವರ್ಗದವರು ನಿಮ್ನ ವರ್ಗದವರೊಂದಿಗೆ ತೋರ್ಪಡಿಸಿಕೊಳ್ಳುತ್ತಿದ್ದ ಈ ಬಗೆಯ ಮೋಜುಗಳು ನಿಂಗವ್ವನ ತಾಯಿಯನ್ನು ಗಾಸಿಗೊಳಿಸಿರಲು ಸಾಕು. ಉಚ್ಚಕುಲದವರನ್ನು ಎದುರು ಹಾಕಿಕೊಳ್ಳಲಾರದ್ದಕ್ಕೋ ಹೊಟ್ಟೆಯ ಪಾಡಿಗಾಗಿಯೋ ಇಂಥ ಅನೇಕ ಪ್ರಸಂಗಗಳಲ್ಲಿ, ಉತ್ಸವಗಳಲ್ಲಿ ಅಸಹಾಯಕಳಾಗಿ ನಿಂಗವ್ವನ ತಾಯಿ ನಡೆದುಕೊಂಡಿರಬಹುದು. ಆದರೆ ಮಗಳನ್ನು ಮಾತ್ರ ತನ್ನಂತೆಯೇ ಬಾಳಗೊಡಲು ಇಚ್ಛಿಸಲಿಲ್ಲ. ಮಗಳು ಚೂಟಿಯಾಗಿದ್ದಳು, ಹಾಡುತ್ತಿದ್ದಳು, ಅಭಿನಯ ಕಲೆಯಿತ್ತು. ಆದ್ದರಿಂದ ಅವಳನ್ನು ವಿಶಿಷ್ಟ ರೀತಿಯಲ್ಲಿ ಬೆಳೆಯಿಸಬೇಕೆಂದು ಆಶಿಸಿ ಯೋಚನೆಯ ಬೇರೊಂದು ದಿಕ್ಕು ಹಿಡಿದಳು. ಹಾಡುವ ಮಗಳು ಒಬ್ಬ ಗುರುವಿನಡಿಯಲ್ಲಿ ಬೆಳೆಯಬೇಕೆಂದು ಇಚ್ಛಿಸಿದಳು ನಿಂಗವ್ವನ ತಾಯಿ. ಹೀಗೆ ಅವಳು ಯೋಚಿಸುತ್ತಿರುವಾಗ ಕಣ್ಣಿಗೆ ಬಿದ್ದವನು ಯಾದವಾಡ ಮಲಕಪ್ಪ. ಬಹುಶಃ ಈತನ ಕೈಯಲ್ಲಿ ತನ್ನ ಮಗಳನ್ನು

---

೧. ಕಲಾಜ್ಯೋತಿ : ದಿ. ಕೌಜಲಗಿ ನಿಂಗವ್ವ, ಬಾಳೇಶ ಲಕ್ಷೆಟ್ಟಿ. ಪು. ೧.

೨. ಇದು ಉತ್ತರ ಕರ್ನಾಟಕದಲ್ಲಿ ರೂಢಿಯಲ್ಲಿರುವ ಒಂದು ಸಂಪ್ರದಾಯ. ಓಕುಳಿಯೆಂಬುದು ಮಾರುತಿ ದೇವರ ಹೆಸರಿನಲ್ಲಿ ನಡೆಯುವ ಉತ್ಸವ. ಗುಡಿಯ ಮುಂದಿರುವ ಹೊಂಡದಲ್ಲಿ ನೀರು ತುಂಬಿ ಆ ನೀರನ್ನು ಊರಿನ ತರುಣರು ನಿಮ್ನ ವರ್ಗದ ಹೆಣ್ಣು ಮಕ್ಕಳಿಗೆ ಗೊಜ್ಜುವುದು ಈ ಓಕುಳಿಯ ಪ್ರಮುಖವಾದ ಒಂದು ಭಾಗ.

ಕೊಟ್ಟರೆ ತನಗಿಂತಲೂ ಭಿನ್ನಳಾಗಿ ಇವಳು ಬೆಳೆಯುವುದು ಸಾಧ್ಯವಿದೆಯೆಂದರಿತ ಆ ತಾಯಿ ಮಗಳೊಂದಿಗೆ ಯಾದವಾಡಕ್ಕೆ ಮಲಕಪ್ಪನಲ್ಲಿಗೆ ಬಂದಳು. ಯಾದವಾಡಕ್ಕೂ ಕೌಜಲಗಿಗೂ ಸುಮಾರು ೧೨ ಕಿ.ಮೀ ಅಂತರ.

ತನ್ನ ಮಗಳಿಗೆ ಸಂಗೀತ, ಪಾರಿಜಾತ ಕಲಿಸಬೇಕೆಂದು ಮಲಕಪ್ಪನನ್ನು ಕೇಳಿಕೊಂಡಳು. ಅವಳ ಕೋರಿಕೆಯಂತೆ ಮಲಕಪ್ಪ ನಿಂಗವ್ವನನ್ನು ಶಿಷ್ಯಳನ್ನಾಗಿ ಸ್ವೀಕರಿಸಿ ಅವಳಿಗೆ ದಿನಾಲು ಸಂಗೀತ ಹೇಳಿಕೊಡತೊಡಗಿದ; ಪಾರಿಜಾತದ ಮಾತು, ಹಾವಭಾವಗಳನ್ನೂ ಕಲಿಸಿಕೊಟ್ಟ. ನಿಂಗವ್ವನ ಅಕ್ಷರಾಭ್ಯಾಸದ ಬಗೆಗೆ ಭಿನ್ನಭಿಪ್ರಾಯಗಳಿವೆ. ನಿಂಗವ್ವನೊಂದಿಗೆ ಆಟವಾಡಿದ ಪ್ರಸಿದ್ಧ ಕೃಷ್ಣ ಪಾತ್ರಧಾರಿ ನಣದಿ ರಾಮಣ್ಣ ನಿಂಗವ್ವ ನಿರಕ್ಷರಿಯೆಂಬ ವಾದವನ್ನು ಮಂಡಿಸುತ್ತಾರೆ. 'ನಿಂಗವ್ವ ಶಾಲೆ ಕಲಿತವಳಲ್ಲ, ಅವಳಿಗೆ ಓದುಬರಹ ಬರುತ್ತಿರಲಿಲ್ಲ; ಸಹಿ ಮಾಡಲೂ ಕೂಡ ಬರುತ್ತಿರಲಿಲ್ಲ. ಹೆಬ್ಬಟ್ಟು ಒತ್ತುತ್ತಿದ್ದಳು. ಅನೇಕ ಸಲ ಬರೆದಿಟ್ಟ ಚೋಪಡಿ ಮುಂದಿಟ್ಟುಕೊಂಡು ನಾನೇ ಅವಳಿಗೆ ಹಾಡು ಮಾತು ಕಲಿಸಿದ್ದೇನೆ.' ಅವಳು ನಿರಕ್ಷರಿಯೆಂಬ ಮಾತನ್ನೇ ಅವಳ ಕಂಪನಿಯಲ್ಲಿ ಕೃಷ್ಣ ಪಾತ್ರ ಮಾಡಿದ ಇನ್ನೊಬ್ಬ ಕಲಾವಿದ ಬುದ್ನಿಯ ಈರಪ್ಪ ಜಾಡರ ಎತ್ತಿಹಿಡಿಯುತ್ತಾರೆ. ಇವರ ಮಾತನ್ನು ಒಪ್ಪಿಕೊಳ್ಳದೆ ನಿಂಗವ್ವ ಓದುಬರಹ ಕಲಿತವಳಾಗಿದ್ದಳು ಎಂದು ವಾದಿಸುವ ವ್ಯಕ್ತಿಗಳೂ ಇದ್ದಾರೆ. 'ನಣದಿ ರಾಮಣ್ಣನಿಗೇ ಕನ್ನಡ ಬರುತ್ತಿರಲಿಲ್ಲ, ನಿಂಗವ್ವನೇ ಅವನಿಗೆ ಕನ್ನಡ ಬರೆದು ಕಲಿಸಿದಳು' ಎಂದು ಕೌಟಕೊಪ್ಪ ರಾಮಣ್ಣ ಹೇಳುತ್ತಾರೆ. ತಮ್ಮ ಪ್ರಾಥಮಿಕ ಅಭ್ಯಾಸದಲ್ಲಿ ಮರಾಠಿ (ಮೋಡಿ) ಹಾಗೂ ಸಂಸ್ಕೃತ ಓದಿದರು, ಸಂಸ್ಕೃತ ಶ್ಲೋಕಗಳನ್ನು ಲೀಲಾಜಾಲವಾಗಿ ಹೇಳಿ ಅವುಗಳ ಅರ್ಥವಿವರಣೆಯನ್ನು ಸಮರ್ಪಕ ರೀತಿಯಲ್ಲಿ ನೀಡುತ್ತಿದ್ದರು.[೩] ಎಂಬ ಇನ್ನೊಂದು ಹೇಳಿಕೆಯೂ ಕೌಟಕೊಪ್ಪ ರಾಮಣ್ಣ ಆವರ ಅಭಿಪ್ರಾಯವನ್ನು ಸಮರ್ಥಿಸುತ್ತದೆ. ಬಾಳೇಶ ಲಕ್ಕಟ್ಟಿಯವರನ್ನು ಹೊರತುಪಡಿಸಿ ಇದುವರೆಗಿನ ವಿವರಣೆ ನೀಡಿದವರೆಲ್ಲ ನಿಂಗವ್ವನ ಕಂಪನಿಯಲ್ಲಿ ನಿಂತು ಅವಳ ಜೀವನವನ್ನು ಸಮೀಪದಿಂದ ಕಂಡವರು. ಹೀಗಾಗಿ ಯಾರ ಮಾತನ್ನು ಅಲ್ಲಗಳೆಯುವುದೂ ಕಷ್ಟವೆನಿಸುತ್ತದೆ.

ಕೌಜಲಗಿಯ ವಾಯ್.ಜಿ.ಕೌಜಲಗಿಯವರು–ಇವರು ನಿಂಗವ್ವನ ಸಂಬಂಧಿಕರು–ನಿಂಗವ್ವ ಶಾಲೆ ಕಲೆಯದಿದ್ದರೂ ಸಂಸ್ಕೃತ ಮರಾಠಿ ಚೆನ್ನಾಗಿ ಮಾತನಾಡುತ್ತಿದ್ದಳು ಎಂಬುದಾಗಿ ಹೇಳಿದ್ದಾರೆ. ಕೌಜಲಗಿಯವರ ಈ ಮಾತನ್ನು ಹೀಗೆ ಅರ್ಥೈಸಬಹುದು: ಸಂಸ್ಕೃತ ಶ್ಲೋಕಗಳನ್ನು ನಿಂಗವ್ವ ಬಾಯಿ ಪಾಠ ಮಾಡಿ ಹೇಳುತಿದ್ದಿರಬಹುದು, ಮರಾಠಿಯನ್ನು ಮಾತನಾಡುತ್ತಿದ್ದಿರಬಹುದು.

ಮಗಳು ತನಗಿಂತಲೂ ಭಿನ್ನಳಾಗಬೇಕು, ಸುಂದರವಾದ ಬದುಕನ್ನು ಸಾಗಿಸಬೇಕು ಎಂಬ ಕನಸನ್ನು ಕಂಡಿದ್ದ ನಿಂಗವ್ವನ ತಾಯಿ, ಅವಳನ್ನು ಶಾಲೆಗೆ ಕಳಿಸಿರಬಹುದಲ್ಲ

---

೩. ಕಲಾಜ್ಯೋತಿ : ದಿ. ಕೌಜಲಗಿ ನಿಂಗಮ್ಮ, ಬಾಳೇಶ ಲಕ್ಕಟ್ಟಿ, ಪು ೧–೨.

ಎನ್ನಿಸುತ್ತದೆ. ಬಹಳ ಕಲಿತಿರಲಿಕ್ಕಿಲ್ಲ; ಹಳ್ಳಿ ಮಟ್ಟದಲ್ಲಿ ಒಂದು ಅಥವಾ ಎರಡನೆಯ ತರಗತಿಯವರೆಗೆ ಕಲಿತಿರಬಹುದು. ಅವಳ ಕಲಿಕೆಯ ಮಾಧ್ಯಮ ಮರಾಠಿ ಇರುವುದು ಸಾಧ್ಯವಿದೆ. ಅಂದು ಮುಂಬಯಿ ಕರ್ನಾಟಕದ ಶಿಕ್ಷಣವೆಲ್ಲ ಮರಾಠಿ ಮಾಧ್ಯಮದಲ್ಲಿ ಇದ್ದುದನ್ನು ಸ್ಮರಿಸಿಕೊಳ್ಳಬೇಕು. ಸಂಸ್ಕೃತವನ್ನು ಓದಿಕೊಂಡಿದ್ದಳು, ಸಂಸ್ಕೃತದಲ್ಲಿ ಮಾತನಾಡುತ್ತಿದ್ದಳು ಎಂಬುದು ದೂರದ ಮಾತಾಗುತ್ತದೆ. ಬಹುಶಃ ನಿಂಗವ್ವ ಪಾರಿಜಾತ ಆಟದಲ್ಲಿ ಸಂಸ್ಕೃತ ಅರ್ಥವನ್ನು ಹೇಳಿ ಅರ್ಥವಿವರಣೆಯನ್ನು ನೀಡುತ್ತಿದ್ದ ಪರಿಯನ್ನು ಕಂಡು ಅವಳು ಸಂಸ್ಕೃತವನ್ನು ಕಲಿತಿದ್ದಳು ಎಂಬ ಮಾತು ಹುಟ್ಟಿಕೊಂಡಿರಬಹುದು. ಆದರೆ ಒಳ್ಳೆಯ ಸ್ಮರಣಶಕ್ತಿಯಿದ್ದವರಿಗೆ ಸಂಸ್ಕೃತ ಶ್ಲೋಕಗಳನ್ನು ಬಾಯಿಪಾಠ ಮಾಡುವುದಾಗಲಿ ಅರ್ಥವಿವರಣೆ ಕೊಡುವುದಾಗಲಿ ಕಷ್ಟದ ಮಾತೆನಿಸುವುದಿಲ್ಲ. ಇಂದಿಗೂ ಪಾರಿಜಾತ ರಂಗಭೂಮಿಯಲ್ಲಿ ಸಂಸ್ಕೃತ ಶ್ಲೋಕಗಳನ್ನು ಹೇಳುವ ಅರ್ಥೈಸುವ ಸಾಕಷ್ಟು ಕಲಾವಿದರಿದ್ದಾರೆ. ಇವರಾರಿಗೂ ಸಂಸ್ಕೃತವನ್ನು ಬಳಕೆಯ ಮಾತಿನಂತೆ ಮಾತನಾಡಲು ಬರುವುದಿಲ್ಲ; ಇವರಾರೂ ಕ್ರಮವಾದ ಸಂಸ್ಕೃತ ವಿದ್ಯಾಭ್ಯಾಸವನ್ನು ಪಡೆದವರಲ್ಲ.

ನಿಂಗವ್ವ ಬ್ರಹ್ಮಚಾರಿಣಿಯಾಗಿಯೇ ಉಳಿದಿದ್ದಳು ಅನ್ನುವ ಮಾತನ್ನು ನಣಾದಿ ರಾಮಣ್ಣಾರನ್ನು ಹೊರತುಪಡಿಸಿ ಬಹುತೇಕ ಜನ ಹೇಳುತ್ತಾರೆ. ಈ ವಿಷಯದಲ್ಲಿ ನಣಾದಿ ರಾಮಣ್ಣ ಕೊಡುವ ವಿವರಣೆ ಬೇರೆಯೇ ಇದೆ. ಬೆಳಗಾವಿಯ ವಕೀಲರೊಬ್ಬರು ನಿಂಗವ್ವನ ಹಾಡು–ಕಲೆ ನೋಡಿ ಮೆಚ್ಚಿಕೊಂಡು ಮದುವೆಯಾದರು. ಅಷ್ಟೇ ಅಲ್ಲ, ನಿಂಗವ್ವನಿಗೆ ಹಾಡು, ಮಾತು ಕಲಿಸುವುದು ಮುಂತಾಗಿ ಒಂದು ಬಗೆಯ ಸಂಸ್ಕಾರವನ್ನೇ ಈ ವಕೀಲರು ಕೊಟ್ಟರು. ಈ ವೈವಾಹಿಕ ಸಂಬಂಧ ಬಹಳ ದಿನ ನಡೆಯಲಿಲ್ಲ. ತೀರ ಸಾಮಾನ್ಯ ಕುಟುಂಬ–ಪರಿಸರದಲ್ಲಿ ಹುಟ್ಟಿ ಬೆಳೆದ ನಿಂಗವ್ವನಿಗೆ ವಕೀಲರೊಬ್ಬರ ಮನೆಯಲ್ಲಿ ಹೇಗೆ ನಡೆದುಕೊಳ್ಳಬೇಕೆಂಬ ವಿಷಯದಲ್ಲಿ ದಿಗ್ಭ್ರಮೆಯುಂಟಾಗಿರಬೇಕು ಅಥವಾ ವರ್ಣ ವರ್ಗಗಳ ಸಮಸ್ಯೆ ವಕೀಲರ ಬಂಧುಗಳಿಗೆ ಉಂಟಾಗಿ ಘರ್ಷಣೆ ನಡೆದಿರಬೇಕು. ಅಂತೂ ಏನೋ ಕಾರಣವಾಗಿ ಇವರ ಈ ಸಾಂಸಾರಿಕ ಸಂಬಂಧ ಆರೇ ತಿಂಗಳಲ್ಲಿ ಮುಕ್ತಾಯ ಹೊಂದಿತು. ಈ ಬೇರ್ಪಡೆಗೆ ಖಚಿತ ಕಾರಣ ಸ್ಪಷ್ಟವಾಗುವುದಿಲ್ಲ. ನಿಂಗವ್ವನ ಈ ವೈವಾಹಿಕ ಸಂಬಂಧವನ್ನು ಅರಿತಿದ್ದ ನಣಾದಿ ರಾಮಣ್ಣಾರಿಗೂ ವಕೀಲರು ಮತ್ತು ನಿಂಗವ್ವರ ಸಂಬಂಧ ಕಡಿದುಹೋದುದಕ್ಕೆ ನಿಶ್ಚಿತ ಕಾರಣ ಗೊತ್ತಿಲ್ಲ.

ಬೆಳಗಾವಿಯ ಈ ಸಂಬಂಧ ಮುರಿದ ಮೇಲೆ ನಿಂಗವ್ವ ಬ್ರಹ್ಮಚರ್ಯವನ್ನೇ ಕೈಗೊಂಡಳು. ಅವಳೊಂದಿಗೆ ಆಟವಾಡಿದ ನಣಾದಿ ರಾಮಣ್ಣಾ, ಬರಗಿ ರಾಚಯ್ಯಾ, ಬುದ್ನಿ ಈರಪ್ಪ, ಕೌಟಕೊಪ್ಪ ರಾಮಣ್ಣ ಮುಂತಾದ ಹಿರಿಯ ಕಲಾವಿದರೆಲ್ಲ ನಿಂಗವ್ವನ ಪರಿಶುದ್ಧ ಜೀವನವನ್ನು ಮುಕ್ತ ಕಂಠದಿಂದ ಹೊಗಳುತ್ತಾರೆ. ಕೌಜಲಗಿಗೆ ಸಮೀಪವಾದ ಬೆಟಗೇರಿಯಲ್ಲಿ ಹುಟ್ಟಿ ಬೆಳೆದ ಆನಂದ ಕಂಡರೂ ನಿಂಗವ್ವನ ಚಾರಿತ್ರ್ಯವನ್ನು ಚೆನ್ನಾಗಿಯೇ ಅರಿತುಕೊಂಡಿದ್ದರು. ಅವಳು ಕೊನೆಯವರೆಗೂ ಶುದ್ಧಳಾಗಿಯೇ ಉಳಿದಳೆಂದು

ಅಭಿಪ್ರಾಯ ಪಡುತ್ತಾರೆ. ಈ ಗಟ್ಟಿತನಕ್ಕೆ ಎರಡು ನಿಟ್ಟಿನ ಕಾರಣಗಳನ್ನು ಕೊಡಬಹುದು. ಮೊದಲನೆಯದಾಗಿ ಕನಸುಣಿಯಾಗಿ ಸುಂದರ ದಾಂಪತ್ಯವನ್ನು ಕಲ್ಪಿಸಿಕೊಂಡಿದ್ದ ನಿಂಗವ್ವನನ್ನು ನಾವಿಂದು ಕಾಣಲರಿಯದ, ಊಹಿಸಲಾರದ ಯಾವುದೋ ಒಂದು ಆಘಾತ ಘಾಸಿಗೊಳಿಸಿದೆ. ಈ ಪೆಟ್ಟೇ ಅವಳನ್ನು ಗಟ್ಟಿಗೊಳಿಸಿದೆ. ಎರಡನೆಯದಾಗಿ ಪರಮಾತ್ಮನ ಸಂಕೀರ್ತನವೆನಿಸಿದ ಶ್ರೀ ಕೃಷ್ಣ ಪಾರಿಜಾತದ ಭಕ್ತಿ ಹಾಗೂ ಆಧ್ಯಾತ್ಮಿಕ ನಿಲುವು ನಿಂಗವ್ವನನ್ನು ಸಾಂಸಾರಿಕ ವಿಷಯಗಳಿಂದ ವಿಮುಖಳನ್ನಾಗಿ ಮಾಡಿದ್ದರೆ ಆಶ್ಚರ್ಯವಿಲ್ಲ.

ನಿಂಗವ್ವ ಯಾವುದೇ ಬಗೆಯ ಐಹಿಕ ವ್ಯಾಮೋಹವನ್ನು ಅಂಟಿಸಿಕೊಂಡವಳಲ್ಲ. ಅವಳ ನಿರಂತರ ಗಮನ, ಚಿಂತೆ ಇದ್ದುದೆಲ್ಲ ತನ್ನ ಕಂಪನಿಯ ಬಗ್ಗೆ, ತನ್ನ ಕಂಪನಿಯಲ್ಲಿ ಮಡಿಯುತ್ತಿದ್ದ ಕಲಾವಿದರ ಬಗ್ಗೆ. ತನ್ನ ಕಂಪನಿಯೇ ತನಗೊಂದು ಸಂಸಾರವಾಗಿ ಬಾಳಿದವಳು ನಿಂಗವ್ವ. ಶ್ರೀ ಕೃಷ್ಣ ಪಾರಿಜಾತಕ್ಕೇ ಇಡಿಯಾಗಿ ತನ್ನನ್ನು ಸಮರ್ಪಿಸಿಕೊಂಡಳು, ಅದನ್ನೇ ತನ್ನ ಸಂಸಾರವೆಂದು ಬಾಳಿದಳು.

# ಯಾದವಾಡ ಮಲಕಪ್ಪನ ಶಿಷ್ಯಳಾಗಿ

ಕೌಜಲಗಿ ನಿಂಗವ್ವ ಕುಲಗೋಡ ತಮ್ಮಣ್ಣನ ಗರಡಿಯಲ್ಲಿಯೇ ತಯಾರಾದವಳು ಎಂಬ ನಂಬಿಕೆ ಲಿಖಿತವಾಗಿಯೇ ಅನೇಕ ಕಡೆಗಳಲ್ಲಿ ಉಳಿದುಕೊಂಡು ಬಂದಿದೆ.

ಕುಲಗೋಡ ತಮ್ಮಣ್ಣನ ಮೇಳದಲ್ಲಿ ನುರಿತ ನಟಿಯಾದ ಕೌಜಲಗಿ ನಿಂಗವ್ವನು ಮುಂದೆ ತನ್ನದೇ ಆದ 'ಆಟದ ಮೇಳ' ಸ್ಥಾಪಿಸಿದಳು.[೧] ಕುಲಗೋಡ ತಮ್ಮಣ್ಣ ಪಾರಿಜಾತ ಬಯಲಾಟವನ್ನು ಸಿದ್ಧಪಡಿಸುವುದರ ಜೊತೆಗೆ ಅದರ ಪ್ರಚಾರ ಕಾರ್ಯಕ್ಕೂ ದೊಡ್ಡ ಸಹಾಯ ಮಾಡಿದ, ತಾನೇ ಭಾಗವತನಾಗಿ ಪಾರಿಜಾತ ಮೇಳವೊಂದನ್ನು ಕಟ್ಟಿದ. ಈ ಮೇಳದಲ್ಲಿ ಪ್ರಸಿದ್ಧಿ ಪಡೆದವರೆಂದರೆ ಕೌಜಲಗಿ ನಿಂಗವ್ವ ಮತ್ತು ಬಡಕುಂದ್ರಿ ಬಸಪ್ಪ.[೨] ಕುಲಗೋಡ ತಮ್ಮಣ್ಣನ ಪಾರಿಜಾತ ಆಟವು ಯೋಗ್ಯವಾದ ನಟವರ್ಗದೊಂದಿಗೆ ರಂಗದ ಮೇಲೆ ಬಂದು ಸರ್ವಜನ ರಂಜಕವಾಗಿ ವಿಖ್ಯಾತಿಯನ್ನು ಪಡೆಯಿತು. ತಮ್ಮಣ್ಣನೇ ಭಾಗವತ, ಹುಕ್ಕೇರಿ ಸಿದ್ಧರಾಮಪ್ಪ, ಕೌಜಲಗಿ ನಿಂಗಾಸಾನಿ, ಸತ್ತಿಗೇರಿ ರುದ್ರಯ್ಯ ಮೊದಲಾದ ಸಂಗೀತ ಲಯಗಾರರು ಪಾತ್ರಧಾರಿಗಳು[೩] ಕುಲಗೋಡ ತಮ್ಮಣ್ಣನು ನಿಂಗಾಸಾನಿಯಂತಹ ಸ್ತ್ರೀ ಕಲಾವಿದರನ್ನು ಪ್ರಥಮ ಸಲ ಕನ್ನಡ ಜಾನಪದ ರಂಗಭೂಮಿಯ ಮೇಲೆ ತಂದುದೂ ಅಲ್ಲಲ್ಲಿ ನಾಟಕಗಳಲ್ಲಿ ಬರುವಂತಹ ಲಘು ಸಂಗೀತವನ್ನು ಅಳವಡಿಸಿದುದೂ......... ಮುಂತಾದವು ಸಹ ಶ್ರೀ ಕೃಷ್ಣ ಪಾರಿಜಾತದ ಜನಪ್ರಿಯತೆಗೆ ಕಾರಣವಾದವು ಎಂಬುದನ್ನು ಮರೆಯುವ ಹಾಗಿಲ್ಲ[೪]–ಇವರೆಲ್ಲರ ಅಭಿಪ್ರಾಯಗಳನ್ನು ಕ್ರೋಢೀಕರಿಸಿದರೆ ನಿಂಗವ್ವ, ಕುಲಗೋಡ ತಮ್ಮಣ್ಣನ ಕಂಪನಿಯಲ್ಲಿ ಪಾತ್ರಮಾಡುತ್ತ ಕೇವಲ ಅವನ ನಿರ್ದೇಶನದಲ್ಲಿ ಪಳಗಿದಳು ಎಂಬ ಅರ್ಥ ಹೊರಡುತ್ತದೆ. ಆದರೆ ಸತ್ಯಸಂಗತಿ ಬೇರೆ ತೆರನಾಗಿಯೇ ಇದೆ.

ನಿಂಗವ್ವ ಗೋಕಾಕ ತಾಲೂಕಿನ ಯಾದವಾಡ ಮಲಕಪ್ಪನ ಶಿಷ್ಯಳು. ಇದನ್ನು ಯಾದವಾಡದ ಹಿರಿಯ ತಲೆಮಾರಿನ ಅನೇಕ ಜನ ಹೇಳುತ್ತಾರೆ. ಅಷ್ಟೇ ಅಲ್ಲ, ಬರಗಿ

---

೧. ಅಪರಾಳ ತಮ್ಮಣ್ಣ ಕೃತ ಶ್ರೀ ಕೃಷ್ಣ ಪಾರಿಜಾತ : ಸಂ. ಆರ್.ಜಿ. ಕುಲಕರ್ಣಿ, ಪು. ೯೦.
೨. ಕುಲಗೋಡ ತಮ್ಮಣ್ಣ ಕೃತ ಶ್ರೀ ಕೃಷ್ಣ ಪಾರಿಜಾತ : ಸಂ. ಡಾ. ಎಂ.ಎಸ್. ಸುಂಕಾಪುರ, ಪು.೨೦
೩. ಕನ್ನಡ ಜಾನಪದ ಸಾಹಿತ್ಯ : ಡಾ. ಬೆಟಗೇರಿ ಕೃಷ್ಣಶರ್ಮ, ಪು. ೯೮
೪. ಸಾಧನೆ ೬–೨ ಬಿ.ಬಿ. ಮಹಿಷವಾಡಿ, ಪು. ೯೬

ರಾಚಯ್ಯ ನಣದಿ ರಾಮಣ್ಣ, ಕೌಟಕೊಪ್ಪ ರಾಮಣ್ಣ, ಮಹಾಲಿಂಗಪುರದ ಮುರಿಗೆಪ್ಪರಂಥ ಹಿರಿಯ ಕಲಾವಿದರೆಲ್ಲ ನಿಂಗವ್ವ ಯಾದವಾಡ ಮಲಕಪ್ಪನ ಶಿಷ್ಯಳೆಂಬುದನ್ನು ಖಚಿತಪಡಿಸುತ್ತಾರೆ.

ಮಲಕಪ್ಪ ಯಾದವಾಡದವ, ಕುಲವೃತ್ತಿಯಾಗಿ ಹೂ ಹಂಚುತ್ತಿದ್ದ ಈತ ಹೂಗಾರ ಮನೆತನದವನು – ಮಲಕಪ್ಪ ಹೂಗಾರ. ಹೂ ಹಂಚುವುದರಿಂದಲೇ ಜೀವನ ನಿರ್ವಹಣೆ ಸಾಧ್ಯವಾಗದ್ದರಿಂದ ಇವನು ಅಕ್ಕಿ ವ್ಯಾಪಾರವನ್ನೂ ಮಾಡುತ್ತಿದ್ದ. ಕುಳ್ಳನಾಗಿದ್ದ ಈತ ಅಕ್ಷರ ಜ್ಞಾನವನ್ನು ಪಡೆದವನಾಗಿದ್ದ. ತಿಪ್ಪಣ್ಣ ಅಮರಾಣಿ (ಯಾದವಾಡ) ಎನ್ನುವವರು ಅವನ ಸಾಕ್ಷರತೆಯನ್ನು ಕುರಿತಾಗಿ ಸಾಕ್ಷಿ ಒದಗಿಸುತ್ತಾರೆ. ತಿಪ್ಪಣ್ಣನವರ ಮುಂದೆಯೇ ಒಂದು ಘಟನೆ ನಡೆಯಿತಂತೆ: ಮಲಕಪ್ಪನಿಗೆ ಯಾರೋ ಐದು ರೂಪಾಯಿ ಕೊಡಬೇಕಾಗಿತ್ತು. 'ನಾನು ಕೊಟ್ಟದ್ದೇನೆ' ಅಂದ ಅವನು. 'ಇಲ್ಲ ನಾನು ಚೋಪಡಿಯಲ್ಲಿ ಬರೆದಿಟ್ಟದ್ದೇನೆ ನೀನು ಕೊಟ್ಟಿಲ್ಲ' ಎಂದನಂತೆ ಮಲಕಪ್ಪ. ಮಲಕಪ್ಪ ಸಂಗೀತದಲ್ಲಿ ನಿಷ್ಣಾತನಾಗಿದ್ದ. ಅವನು ಹಾಡುಗಳನ್ನೂ ಬರೆಯುತ್ತಿದ್ದ. ಈ ಕುರಿತಾಗಿ ಪದ್ಯಾರ್ಥವೊಂದನ್ನು ಯಾದವಾಡದ ಶ್ರೀ ವ್ಹಿ.ಕೆ. ಗುಡಿ ಎನ್ನುವವರು ಒದಗಿಸುತ್ತಾರೆ.

ಕದಾ ಹಾಕಿಕೊಂಡ ಪದಾ ಮಾಡತಿದ್ದ<br>
ಹೂಗಾರ ಮಲಕಪ್ಪ

– ಹೀಗೆ ಅಕ್ಷರವಂತನಾಗಿದ್ದ, ಸಂಗೀತಗಾರನಾಗಿದ್ದ, ಪದ್ಯರಚನಾ ಶಕ್ತಿಯಿದ್ದ ಮಲಕಪ್ಪ ಅನೇಕ ಹುಡುಗರಿಗೆ ಪಾರಿಜಾತವನ್ನು ಕಲಿಸಲು ಪ್ರಯತ್ನಪಡುತ್ತಿದ್ದನಂತೆ. ಮಲಕಪ್ಪನಿಗೆ, ಬೇರೆಯವರಿಗೆ ಪಾರಿಜಾತ ಕಲಿಸಬೇಕೆನ್ನುವ ಹಂಬಲವಿರುವಾಗಲೇ ನಿಂಗವ್ವನ ತಾಯಿ ನಿಂಗವ್ವನನ್ನು ಶಿಷ್ಯಳನ್ನಾಗಿ ಸ್ವೀಕರಿಸಲು ಹೇಳಿ ಯಾದವಾಡಕ್ಕೆ ತಂದು ಒಪ್ಪಿಸಿದಳು.

ಮಲಕಪ್ಪ ಪ್ರಯತ್ನಪಟ್ಟ ಹುಡುಗರು ಬಹಳ ಜನ ಕಲಿಯಲಿಲ್ಲ; ಮೂವರು ಮಾತ್ರ ಪರಿಣಿತರಾದರು. ೧. ಲಚ್ಚಪ್ಪ ಶೂರ್ಪಾಲಿ ಸಾ.ಕಾಖಂಡಕಿ ೨. ಸತ್ತಿಗೇರಿ ಸ್ವಾಮಿ ೩. ಕೌಜಲಗಿ ನಿಂಗವ್ವ – ಇವರೇ ಆ ಮೂವರು. ಮಲಕಪ್ಪನ ಕೈಯಲ್ಲಿ ತಯಾರಾದ ನಿಂಗವ್ವ ಕೊನೆಯವರೆಗೂ ಅವನಲ್ಲಿಟ್ಟ ಗುರುಭಾವನೆಯನ್ನು ಬಿಟ್ಟುಕೊಡಲಿಲ್ಲ. ಅಷ್ಟೇ ಅಲ್ಲ, ಅನೇಕ ಸಲ ರಂಗದ ಮೇಲೆಯೇ ತಾನು ಯಾದವಾಡ ಮಲಕಪ್ಪನ ಶಿಷ್ಯಳೆಂಬುದನ್ನು ಹೇಳುತ್ತಿದ್ದಳಂತೆ. ನಿಂಗವ್ವ ಯಾದವಾಡಕ್ಕೆ ಆಟವಾಡಲು ಬಂದಾಗಲೆಲ್ಲ ಮಲಕಪ್ಪ ತನ್ನ ಪಾರಿಜಾತ ಗುರುವೆಂದು ಅಭಿಮಾನದಿಂದ ಹೇಳಿ ಅಟ್ಟದ ಮೇಲೆ ಕರೆಯಿಸುತ್ತಿದ್ದಳು. ಅಟ್ಟದ ಮೇಲೆ ಒಂದು ಕುರ್ಚಿ ಹಾಕಿ ಕೂಡ್ರಿಸಿ ಮಾಲೆ ಹಾಕಿ ವಲ್ಲಿ, ಪಟಕ ಆಹೇರಿ ಮಾಡಿ ನಮಸ್ಕರಿಸುತ್ತಿದ್ದಳು. ಈ ಮಾತನ್ನು ಮನದಂದರೆ ನಿಂಗವ್ವನ ಗುರುಭಕ್ತಿ ಸ್ವಯಂ ವೇದ್ಯವಾಗುತ್ತದೆ. ಯಾದವಾಡ ಮಲಕಪ್ಪ ಕುಲಗೋಡ ತಮ್ಮಣ್ಣನ

ಶಿಷ್ಯ ಎಂಬ ಮಾತನ್ನು ನಣದಿ ರಾಮಣ್ಣ ಹೇಳುತ್ತಾರೆ. ಯಾದವಾಡ ಮಲಕಪ್ಪ ಕುಲಗೋಡ ತಮ್ಮಣ್ಣನ ಪಶ್ಚಾತ್ (ತರುವಾಯ) ಎಂದು ಬರಗಿ ರಾಚಯ್ಯನವರು ಹೇಳುತ್ತಾರೆ. ಕೌಜಲಗಿ ನಿಂಗವ್ವ ಮಲಕಪ್ಪನ ಶಿಷ್ಯಳು ಎನ್ನುವುದನ್ನು ಈಗಾಗಲೇ ದೃಢಪಡಿಸಲಾಗಿದೆ. ಈಗ ಕುಲಗೋಡ ತಮ್ಮಣ್ಣನ ಶಿಷ್ಯಳು ನಿಂಗವ್ವ ಎಂಬುದು ಸುಳ್ಳಾಗಿ ಗುರುಪರಂಪರೆ ಈ ಕೆಳಗಿನಂತಾಗುತ್ತದೆ:

ಕುಲಗೋಡ ತಮ್ಮಣ್ಣ

↓

ಯಾದವಾಡ ಮಲಕಪ್ಪ

↓

ಕೌಜಲಗಿ ನಿಂಗವ್ವ

ಕೌಜಲಗಿ ನಿಂಗವ್ವ ಮಲಕಪ್ಪನಲ್ಲಿ ಸಂಗೀತ ಕಲಿತಳು, ಪಾರಿಜಾತ ಕಲಿತಳು. ಮಲಕಪ್ಪ ನಿಂಗವ್ವನಿಗೆ ಕಲಿಸುತ್ತಿದ್ದ ಕಾಲದಲ್ಲಿ ಹಾಡು ಮಾತುಗಳನ್ನು ಹೇಗೆ ಜೋಡಿಸುತ್ತಿದ್ದಿರಬಹುದು ಎಂಬ ವಿಷಯಕ್ಕಾಗಲಿ, ಮಲಕಪ್ಪ ನಿಂಗವ್ವನೊಂದಿಗೆ ಅಥವಾ ಇತರ ಕಲಾವಿದರೊಂದಿಗೆ ವ್ಯವಹರಿಸುತ್ತಿದ್ದ ರೀತಿಗಾಗಲಿ ಇಂದು ನಮಗೆ ಯಾವ ಲಿಖಿತ ದಾಖಲೆಗಳಿಲ್ಲ. ಇವು ನಾಶಗೊಂಡಿರುವ ಬಗೆಗೆ ಮಲಕಪ್ಪನ ಸಂಬಂಧಿ ಯಾದವಾಡದ ಮಲ್ಲಪ್ಪ ಹಣಮಪ್ಪ ಹೂಗಾರ ಎನ್ನುವವರು ಮಲಕಪ್ಪನ ದತ್ತಕ ಮಗನ ಪ್ರಸ್ತಾಪ ಮಾಡುತ್ತಾರೆ. ಯಾದವಾಡ ಮಲಕಪ್ಪನಿಗೆ ಮಕ್ಕಳಿರಲಿಲ್ಲ. ಸವದಿಯ ದೂರದ ಸಂಬಂಧಿಯೊಬ್ಬನನ್ನು ದತ್ತಕ ತೆಗೆದುಕೊಂಡಿದ್ದ. ಈ ಮಗನು ಎಲ್ಲ ಆಸ್ತಿಯನ್ನು ಮಾರಿಕೊಂಡು ಹೋದ. ಮಲಕಪ್ಪ ಅನೇಕ ಪುಸ್ತಕಗಳನ್ನೂ ಹಾಡಿನ ಜೋಪಡಿಗಳನ್ನೂ ಸಂಗ್ರಹಿಸಿಟ್ಟಿದ್ದ. ಈ ದತ್ತಕ ಮಗನು ಈ ಎಲ್ಲ ಪುಸ್ತಕ, ಜೋಪಡಿಗಳನ್ನು ಕಿರಾಣಿ ಅಂಗಡಿಗೆ ರದ್ದಿಹಾಕಿ ಬಿಟ್ಟ! ಈ ಬಗೆಯ ಸಾಂಸ್ಕೃತಿಕ ನಾಶದ ಅಡಿಯಲ್ಲಿ ಎಷ್ಟೊಂದು ದಾಖಲೆಗಳು ಮುಚ್ಚಿ ಹೋದವೋ! ಶ್ರೀ ಕೃಷ್ಣ ಪಾರಿಜಾತ ರೂಪುಗೊಳ್ಳುತ್ತಿದ್ದ ಪ್ರಥಮ ಹಂತದಲ್ಲಿ ತನ್ನನ್ನು ತೊಡಗಿಸಿಕೊಂಡವ ಯಾದವಾಡ ಮಲಕಪ್ಪ. ತನ್ನ ಕಲಾಭಿವ್ಯಕ್ತಿಗೆ ನಿಂಗವ್ವನಂಥ ಕಲಾವಿದೆ ಮಾಧ್ಯಮವಾಗಿ ದೊರೆತಿದ್ದಳು. ಅವರ ನಿತ್ಯದ ವ್ಯಾಸಂಗದಲ್ಲಿ ನಾನಾ ಬಗೆಯ ಬರವಣಿಗೆ ಹುಟ್ಟಿಕೊಂಡಿದ್ದಿರಬಹುದು. ಅವುಗಳಲ್ಲಿ ಒಂದಿಷ್ಟಾದರೂ ಉಳಿದುಕೊಂಡಿದ್ದರೆ ಅಂದು ಪಾರಿಜಾತ ಆಟ ಸಂಯೋಜನಗೊಂಡ ಬಗೆಗೆ, ನಿಂಗವ್ವನ ಬಗೆಗೆ ಕೆಲವು ಮಾತಾದರೂ ದೊರೆಯುವ ಸಾಧ್ಯತೆಯಿತ್ತು. ನಿಂಗವ್ವನ ಚರಿತ್ರೆ ಬರೆಯಬೇಕೆನ್ನುವವರು ಇಂದು ತುಂಬ ತಡಕಾಡುವ ಪರಿಸ್ಥಿತಿ ಪ್ರಾಪ್ತವಾಗಿದೆ; ಎಷ್ಟರ ಮಟ್ಟಿಗೆ ಎಂದರೆ ನಿಂಗವ್ವನ ಬದುಕಿನ ಒಂದೊಂದು ಎಳೆಗೂ ಕೇವಲ ಹಿರಿಯರ ಹೇಳಿಕೆಗಳನ್ನೇ ನೆಮ್ಮಿನಿಲ್ಲಬೇಕಾಗಿದೆ. ಆಕಸ್ಮಿಕ ಲಿಖಿತ ದಾಖಲೆಗಳೇನಾದರೂ ನಿಂಗವ್ವನ ವಿಷಯಕ್ಕೆ ದೊರೆತರೆ ಅಭ್ಯಾಸಿಗಳಿಗೆ ಅಮೂಲ್ಯ ಆಸ್ತಿ ದೊರೆತಂತಾಗುತ್ತದೆ. ಆವಳ ಬದುಕಿನ ಎಷ್ಟೊಂದು ಎಳೆಗಳು ಮಲಕಪ್ಪನ ದತ್ತಕ ಮಗ ಹಾಕಿದ ರದ್ದಿಯಲ್ಲಿ ಕಳೆದುಕೊಂಡವೋ!

ಮಲಕಪ್ಪ ನಿಂಗವ್ವನಿಗೆ ಸಂಗೀತ, ಆಟ ಕಲಿಸುತ್ತಿದ್ದ ಕಾಲದಲ್ಲಿ ಸಹಾಯಕವಾಗಿದ್ದ ಸಂಗೀತ ಉಪಕರಣದ ಬಗೆಗೆ ಅನೇಕರು ಹೇಳುತ್ತಾರೆ. ಆ ಕಾಲದಲ್ಲಿ ಪೆಟ್ಟಿಗೆ (ಹಾರ್ಮೋನಿಯಂ) ಇರಲಿಲ್ಲ. ಒಂದು ಚಿಮಣಿ ಎಣ್ಣೆ ಡಬ್ಬಿಯಲ್ಲಿ ನೀರನ್ನು ಹಾಕಿ ಮಾಡಿದ ಉಪಕರಣವನ್ನು ಸ್ವರಕ್ಕೆ ಆಧಾರವಾಗಿಟ್ಟುಕೊಂಡು ಸಂಗೀತವನ್ನು ಕಲಿಯಲಾಗುತ್ತಿತ್ತು. ಹೀಗೆ ತಾನು ಪ್ರಥಮ ಹಂತದಲ್ಲಿ ಮಲಕಪ್ಪನಲ್ಲಿ ಕಲಿಯುವಾಗ ಬಳಸುತ್ತಿದ್ದ ಈ ಬಗೆಯ ಉಪಕರಣವನ್ನೇ ನಿಂಗವ್ವ ಬಹುದಿನಗಳವರೆಗೆ ಆಟದಲ್ಲಿಯೂ ಬಳಸುತ್ತಿದ್ದಳಂತೆ.

ನಿಂಗವ್ವ ಮಲಕಪ್ಪನ ಶಿಷ್ಯಳೆಂಬುದು ಸತ್ಯದ ಮಾತಾದರೂ ಕುಲಗೋಡ ತಮ್ಮಣ್ಣನ ನಿರ್ದೇಶನದಲ್ಲಿ ಆಟ ಮಾಡಿದಂತೆಲ್ಲ ಅವನ ಮಾರ್ಗದರ್ಶನದಿಂದಾಗಿಯೂ ಗಳಿಸಿದ ಅನುಭವವನ್ನು ಅಲ್ಲಗಳೆಯುವ ಹಾಗಿಲ್ಲ. ಸ್ವತಃ ಕುಲಗೋಡ ತಮ್ಮಣ್ಣ ಕವಿ, ಭಾಗವತ, ಆಟದ ಸಂಯೋಜಕ ಏನೆಲ್ಲ ಆಗಿ ಮೇಳದ ಕರ್ಣಧಾರತ್ವವನ್ನು ವಹಿಸಿಕೊಂಡದ್ದರಿಂದ ಚಿಕ್ಕವಳಾಗಿದ್ದ ನಿಂಗವ್ವ ಅವನ ಈ ಪ್ರತಿಭೆಯ ಬೆಳಕಿನಿಂದ ಹೊರಗುಳಿಯುವುದು ಸಾಧ್ಯವಿರಲಿಲ್ಲ. ಕುಲಗೋಡ ತಮ್ಮಣ್ಣನ ಕೊನೆಗಾಲದವರೆಗೂ ನಿಂಗವ್ವ ಅವನೊಂದಿಗೆ ಪಾತ್ರವಾಡಿದ್ದಾಳೆ. ನಿಂಗವ್ವ ಕುಲಗೋಡ ತಮ್ಮಣ್ಣನ ಕಂಪನಿಯಲ್ಲಿ ಪಾತ್ರಮಾಡುತ್ತಿದ್ದಂತೆಯೇ ಇವಳ ಸಹನಟಿಯಾಗಿ ಬಾಳಿದ ಇನ್ನೊಬ್ಬ ಕಲಾವಿದೆಯೆಂದರೆ ಕುಲಗೋಡದ ಬಾರ್ಕಿ ನೀಲವ್ವ. ಮುಂಚೆ ಹೇಳಿದಂತೆ ಸುಮಾರು ೧೯೦೦ರ ವರೆಗೆ ನಿಂಗವ್ವನ ಕಲಾಜೀವನ, ದಾಖಲಾತಿಗಳ ಕೊರತೆಯಿಂದಾಗಿ, ಬಾತ್ಮಿದಾರ(Informant) ರಿಲ್ಲವಾಗಿ ಬಹಳಷ್ಟು ವಿಷಯಗಳು ಸ್ಪಷ್ಟವಾಗುವುದಿಲ್ಲ. ಮಲಕಪ್ಪನಲ್ಲಿ ಕಲಿತು ಹೊರಬಿದ್ದ ಮೇಲೆ ತಮ್ಮಣ್ಣನೊಂದಿಗೆ ಅನೇಕ ಪಾರಿಜಾತ ಪ್ರಯೋಗಗಳನ್ನು ಪೂರೈಸಿದ ಮೇಲೆ ಒಮ್ಮೆಲೆ ಅವಳ ವಿಷಯವನ್ನು ಬಡಕುಂದ್ರಿ ಬಸಪ್ಪನೊಂದಿಗೆ ಆಟವಾಡುವುದರೊಂದಿಗೆ ಎತ್ತಿಕೊಂಡು ಮಾತನಾಡುವವರಿದ್ದಾರೆ. ಯಾದವಾಡ ಮಲಕಪ್ಪ ಮತ್ತು ಕುಲಗೋಡ ತಮ್ಮಣ್ಣರ ಪ್ರತಿಭೆಯ ಮೂಸೆಯಲ್ಲಿ ತಯಾರಾದ ಕೌಜಲಗಿ ನಿಂಗವ್ವ ಕ್ರಮೇಣ ಸ್ವತಂತ್ರವಾಗಿ ಪಾತ್ರವಾಡಲು ತೊಡಗಿದಳು ಎನ್ನುವುದಕ್ಕೆ ಬಡಕುಂದ್ರಿ ಬಸಪ್ಪನೊಂದಿಗೆ ಆಟವಾಡಿದ್ದೇ ಸಾಕ್ಷಿ. ಬೆಟಗೇರಿ ಕೃಷ್ಣಶರ್ಮ, ಬ.ಶ್ರೀ.ಪಾಟೀಲ ಅವರೊಂದಿಗೆ ಬಡಕುಂದ್ರಿಯ ಶಂಕರಪ್ಪ ಮಾನಗಾವಿ ಎನ್ನುವವರು ಕೌಜಲಗಿ ನಿಂಗವ್ವ ಬಡಕುಂದ್ರಿ ಬಸಪ್ಪನೊಂದಿಗೆ ಆಟವಾಡಿದ್ದನ್ನು ಖಚಿತಪಡಿಸುತ್ತಾರೆ. ಬಡಕುಂದ್ರಿಯ ಶಂಕರಪ್ಪ ಮಾನಗಾವಿ ಅವರಿಗೆ ಬಡಕುಂದ್ರಿ ಬಸಪ್ಪ ದೊಡ್ಡಪ್ಪನಾಗಬೇಕು. ಹೀಗಾಗಿ ತುಂಬ ಅಧಿಕೃತವಾಗಿ ಶಂಕರಪ್ಪ ಮಾನಗಾವಿ ಅವರು ನಿಂಗವ್ವ, ಮಲಕಪ್ಪ ಮತ್ತು ಕುಲಗೋಡ ತಮ್ಮಣ್ಣರ ಪರಿಸರದಿಂದ ಹೊರಬಿದ್ದ ಮೇಲೆ ಬಡಕುಂದ್ರಿ ಬಸಪ್ಪನೊಂದಿಗೆ ಆಟವಾಡಿದ್ದನ್ನು ಹೇಳುತ್ತಾರೆ.

ಮೊದಮೊದಲು ಬಡಕುಂದ್ರಿ ಬಸಪ್ಪ ಕೌಜಲಗಿಗೆ ಹೋಗಿ ನಿಂಗವ್ವನ ಕಂಪನಿಯಲ್ಲಿ ಆಟ ಮಾಡುತ್ತಿದ್ದನಂತೆ. ಬಹುಶಃ ಇದು ಮಹಾಲಿಂಗಪುರ ರಾಜೇಸಾಬ ನಿಂಗವ್ವನ ಕಂಪನಿಯನ್ನು ಸೇರುವ ಮುಂಚೆ ಇರಬೇಕು. ಕೆಲವು ದಿನಗಳ ತರುವಾಯ ಬಡಕುಂದ್ರಿ ಬಸಪ್ಪ ಕೌಜಲಗಿ ನಿಂಗವ್ವನ ಕಂಪನಿಯಿಂದ ಬೇರ್ಪಟ್ಟು ಸ್ವತಂತ್ರನಾದ. ಆದರೆ ಪ್ರಸಂಗ ವಶಾತ್ ನಿಂಗವ್ವ ಬಡಕುಂದ್ರಿಯ ಕಡೆಗೆ ಬರುವುದೋ ಬಸಪ್ಪ ಕೌಜಲಗಿಯ ಕಡೆಗೆ ಬರುವುದೋ ಇದ್ದೇ ಇತ್ತು. ಅವರು ಕೂಡಿ ಆಟ ಮಾಡಿದ್ದಕ್ಕೆ ಒಂದು ಉದಾಹರಣೆಯನ್ನು ಶಂಕರಪ್ಪ ಮಾನಗಾವಿ ಅವರು ಕೊಡುತ್ತಾರೆ. ಈ ಆಟ ನಡೆದುದು ಮಸ್ತಿಯಲ್ಲಿ. ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲೂಕಿನ ಮಸ್ತಿ ಈಗ ಹಿಡಕಲ್ ಆಣೆಕಟ್ಟಿನ ಮುಳುಗಡೆ ಪ್ರದೇಶದಲ್ಲಿ ಬಂದಿದೆ. ಆಟ ಇಡಿಸಿದವನು ಮಸ್ತಿಯ ಇನಾಮದಾರ. ಈ ಆಟ ಮೂರು ರಾತ್ರಿಗಳ ಕಾಲ ನಡೆಯಿತು. ಮೂರು ರಾತ್ರಿಯಾದ ಮೇಲೂ ಆಟ ಮುಗಿಯಬೇಕಾದರೆ ಹೊತ್ತೇರಿತು. ಮುಂಜಾನೆ ಎಂಟು ಗಂಟೆಯಾಯಿತು. ಆಟ ಮೆಚ್ಚಿಕೊಂಡ ಇನಾಮದಾರ 'ಏನು ಬೇಡುತ್ತೀ ಬೇಡು' ಎಂದು ಬಡಕುಂದ್ರಿ ಬಸಪ್ಪನನ್ನು ಕೇಳಿದ. ತಾವು ಆಟಗಾರರು ಹೊಲ–ಮನೆ ಬೇಡಬಾರದು ಎಂಬ ಭಾವನೆಯಿಂದ ತಾನು ಮತ್ತು ನಿಂಗವ್ವ ಉಟ್ಟಿದ್ದ ಎರಡೂ ಪೀತಾಂಬರ ಬಿಟ್ಟುಕೊಡಲು ಕೇಳಿದ. ಅಂದರೆ ಆಟದ ಪಾತ್ರಕ್ಕೆ ನಿಂಗವ್ವ ಮತ್ತು ಬಡಕುಂದ್ರಿ ಬಸಪ್ಪನಿಗಾಗಿ ಪೀತಾಂಬರಗಳನ್ನು ಇನಾಮದಾರರ ಮನೆಯಿಂದಲೇ ತರಲಾಗಿತ್ತು. ಈಗ ಬಸಪ್ಪ ಬೇಡಿದ್ದು ಅವೇ ಎರಡು ಪೀತಾಂಬರಗಳನ್ನು. ಇವನ ಈ 'ಅಲ್ಪ' ಕೇಳಿಕೆಯನ್ನು ಕೇಳಿ ಇನಾಮದಾರನಿಗೆ ನಿರಾಶೆಯಾಯಿತು. ಬಸಪ್ಪನಿಗೆ ಪ್ರೀತಿಯಿಂದ ಅಂದ: 'ಎಲಾ ಸೂಳೀಮಗನ ಏನ ಬೇಡಿದ್ಯೋ ಹೊಲಾ ಬೇಡಿದ್ರ ಕೊಡುವಂಗಿದ್ನಿ'. ಬಸಪ್ಪ ಬೇಡಿದ ಪೀತಾಂಬರಗಳನ್ನಲ್ಲದೆ ಇನಾಮದಾರರ ಮನೆಯಿಂದಲೇ ವೇಷಕ್ಕಾಗಿ ಬಸಪ್ಪ ಮತ್ತು ನಿಂಗವ್ವ ತಂದು ಧರಿಸಿದ್ದ ಆಭರಣಗಳನ್ನೂ ಇನಾಮದಾರ ಅವರಿಗೇ ಬಿಟ್ಟುಕೊಟ್ಟ.

ಹುಕ್ಕೇರಿ ಸಿದ್ರಾಮಪ್ಪನಲ್ಲಿ ಕಲಿತು ತಯಾರಾದ ಬಡಕುಂದ್ರಿ ಬಸಪ್ಪ ನಿಂಗವ್ವನ ವಾರಿಗೆಯವ. ಸಿದ್ರಾಮಪ್ಪ, ಬಡಕುಂದ್ರಿ ಬಸಪ್ಪ, ನಿಂಗವ್ವ ಇವರು ಮೂರು ಜನ ಕೂಡಿಯೂ ಕೆಲವು ಕಡೆ ಆಟವಾಡಿದ್ದನ್ನು ಶಂಕರಪ್ಪ ಮಾನಗಾವಿ ಉದಾಹರಿಸುತ್ತಾರೆ.

# ನಿಂಗವ್ವನ ಕಂಪನಿ : ಐತಿಹಾಸಿಕ ನಡೆ

ನಿಂಗವ್ವನ ಕಂಪನಿಯ ಬಗ್ಗೆ ಮಾತನಾಡುವುದೆಂದರೆ ಇದುವರೆಗಿನ ಪಾರಿಜಾತ ಇತಿಹಾಸದ ಅರ್ಧ ಅವಧಿಯನ್ನೇ ಹೇಳಿದಂತೆ. ಕುಲಗೋಡ ತಮ್ಮಣ್ಣ ಮತ್ತು ಯಾದವಾಡ ಮಲಕಪ್ಪ ಪಾರಿಜಾತದ ಪ್ರಾರಂಭದ ಅವಸ್ಥೆಯಲ್ಲಿ ದಿನದಿನವೂ ಅನೇಕ ಬದಲಾವಣೆಗಳನ್ನು ತುಂಬುತ್ತ ಹೊಸ ಹೊಸ ಮಾತು ಸೇರಿಸುತ್ತ ಹಾಡುಗಳನ್ನು ಪೋಣಿಸುತ್ತ, ಪರಿಷ್ಕರಿಸುತ್ತ ಬಂದರು. ನಿಂಗವ್ವ ಕೌಜಲಗಿಯಲ್ಲಿ ಕಂಪನಿ ಕಟ್ಟುವ ಹೊತ್ತಿಗೆ ಪಾರಿಜಾತದ ಜಾಕಟ್ಟು ಸಿದ್ಧಗೊಂಡಿತ್ತು. ಆ ಇಬ್ಬರು ಕಲಾವಿದರ ಮಾರ್ಗದರ್ಶನ ಬೇರೆ ಅವಳನ್ನು ಪರಿಣಿತಳನ್ನಾಗಿ ಮಾಡಿತ್ತು. ಹೀಗಾಗಿ ಕೌಜಲಗಿ ನಿಂಗವ್ವ ಪಾರಿಜಾತ ಕಂಪನಿ ಕಟ್ಟುವ ಸಾಹಸಕ್ಕೆ ಕೈಹಾಕಿದಳು. ಈ ಹಿನ್ನೆಲೆಯಲ್ಲಿ "ಕೌಜಲಗಿ ನಿಂಗವ್ವನ ಕಂಪನಿಯ ಅಭ್ಯಾಸವೆಂದರೆ ಆಟದ ಕಥೆ, ಸಂಗೀತ ಒಂದು ನಿಶ್ಚಿತವಾದ ಆಕಾರ ಪಡೆದುಕೊಂಡು ಸಂಭಾಷಣೆ, ಪಾತ್ರಗಳು ಸನ್ನಿವೇಶಗಳ ನಡೆಯಲ್ಲಿ ಹೊಂದಿಕೊಂಡು ರಂಗಸ್ಥಳದ ಮೇಲೆ ಆಟವಾಗಿ ನಿಂತ ಸಮೀಕ್ಷೆ. ಅಭಿಜಾತ ನಾಟಕ ಪರಂಪರೆಯಾಗಲಿ, ಜಾನಪದ ರಂಗಭೂಮಿಯಾಗಲಿ ಒಬ್ಬ ಸ್ತ್ರೀಯೇ ಒಂದು ಕಂಪನಿಯ ಒಡತಿಯಾಗಿ ಸಮಸ್ತವನ್ನೂ ತೂಗಿಸಿಕೊಂಡು ಹೋದ ಉದಾಹರಣೆ ಸಿಗುವುದು ಬಹಳ ಅಪರೂಪ. ಕೌಜಲಗಿ ನಿಂಗವ್ವ ಅಂಥದನ್ನು ಸಾಧಿಸಿ ತೋರಿಸಿದಳು. ನಿಂಗವ್ವ ಬಾಳಿದ್ದೇ ಪಾರಿಜಾತಕ್ಕಾಗಿ. ನಮ್ಮಲ್ಲಿ ಇತಿಹಾಸ ಅತಿ ರಂಜಿತವಾಗುತ್ತ ಹೋಗುವುದು ಹೆಚ್ಚು. ಆದರೆ ನಿಂಗವ್ವ ಬಾಳಿದ್ದೇ ಅಂಥ ಉದಾತ್ತವಾದ ಬದುಕನ್ನು, ಇಂದಿಗೂ ಅನೇಕ ಕಲಾವಿದರಿಗೆ, ಕಂಪನಿಗಳಿಗೆ ಅವಳೊಂದು ಪುಣ್ಯದ ಸ್ಮರಣೆ."[೧]

ಕೌಜಲಗಿ ನಿಂಗವ್ವ ಕೇವಲ ಒಬ್ಬ ನಟಿಯಾಗಿ ಹೋಗಿದ್ದರೆ ಈ ಬಗೆಯ ಕೀರ್ತಿ ಅವಳಿಗೆ ಸಲ್ಲುತ್ತಿತ್ತೇ ಎಂಬುದು ಸಂಶಯದ ವಿಷಯ. ಕಲಾವಿದರು ಕಲೆಯನ್ನು ಎಷ್ಟೇ ಬೆಳಸಿದರೂ ಅವರ ಸ್ಮರಣೆ ಉಳಿಯುವುದು ಅಲ್ಪಕಾಲ ಮಾತ್ರ. ಬಹಳ ದೊಡ್ಡ ಕಲಾವಿದನೋ ಕಲಾವಿದೆಯೋ ಆಗಿ ಹೋದರೆ ಆ ಸ್ಮರಣೆಗೆ ಒಂದಿಷ್ಟು ದೀರ್ಘಾವಧಿ ಇರಬಹುದು. ಆದರಲ್ಲೂ ಜಾನಪದ ಅಭಿನಯ ಕಲೆಗಳನ್ನು ಈಗಿನಂತೆ ಹಿಡಿದಿಡುವ

೧. ಶ್ರೀ ಕೃಷ್ಣ ಪಾರಿಜಾತ : ಒಂದು ಅಧ್ಯಯನ – ಡಾ. ಶ್ರೀ ರಾಮ ಇಟ್ಟಣ್ಣವರ, ಪು. ೨೧೦.

ಸಮೂಹ ಮಾಧ್ಯಮಗಳು ಹಿಂದಿನ ಕಾಲಕ್ಕೆ ಇರಲಿಲ್ಲ. ರಂಗ ಕಲಾವಿದರ ಕಲೆಗಾರಿಕೆ ಅವರು ರಂಗದ ಮೇಲೆ ಬಾಳಿರುವಷ್ಟು ದಿನ ಜನರ ಮನಸ್ಸಿನಲ್ಲಿ ಉಳಿಯುತ್ತದೆ. ಹೆಚ್ಚೆಂದರೆ ಆ ಆಟವನ್ನು ನೋಡಿದ ಪೀಳಿಗೆ ಮುಳುಗುವವರೆಗೆ ಸ್ಮರಣೆಯಲ್ಲಿ ನೆಲೆ ನಿಲ್ಲುತ್ತದೆ. ನಿಂಗವ್ವ ನಿಂತದ್ದು ಕೇವಲ ನಟಿಯಾಗಿ ಅಲ್ಲ, ಒಂದು ಕಂಪನಿಯ ಒಡತಿಯಾಗಿ. ದೀರ್ಘಕಾಲದ ಇವಳ ಕಂಪನಿ ಪಾರಿಜಾತ ಇತಿಹಾಸದ ಒಂದು ಭಾಗವೇ ಆಯಿತು. ನಿಂಗವ್ವನ ಕಂಪನಿ ಕೇವಲ ಹೊಟ್ಟೆ ಹೊರೆಯಲು ಕಟ್ಟಿಕೊಂಡದ್ದಲ್ಲ; ಅವಳಿಗೆ ಅದು ತನ್ನ ಬದುಕಿನ ಒಂದು ಭಾಗವಾಗಿತ್ತಾದ್ದರಿಂದ ಶ್ರೀ ಕೃಷ್ಣ ಪಾರಿಜಾತ ಅಧ್ಯಯನದ ಇತಿಹಾಸದಲ್ಲಿ ನಿಂಗವ್ವ ಕಂಪನಿಯಾಗಿ ಅಥವಾ ಕಂಪನಿಯೇ ನಿಂಗವ್ವನಾಗಿ ಉಳಿದುಕೊಂಡದ್ದು ನಿಂಗವ್ವನ ವ್ಯಕ್ತಿತ್ವವನ್ನು ಥಾಳಗೊಳಿಸುತ್ತದೆ. ಕುಲಗೋಡ ತಮ್ಮಣ್ಣನ ನಂತರ ನಿಂಗವ್ವ ತನ್ನ ಕಂಪನಿಯೊಂದನ್ನು ಗಟ್ಟಿಗೊಳಿಸಿರದಿದ್ದರೆ ಪಾರಿಜಾತ ರಂಗಭೂಮಿಯ ಮುನ್ನಡೆ ಹೇಗಿರುತ್ತಿತ್ತು – ಯೋಚಿಸಬೇಕಾದ ವಿಷಯ. ನಿಂಗವ್ವ, ಕಂಪನಿಯೊಂದರ ಒಡತಿಯಾಗಿ, ನೆಲೆಯಾಗಿ ಜಿನುಗುತ್ತಿದ್ದ ಈ ರಂಗಪ್ರಕಾರವನ್ನು ಪ್ರವಾಹವಾಗಿಸಿದಳು ಎಂಬುದಕ್ಕಾಗಿ ಇಂದು ಪಾರಿಜಾತದ ಇತಿಹಾಸದಲ್ಲಿ ಬಹುದೊಡ್ಡ ಅಧ್ಯಾಯವಾಗುತ್ತಾಳೆ.

ನಿಂಗವ್ವ ಕಂಪನಿ ಕಟ್ಟಿದ ತರುಣಪಲ್ಲಿ ಬಹುಶಃ ಬೇರೆ ಯಾವ ಕಂಪನಿಗಳೂ ಇರಲಿಲ್ಲ. ನಿಂಗವ್ವನೊಂದಿಗೆ ಆಟವಾಡಿದ ಬಡಕುಂದ್ರಿ ಬಸಪ್ಪ. ತರುವಾಯವೇ ತನ್ನ ಒಂದು ಕಂಪನಿಯನ್ನು ಕಟ್ಟಿಕೊಂಡ. ನಿಂಗವ್ವನ ಕಂಪನಿಯಲ್ಲೇ ಪಳಗಿದ ಮತಾಲಿಂಗಪುರದ ಮುರಗಯ್ಯ ಮಠಪತಿ, ನಿಂಗವ್ವನಿಂದ ಪ್ರತ್ಯೇಕಗೊಂಡು ಸವದಿ ಮಲ್ಲಯ್ಯನವರಿಗೆ ಕಲಿಸಿ ಸವದಿ ಕಂಪನಿಯ ನಿರ್ಮಾಣಕ್ಕೆ ಕಾರಣನಾದ. ಇವಳ ಕಂಪನಿಯಲ್ಲಿಯೇ ಆಟವಾಡಿದ ನಣದಿ ರಾಮಣ್ಣರ ಶ್ರೀ ಕೃಷ್ಣ ಪಾತ್ರ ವೈಖರಿ ತುಂಬಾ ಪ್ರಚಾರಗೊಂಡದ್ದು ಆಲಗೂರ–ಕುಂಚನೂರ ಕಂಪನಿಯಲ್ಲಿ. ಬಡಕುಂದ್ರಿ ಬಸಪ್ಪನ ಕಂಪನಿ, ಸವದಿ ಮಲ್ಲಯ್ಯನವರ ಕಂಪನಿ, ಆಲಗೂರ–ಕುಂಚನೂರ ಕಂಪನಿಗಳು ಕ್ರಮೇಣ ಬಹುದೊಡ್ಡ ಕಂಪನಿಗಳಾಗಿ ಬೆಳೆದವು, ಜನಮನ್ನಣೆಯನ್ನು ಗಳಿಸಿದವು. ಅಷ್ಟೇ ಅಲ್ಲ, ಕೆಲವು ಸಲ ನಿಂಗವ್ವನ ಕಂಪನಿಯ ಕೀರ್ತಿಗೆ ಹೆಗಲೇಣಿಯಾಗಿಯೋ ಕೆಲವು ಸಲ ಮೇಲುಗೈಯಾಗಿಯೋ ನಿಂತಿದ್ದುಂಟು. ಅನೇಕ ಕಲಾವಿದರ ಆಗಮನ ನಿರ್ಗಮನಗಳೊಂದಿಗೆ ಇಂಥ ಏರಿಳಿತ ತುಂಬ ಸಹಜ. ಆದರೆ ಈ ಪರಂಪರೆಯನ್ನು ಆದಿಯಲ್ಲಿ ಉಳಿಸಿಕೊಟ್ಟವಳು ನಿಂಗವ್ವ, ತರುವಾಯದ ಕಂಪನಿಗಳ ಅನೇಕರಿಗೆ ಸ್ಫೂರ್ತಿಯ ನೆಲೆಯಾಗಿ ನಿಂತವಳು ನಿಂಗವ್ವ ಎನ್ನುವುದನ್ನು ಪಾರಿಜಾತ ರಂಗಭೂಮಿಯ ಇತಿಹಾಸ ಎತ್ತಿ ಹೇಳುತ್ತದೆ.

ಒಬ್ಬ ಸ್ತ್ರೀಯಾಗಿ ನಿಂಗವ್ವ ಕಂಪನಿಯನ್ನು ನಡೆಸುವಲ್ಲಿ ಎಷ್ಟೊಂದು ಕಷ್ಟ ನಿಷ್ಠುರಗಳನ್ನು ಎದುರಿಸಿರಬೇಕು. ನಿಂಗವ್ವ ತನ್ನ ಕಂಪನಿಯ ವ್ಯವಸ್ಥಾಪಕಿ ಮಾತ್ರವಲ್ಲ, ಒಬ್ಬ ಕಲಾವಿದೆಯಾ।ಯೂ ಕೂಡ ತನ್ನ ಕಂಪನಿಯನ್ನು ನಡೆಸಿಕೊಂಡು ಬಂದಳು ಎಂಬುದನ್ನು

ನೆನೆಸಿಕೊಂಡರೆ ಆಶ್ಚರ್ಯವೆನಿಸುತ್ತದೆ, ಅಭಿಮಾನ ಮೂಡುತ್ತದೆ. ವಯಸ್ಸು ಹೋಗಿ ನಡುಬಾಗಿ ಪಾತ್ರಕಟ್ಟುವ ಶಕ್ತಿ ನಿಂತಮೇಲೂ ನಿಂಗವ್ವ ಹಿಮ್ಮೇಳದಲ್ಲಿ ನಿಂತು ತಾಳ ಹಿಡಿಯುತ್ತಿದ್ದಳೆಂದರೆ ಅವಳ ಕಲಾಭಕ್ತಿಗೆ ಎಂಥವರೂ ತಲೆಬಾಗಿಸಬೇಕು.

ನಾವು ಪಾರಿಜಾತ ರಂಗಭೂಮಿಯ ಕಲಾವಿದರ ಅಂದಿನ ಸ್ಥಿತಿ-ಗತಿ ಅವರು ಕೂಡುತ್ತಿದ್ದ ರೀತಿ ಆಟವಾಡುತ್ತಿದ್ದ ಬಗೆಗಳನ್ನು ಅವಲೋಕಿಸಿದರೆ ನಿಂಗವ್ವನ ಕಷ್ಟ ಕಿಂಚಿತ್ತಾದರೂ ಅರ್ಥವಾಗಬಹುದು. ಪಾರಿಜಾತ ರಂಗಭೂಮಿಯ ಯಾವುದೇ ಕಂಪನಿಯ ಕಲಾವಿದರು ಒಂದೇ ಊರಿನವರಾಗಿರುವುದಿಲ್ಲ. ಒಂದು ಊರಲ್ಲಿ ಒಂದು ಕಂಪನಿ ಸ್ಥಾಪನೆಗೊಂಡ ಮೇಲೂ ಅದೇ ಊರಲ್ಲಿ ನೆಲೆಗೊಳ್ಳುವುದಿಲ್ಲ. ಕಂಪನಿ ಎಷ್ಟೇ ಬೆಳೆದಿರಬಹುದು, ಅದರ ಖ್ಯಾತಿ ಎಷ್ಟೇ ಇರಬಹುದು ಇವರು ಆಟವಿದ್ದ ದಿನವೇ ಕೂಡುವುದು. ಆಟವಿರದ ದಿನಗಳಲ್ಲಿ ತಮ್ಮ ತಮ್ಮ ಊರುಗಳಲ್ಲಿ ಬೇರೆ ಬೇರೆ ಉದ್ಯೋಗಗಳನ್ನು ಆಶ್ರಯಿಸಿಕೊಂಡು ಜೀವನ ನಿರ್ವಹಿಸುತ್ತಿರುತಾರೆ. ಕಂಪನಿಯ ಮುಖ್ಯಸ್ಥ ಅಥವಾ ಮುಖ್ಯಸ್ಥೆ ಇಂಥ ಊರಲ್ಲಿ ಇಂಥ ದಿನ ಆಟವಿದೆಯೆಂದು ಆ ಕಲಾವಿದರಿಗೆ ಹೇಳಿಕಳಿಸಬೇಕು, ಅವರು ತಪ್ಪದೆ ನಿಶ್ಚಿತ ದಿನದಂದು, ನಿಶ್ಚಿತ ಸ್ಥಳಕ್ಕೆ ಬಂದು ಸೇರಬೇಕು. ಈ ಮಧ್ಯದಲ್ಲಿ ಈ ಬಡಕಲಾವಿದರಿಗೆ ಸಾಂಸಾರಿಕ ತೊಂದರೆಗಳು ಎದುರಾಗಬಹುದು, ಅನಾರೋಗ್ಯ, ಹಣದ ಅಡಚಣೆ – ಯಾವು ಯಾವುದೋ ಅಡ್ಡಗೋಡೆಯಾಗಬಹುದು, ಜನನ, ಮರಣ, ಅಪಘಾತ – ಇಂಥ ಯಾವುದೋ ಒಂದು ಕಾರಣವಾಗಿ ಮುಖ್ಯ ಕಲಾವಿದನೊಬ್ಬ ಆಟದ ಸಮಯಕ್ಕೆ ಒದಗದಿರಬಹುದು, ತಲುಪಿಸಬೇಕಾದ ವಾಹನವೂ ಕೈಕೊಡಬಹುದು. (ಈಗ ಬೇಕಾದಷ್ಟು ವಾಹನ ಸೌಕರ್ಯಗಳಿವೆ. ಹಿಂದೆಲ್ಲ ನಡೆದುಕೊಂಡೇ ಆಟದ ಮುಖ್ಯಸ್ಥ ಹೇಳಿದ ಊರನ್ನು ಸೇರಬೇಕಾಗುತ್ತಿತ್ತು.) ಇಂಥ ವೇಳೆಯಲ್ಲಿ ಕಂಪನಿ ಒಡೆಯನ ಮಾನಸಿಕ ಕ್ಷೋಭೆಯನ್ನು ನಾವು ಊಹಿಸಿಕೊಳ್ಳಬೇಕು. ಇಂತಿಂಥವರೇ ಈ ಕಂಪನಿಯಲ್ಲಿ ಪಾತ್ರಧಾರಿಗಳಾಗಿದ್ದಾರೆ, ಇವರೆಲ್ಲ ತಮ್ಮೂರಿಗೆ ಬರುತ್ತಾರೆ ಎಂದು ನಿರೀಕ್ಷಿಸಿಕೊಂಡಿದ್ದ ಪ್ರೇಕ್ಷಕರನ್ನು ಅವರು ನಿರೀಕ್ಷಿಸಿಕೊಂಡಿದ್ದ ಮಟ್ಟದಲ್ಲೇ ತಣಿಸಬೇಕು. ಇದು ಕಂಪನಿಯ ನೈತಿಕ ಜವಾಬ್ದಾರಿ. ಇದರಲ್ಲಿ ಏನೋ ಸಣ್ಣ ಪುಟ್ಟ ಬದಲಾವಣೆಯಾದರೆ ಸಹಿಸಿಕೊಳ್ಳಬಹುದು. ಆದರೆ ಮುಖ್ಯ ಪಾತ್ರಧಾರಿಯೇ ಬದಲಾಗಿಬಿಟ್ಟರೆ ಅಥವಾ ಯಾವುದೋ ಕಾರಣಕ್ಕೆ ಮಧ್ಯರಾತ್ರಿಯವರೆಗೂ ಆಟವನ್ನು ಪ್ರಾರಂಭಿಸುವುದಾಗದಿದ್ದರೆ ಪ್ರೇಕ್ಷಕರ ದಾಳಿಯನ್ನು ಎದುರಿಸಬೇಕು, ಆಟಕ್ಕಾಗಿ ಹಣಕೊಡುವ ಆ ಊರಿನ ಹಿರಿಯರ ಮಾತುಗಳನ್ನು ಸಹಿಸಿಕೊಳ್ಳಬೇಕು.

ನಿಂಗವ್ವ ಇಂಥ ನೂರಾರು ಸಂಕಷ್ಟಗಳನ್ನು ಎದುರಿಸಿಯೂ ತನ್ನ ಜೀವಮಾನದ ಕೊನೆಯವರೆಗೂ ತನ್ನ ಕಂಪನಿಯನ್ನು ಉಳಿಸಿಕೊಂಡು, ನಡೆಸಿಕೊಂಡು ಬಂದಳು. ಇಂಥ ಪಾರಿಜಾತ ಕಂಪನಿಯ ಒಡತಿಯನ್ನು ನಿಂಗವ್ವನ ತರುವಾಯ ಪಾರಿಜಾತ ಇತಿಹಾಸ

ಇದುವರೆಗೆ ಕಂಡಿಲ್ಲ. ಹೆಣ್ಣು ಮಕ್ಕಳು ಸಾರ್ವಜನಿಕ ವಲಯಕ್ಕೆ ಕಾಲಿಡದ ಅಂದಿನ ದಿನಗಳಲ್ಲಿ ನಿಂಗವ್ವನ ಎದೆಗಾರಿಕೆಯನ್ನು ಯಾರೂ ಮೆಚ್ಚಬೇಕು.

ನಿಂಗವ್ವ ತನ್ನ ಕಂಪನಿಯನ್ನು ಎಂದು ಪ್ರಾರಂಭಿಸಿದಳು ಎಂಬ ಬಗ್ಗೆ ಖಚಿತವಾದ ಮಾಹಿತಿ ಸಿಗುವುದಿಲ್ಲ. 'ಕುಲಗೋಡ ತಮ್ಮಣ್ಣ ದಿವಂಗತನಾದ ಮೇಲೆ ಆತನ ಮೇಳದಲ್ಲಿ ಪ್ರಮುಖನಾದ ಹುಕ್ಕೇರಿ ಸಿದ್ಧರಾಮಪ್ಪ ತನ್ನದೇ ಆದ ಪಾರಿಜಾತ ಮೇಳವನ್ನು ಕಟ್ಟಿದನು. ಕೌಜಲಗಿ ನಿಂಗವ್ವ ಉಳಿದ ಕೆಲವು ನಟರೊಂದಿಗೆ ಮೂಲ ಮೇಳವನ್ನು ಮುಂದುವರಿಸಿಕೊಂಡು ಬಂದಳು. ಸಿದ್ಧರಾಮಪ್ಪನ ಮೇಳದಲ್ಲಿ ಬಡಕುಂದರಗಿ ಬಸಪ್ಪ ಎಂಬ ಸ್ತ್ರೀ ಪಾತ್ರಧಾರಿ ನಟನು ತುಂಬ ಪ್ರಸಿದ್ಧಿಯನ್ನು ಪಡೆದನು. ೧೯೦೭–೦೮ ರಲ್ಲಿ ನಾನು ಮೊದಲ ಸಲ ಪಾರಿಜಾತವನ್ನು ನೋಡಿದಾಗ ನಿಂಗವ್ವ, ಬಡಕುಂದರಗಿ ಬಸಪ್ಪ ಇಬ್ಬರೂ ಒಂದೇ ಮೇಳದಲ್ಲಿದ್ದು ಪಾರಿಜಾತ ಆಟದ ಕೀರ್ತಿಯನ್ನು ನಾಡಿನ ತುಂಬ ಹಬ್ಬಿಸಿದರು.'[೨] ಅವಳು ಕಂಪನಿ ಮಾಡಿದ ಹೊಸತರಲ್ಲಿ ಬಡಕುಂದ್ರಿ ಬಸಪ್ಪ ಮೊದಲು ಸೇರಿಕೊಂಡಿದ್ದ. ಮುಂದೆ ಬಡಕುಂದ್ರಿ ಬಸಪ್ಪ ಬಡಕುಂದ್ರಿಯಲ್ಲಿ ಬೇರೊಂದು ಕಂಪನಿಯನ್ನು ಕಟ್ಟಿದ ಮೇಲೆ ಕೌಜಲಗಿ ನಿಂಗವ್ವ ಬೇರೆ ಜನರನ್ನು ಆಶ್ರಯಿಸಬೇಕಾಯಿತು. ಈ ಹಂತದಲ್ಲಿ ಅವಳ ಕಂಪನಿಗೆ ಬಂದವ ಮಹಾಲಿಂಗಪುರದ ರಾಜೇಸಾಬ. ಮಹಾಲಿಂಗಪುರದ ರಾಜೇಸಾಬ ಕೌಜಲಗಿಯಲ್ಲಿ ನಿಂಗವ್ವನ ಕಂಪನಿ ಸೇರಿದಾಗ ಪಾತ್ರ ವಿವರ ಹೀಗಿತ್ತು :

ಕೌಜಲಗಿ ನಿಂಗವ್ವ – ಸತ್ಯಭಾಮಾ
ಕುಲಗೋಡ ನೀಲವ್ವ – ರುಕ್ಮಿಣಿ
ಮಹಾಲಿಂಗಪುರದ ರಾಜೇಸಾಬ – ಕೃಷ್ಣ

೧೯೦೫ರ ಸುಮಾರಿಗೆ ಕೌಜಲಗಿಯಿಂದ ಮಹಾಲಿಂಗಪುರಕ್ಕೆ ಹೋಗಿ ಕೆಲವು ಪ್ರಯೋಗಗಳನ್ನು ರಾಜೇಸಾಬನೊಂದಿಗೆ ಮಾಡಿದ್ದಾಳೆ ನಿಂಗವ್ವ. ನಣದಿ ರಾಮಣ್ಣ ನಿಂಗವ್ವನ ಕಂಪನಿಗೆ ಬಂದು ಸೇರಿಕೊಳ್ಳುವವರೆಗೂ ರಾಜೇಸಾಬ ನಿಂಗವ್ವನಲ್ಲಿ ಉಳಿದುಕೊಂಡ (ತರುವಾಯದ ದಿನಗಳಲ್ಲಿ ಆಗೀಗ ಬಂದು ಪಾತ್ರ ಮಾಡುತ್ತಿದ್ದನೆಂದು ತೋರುತ್ತದೆ).

ಪಾರಿಜಾತ ಇತಿಹಾಸದಲ್ಲಿ ಕೃಷ್ಣ ಪಾತ್ರಧಾರಿಯಾಗಿ ಬಹುದೊಡ್ಡ ಹೆಸರು ಗಳಿಸಿದ ನಣದಿ ರಾಮಣ್ಣ ನಿಂಗವ್ವನ ಕಂಪನಿಯಲ್ಲಿ ಸುಮಾರು ೧೯೧೭ರಿಂದ ನಾಲ್ಕು ವರ್ಷಗಳ ಕಾಲ ಇದ್ದ. ನಣದಿ ರಾಮಣ್ಣನ ಗಾಯನ, ಅಭಿನಯ ಮತ್ತು ಕೌಜಲಗಿ ನಿಂಗವ್ವನ ಸೂರು – ಎರಡನ್ನು ಮೆಚ್ಚಿಕೊಂಡ ಜನ ಆ ಕಾಲಕ್ಕೆ ಈ ಕಂಪನಿಯನ್ನು ತುಂಬ ಆರಾಧಿಸುತ್ತಿದ್ದರು. ನಣದಿ ರಾಮಣ್ಣ ಈ ಕಂಪನಿಯಲ್ಲಿ ಪಾತ್ರವಹಿಸುತ್ತಿದ್ದ ಕಾಲಕ್ಕೆ ಇದ್ದ ಪಾತ್ರ ವಿವರ:

೨. ಕನ್ನಡ ಜಾನಪದ ಸಾಹಿತ್ಯ : ಡಾ. ಬೆಟಗೇರಿ ಕೃಷ್ಣಶರ್ಮ, ಪು – ೯೮.

ನಣದಿ ರಾಮಣ್ಣ – ಕೃಷ್ಣ
ಕೌಜಲಗಿ ನಿಂಗವ್ವ – ಸತ್ಯಭಾಮಾ
ನರಸಾಪುರ ರುದ್ರಯ್ಯ – ಭಾಗವತ
ಬೆಲ್ಲದ ಬಾಗೇವಾಡಿ ರಾಮಣ್ಣ – ಕೊರವಂಜಿ ಮತ್ತು ಗೌಳಗಿತ್ತಿ
ವಾಮನ – ರುಕ್ಮಿಣಿ

ನಣದಿ ರಾಮಣ್ಣ ನಿಂಗವ್ವನ ಕಂಪನಿಯನ್ನು ಬಿಟ್ಟು ಹೋದ ಮೇಲೆ ಬರಗಿ ರಾಚಯ್ಯನವರನ್ನು ನಿಂಗವ್ವ ತನ್ನ ಕಂಪನಿಗೆ ಆಹ್ವಾನಿಸಿದಳು. ನಿಂಗವ್ವನ ಕಂಪನಿಯಲ್ಲಿ ೨೦ ವರ್ಷಗಳ ಕಾಲ ಕೃಷ್ಣ ಪಾತ್ರ ಮಾಡಿದ ಬರಗಿ ರಾಚಯ್ಯನವರು ತಾವೂ ಬೆಳೆದರು, ಕಂಪನಿಯನ್ನೂ ಬೆಳೆಸಿದರು. ಕಂಪನಿಯ ಒಡತಿಯಾಗಿ ನಿಂಗವ್ವ ನಿರ್ವಹಿಸಿದ ಪಾತ್ರವನ್ನು ಬರಗಿ ರಾಚಯ್ಯನವರು ತುಂಬ ಮೆಚ್ಚಿಕೊಳ್ಳುತ್ತಾರೆ. ಅವಳ ಪಾತ್ರ ತಾದಾತ್ಮ್ಯತೆ ಅವಳ ರಂಗಭಕ್ತಿಯನ್ನು ಇಂದಿಗೂ ಭಾವುಕರಾಗಿ ನೆನೆಯುತ್ತಾರೆ. ರಾಚಯ್ಯನವರು ಕೃಷ್ಣ ಪಾತ್ರ ಮಾಡುತ್ತಿದ್ದ ಕಾಲಕ್ಕೆ ಶಿವಗುರಿ ನಿಂಗವ್ವನ ಕಂಪನಿಯನ್ನು ಸೇರಿಕೊಂಡ. ನಣದಿ ರಾಮಣ್ಣ ನಿಂಗವ್ವನ ಕಂಪನಿ ಬಿಡುತ್ತಾರೆಂದರೆ ನಿಂಗವ್ವನ ಕಂಪನಿ ಅವಸಾನ ಹೊಂದಿದಂತೆಯೇ ಎಂದು ಭಾವಿಸಿದ್ದರು ಹಲವು ಜನ. ಆದರೆ ಹಾಗಾಗಲಿಲ್ಲ. ರಾಚಯ್ಯನವರ ಪಾತ್ರ ಸಾಮರ್ಥ್ಯ ನಿಂಗವ್ವನ ಕಂಪನಿಗಿದ್ದ ಜನಾನುರಾಗವನ್ನು ಹಾಗೆಯೇ ಉಳಿಸಿಕೊಟ್ಟಿತು. ಶಿವಗುರಿಯ ಎತ್ತರದ ದನಿಯೂ ನಿಂಗವ್ವನ ಕಂಪನಿಗೆ ಹೆಚ್ಚಿನ ಕಳೆಯನ್ನು ತಂದಿತು. ರಾಚಯ್ಯನವರು ಮತ್ತು ಶಿವಗುರಿ ಈ ಕಂಪನಿಯಲ್ಲಿ ಪಾತ್ರ ಮಾಡುತ್ತಿದ್ದ ಕಾಲಕ್ಕೆ ಈ ಕೆಳಗಿನಂತೆ ಪಾತ್ರ ವ್ಯವಸ್ಥೆಯಿತ್ತು:

ನಿಂಗವ್ವ – ಸತ್ಯಭಾಮಾ
ಬರಗಿ ರಾಚಯ್ಯ – ಕೃಷ್ಣ
ಶಿವಗುರಿ – ಕೊರವಂಜಿ
ಹಿಡಕಲ್ಲ ಭೀಮಪ್ಪ – ಭಾಗವತ
ಮಹಾದೇವಪ್ಪ – ಹಾರ್ಮೋನಿಯಂ
ಚಂದ್ರವ್ವ – ರುಕ್ಮಿಣಿ

ನಿಂಗವ್ವ ವಯಸ್ಸು ಹೋದ ಮೇಲೆ ಪಾತ್ರ ಮಾಡುವುದನ್ನು ಕಡಿಮೆ ಮಾಡಿದಳು. ಅವಳೊಂದಿಗೆ ಕೊನೆ ಕೊನೆಯಲ್ಲಿ ಕೃಷ್ಣ ಪಾತ್ರ ಕಟ್ಟಿದ ವ್ಯಕ್ತಿಯೆಂದರೆ ಬುದ್ನಿಯ ಜಾಡರ ಈರಪ್ಪ. ನಿಂಗವ್ವನ ವ್ಯಕ್ತಿತ್ವವನ್ನು ಅವಳು ಕಂಪನಿ ಕಟ್ಟಿ ನಿರ್ವಹಿಸಿದ ಸಾಮರ್ಥ್ಯವನ್ನು ಬಹಳವಾಗಿ ಮೆಚ್ಚುವ ಈರಪ್ಪ, ನುರಿತ ಕಲಾವಿದರು. ಶುದ್ಧ ಸಂಭಾಷಣೆಗೆ ಹೆಸರಾಗಿದ್ದ ಜಾಡರ ಈರಪ್ಪ ತಾವು ಆ ಕಂಪನಿಯಲ್ಲಿ ಇರುವಷ್ಟು ಕಾಲ ಕಂಪನಿಗೆ ಒಳ್ಳೆಯ ಹೆಸರು ತಂದುಕೊಟ್ಟರು. ಜಾಡರ ಈರಪ್ಪ ಅವರ ಕಾಲಕ್ಕೆ ನಿಂಗವ್ವನ ಕಂಪನಿಯಲ್ಲಿ ಪಾತ್ರ ವ್ಯವಸ್ಥೆ ಹೀಗಿತ್ತು:

ಜಾಡರ ಈರಪ್ಪ (ಬುದ್ನಿ) – ಕೃಷ್ಣ
ನಿಂಗವ್ವ – ಸತ್ಯಭಾಮಾ
ಚಂದ್ರವ್ವ – ರುಕ್ಮಿಣಿ
ಶಿವಗುರೆಪ್ಪ – ಗೊಲ್ಲತಿ
ಹಿಡಕಲ್ಲ ಭೀಮಪ್ಪ – ಭಾಗವತ
ಸಂಗಾನಟ್ಟಿ ರುದ್ರಪ್ಪ – ಹಿಮ್ಮೇಳ

ನಿಂಗವ್ವ ಕಂಪನಿಯನ್ನು ತನ್ನ ಜೀವದಂತೆ ಪ್ರೀತಿಸುತ್ತಿದ್ದಳು. ತನ್ನ ಕಂಪನಿ ಸದಾಕಾಲ ಎತ್ತರದಲ್ಲಿರಬೇಕು, ಅದು ಎಂದೂ ಜನಾದರಣೆಯನ್ನು ಕಳೆದುಕೊಳ್ಳಬಾರದು ಎಂಬ ಹಂಬಲ ನಿರಂತರ ಅವಳಲ್ಲಿ ತುಡಿಯುತ್ತಿತ್ತು. ಪ್ರಯೋಗದ ಯಶಸ್ಸಿಗೆ ಕಲಾವಿದರೇ ಕಾರಣವೆಂದರಿತಿದ್ದ ನಿಂಗವ್ವ, ಅವರೇ ತನ್ನ ಕಂಪನಿಯ ಜೀವಾಳವೆಂದು ಭಾವಿಸಿದ್ದಳು. ಆದ್ದರಿಂದ ತನ್ನ ಕಂಪನಿಯಲ್ಲಿ ಶ್ರೇಷ್ಠ ಕಲಾವಿದರೇ ಇರುವಂತೆ ದಕ್ಷತೆ ವಹಿಸುತ್ತಿದ್ದಳು. ಒಳ್ಳೆಯ ನಟ-ನಟಿಯರ ಬಗ್ಗೆ ಆಕೆಗೆ ಗೌರವವಿತ್ತು. ತಾನೇ ಶ್ರೇಷ್ಠನಟಿಯೆಂಬ ಹಮ್ಮು-ಬಮ್ಮು ನಿಂಗವ್ವನಲ್ಲಿ ಇರಲಿಲ್ಲ. ಆದ್ದರಿಂದ ಒಳ್ಳೆಯ ನಟನಟಿಯರನ್ನು ಸದಾಕಾಲ ಅರಸುವ, ಅಂಥವರ ಮೇಲೆ ಕಣ್ಣಿಡುವವಳಾಗಿದ್ದಳು ನಿಂಗವ್ವ. ತನ್ನ ಕಂಪನಿಗೆ ಅಂಥ ಶ್ರೇಷ್ಠ ಕಲಾವಿದರ ಅವಶ್ಯಕತೆಯುಂಟಾದಾಗ ಕಲಾವಿದರಿರುವಲ್ಲಿಗೆ ತಾನೇ ಹೋಗಿ ಕರೆತರುವವಳಾಗಿದ್ದಳು ಅಥವಾ ತನ್ನ ಕಂಪನಿಯ ಇನ್ನೊಬ್ಬರನ್ನು ಕಳಿಸಿ ಅವರನ್ನು ಒಲಿಸಿಕೊಂಡು ತನ್ನ ಕಂಪನಿಯನ್ನು ಶ್ರೀಮಂತಗೊಳಿಸುತ್ತಿದ್ದಳು.

'ಶಿವಗುರಿಯವರ ಕಂಠ ಮಾಧುರ್ಯವನ್ನು ಬಹುವಾಗಿ ಮೆಚ್ಚಿದ ನಿಂಗಮ್ಮ ಬಯಲಾಟ ಕಂಪನಿಗೆ ಅವರನ್ನು ಬರಮಾಡಿಕೊಂಡು ತರಬೇತಿ ನೀಡಿ ಬೆಳಕಿಗೆ ತಂದುದೊಂದು ವಿಶೇಷವೆಂದೇ ಹೇಳಬೇಕು. ಶಿವಗುರಿ ಅವರು ಇಂದು ಕನ್ನಡ ಕಲಾಲೋಕದ ಅಮೂಲ್ಯ ಆಸ್ತಿಯೆನಿಸಿದ್ದೊಂದು ನಾವೆಲ್ಲರೂ ಅಭಿಮಾನ ಪಡತಕ್ಕ ಸಂಗತಿಯಾಗಿದೆ.'[೩] ಇದನ್ನು ಪುಷ್ಠೀಕರಿಸುವ ಜಾಡರ ಈರಪ್ಪ ಹೇಳುವಂತೆ – ನರಸಾಪುರದ ಶಿವಗುರಿಯು ಎತ್ತರದ ದನಿಯನ್ನು ಮೆಚ್ಚಿಕೊಂಡ ನಿಂಗವ್ವ ತನ್ನ ಕಂಪನಿಯಲ್ಲಿ ಅವನು ಶಾಶ್ವತವಾಗಿ ನಿಲ್ಲುವ ವ್ಯವಸ್ಥೆ ಮಾಡಿಕೊಂಡಳು. ಇದಕ್ಕೆ ಸಹಾಯಕನಾಗಿ ನಿಂತವನು ಸತ್ತಿಗೇರಿ ರುದ್ರಯ್ಯ.

ನಣದಿ ರಾಮಣ್ಣರ ವಿಷಯದಲ್ಲಿಯೂ ಅಷ್ಟೇ. ನಣದಿ ರಾಮಣ್ಣರ ಅಭಿನಯ ಚಾತುರ್ಯವನ್ನು ಕೇಳಿಯೇ ನಿಂಗವ್ವ ಅವರನ್ನು ತನ್ನ ಕಂಪನಿಗೆ ತಂದುಕೊಂಡಳು. ೧೯೧೭ರ ಸುಮಾರಿಗೆ ಒಂದು ದಿನ ಚಿಕ್ಕೋಡಿಯಲ್ಲಿ ನಣದಿ ರಾಮಣ್ಣ ಮತ್ತು ಅವನ ತಮ್ಮ ವಾಮನರು ಕೃಷ್ಣ-ರುಕ್ಮಿಣಿಯರಾಗಿ ಪಾರಿಜಾತ ಮಾಡಿದರು. ಇವರ ಉತ್ಕೃಷ್ಟ ಅಭಿನಯವನ್ನು ಅಂದು ಅಲ್ಲಿಗೆ ಬಂದಿದ್ದ ಬೆಲ್ಲದ ಬಾಗೇವಾಡಿ ರಾಮಣ್ಣ ನೋಡಿದ. ಆ ಕಾಲಕ್ಕೆ ಅವನು ಕೌಜಲಗಿ ನಿಂಗವ್ವನ ಕಂಪನಿಯಲ್ಲಿದ್ದ. ಅವನು ಮಹಾಲಿಂಗಪುರಕ್ಕೆ

---

೩. ಕಲಾಜ್ಯೋತಿ : ದಿ. ಕೌಜಲಗಿ ನಿಂಗಮ್ಮ, ಬಾಳೇಶ ಲಕ್ಕಟ್ಟಿ, ಪು. ೩.

ಹೋಗಿ ನಿಂಗವ್ವನಿಗೆ ತಾನು ಚಿಕ್ಕೋಡಿಯಲ್ಲಿ ನೋಡಿದ ಹುಡುಗರಿಬ್ಬರ ಅಭಿನಯ ಚಾತುರ್ಯದ ವಿಷಯ ತಿಳಿಸಿದ. ಆದರಲ್ಲಿಯೂ ನಣದಿ ರಾಮಣ್ಣರನ್ನು ತುಂಬಾ ಹೊಗಳಿ ಆ ವ್ಯಕ್ತಿಯನ್ನು ತನ್ನ ಕಂಪನಿಗೆ ಸೇರಿಸಿಕೊಂಡರೆ ಕಂಪನಿಯ ಹೆಸರು ತುಂಬಾ ಎತ್ತರಕ್ಕೆ ಹೋಗುತ್ತದೆಂದು ಆಶೆ ಹಚ್ಚಿದ. ತನ್ನ ಕಂಪನಿಯ ಮೇಲ್ಮೆ ಆ ಹುಡುಗನಿಂದ ಬೆಳೆಯುವುದಾದರೆ ತಾನೇಕೆ ಈ ಅವಕಾಶವನ್ನು ಕಳೆದುಕೊಳ್ಳಬೇಕು ಎಂದು ಒಂದೆರಡು ದಿನಗಳಲ್ಲಿಯೇ ನಣದಿಗೆ ಬಂದಳು. ನಿಂಗವ್ವ ನಣದಿ ರಾಮಣ್ಣರನ್ನಾಗಲಿ ಅವರ ತಮ್ಮ ವಾಮನನನ್ನಾಗಲಿ ನೇರವಾಗಿ ಕರೆದುಕೊಂಡು ಹೋಗುವಂತಿರಲಿಲ್ಲ. ತಾವು ಬರುವುದು ಬಿಡುವುದು ತಮ್ಮನ್ನು ಪೋಷಿಸಿದ ನಣದಿ ಸರಕಾರಕ್ಕೆ[೧] ಬಿಟ್ಟುಕೊಟ್ಟ ವಿಷಯ ಎಂದು ರಾಮಣ್ಣ ಹೇಳಿಬಿಟ್ಟರು. ನಿಂಗವ್ವ ಸರಕಾರಕ್ಕೆ ಹೋಗಿ ಈ ಹುಡುಗರನ್ನು ತನ್ನ ಕಂಪನಿಗೆ ಕಳಿಸಿಕೊಡಬೇಕೆಂದು ದುಂಬಾಲು ಬಿದ್ದಳು. 'ನನ್ನ ಸೇವೆಯಲ್ಲಿದ್ದವರನ್ನು ನಾನು ಹೇಗೆ ಬಿಟ್ಟು ಕೊಡಲಿ?" ಎಂದು ನಣದಿ ಸರಕಾರ ವಾದಿಸಿದರು. ರಾಮಣ್ಣ ಮತ್ತು ವಾಮನ ಹೀಗೆ ಪಾತ್ರ ಮಾಡುತ್ತಿದ್ದರೆ ಅವರನ್ನು ಪೋಷಿಸಿದ ತಮಗೂ ಒಂದು ಮರ್ಯಾದೆ ಪ್ರಾಪ್ತವಾಗುತ್ತದೆ ಎಂಬ ತಿಳುವಳಿಕೆ ಇವರದ್ದಾಗಿತ್ತು. ಇವರ ಕಲೆಯನ್ನು ಮೆಚ್ಚಿಕೊಂಡಿದ್ದ ಸರಕಾರ ಅಷ್ಟು ಸುಲಭವಾಗಿ ನಿಂಗವ್ವನೊಂದಿಗೆ ಅವರನ್ನು ಕಳಿಸಿಕೊಡಲು ಸಿದ್ಧರಿರಲಿಲ್ಲ.

ನಾಲ್ಕೈದು ದಿನ ಕಳೆಯಿತು. ನಿಂಗವ್ವನಿಗೆ ಹುಡುಗರನ್ನು ಕರೆದುಕೊಂಡೇ ಹೋಗಬೇಕೆಂಬ ಪಟ್ಟು. ಆದ್ದರಿಂದ ಅಷ್ಟೂ ದಿನಗಳ ಕಾಲ ಸರಕಾರವನ್ನು ಪರಿಪರಿಯಿಂದ ಬೇಡಿಕೊಂಡಳು. ಕೊನೆಗೆ ಅವಳ ಪ್ರೀತಿಭರಿತ ಒತ್ತಾಯಕ್ಕೆ ಸರಕಾರವೇ ಸೋಲಬೇಕಾಯಿತು. ಸರಕಾರ ನಿಂಗವ್ವನಿಗೆ ಹೇಳಿದರು – 'ಇವರಿಗೆ ಇದುವರೆಗೆ ಯಾವುದೇ ಕೊರತೆಯಾಗದಂತೆ ನಾನು ಜೋಪಾನ ಮಾಡಿದ್ದೇನೆ. ಇಂಥವರನ್ನು ಈಗ ನಿನ್ನ ಪಾಲಿಗೆ ಒಪ್ಪಿಸುತ್ತಿದ್ದೇನೆ. ನೀನು ಅಪ್ಪೇ. ಇನ್ನು ಮೇಲೆ ಇವರಿಗೆ ಯಾವ ಕೊರತೆಯೂ ಉಂಟಾಗದಂತೆ ಮಕ್ಕಳಂತೆ ನೋಡಿಕೊಂಡು ಜೋಪಾನ ಮಾಡಬೇಕು.' ಸರಕಾರ ಹೇಳಿದ್ದಕ್ಕೆಲ್ಲ ನಿಂಗವ್ವ 'ಆಗಲಿ' ಎಂದಳು. ಅವರು ಹೇಳಿದ ಮಾತನ್ನು ಚಾಚೂ ತಪ್ಪದಂತೆ ನಡೆಸಿಕೊಡುವುದಾಗಿ ವಚನಕೊಟ್ಟು ರಾಮಣ್ಣ ಮತ್ತು ವಾಮನರನ್ನು ಮಹಾಲಿಂಗಪುರಕ್ಕೆ ಕರೆತಂದಳು. ಇವರನ್ನು ಕರೆತಂದುದಕ್ಕೆ ನಿಂಗವ್ವನಿಗೆ ತುಂಬ ಹರ್ಷವಾಗಿತ್ತು. ಕರೆತಂದವಳೇ ಗೊಡಚಿಯ ಜಾತ್ರೆಯಲ್ಲಿ ಟಿಕೀಟು ಹಚ್ಚಿ ಆಟ ಇಟ್ಟಳು. ಇವರ ಆಟ ಜಾತ್ರೆಯಲ್ಲಿ ಧ್ವಜಹಾರಿಸಿ ಉಳಿದೆರಡು ಕಂಪನಿಗಳು ಕಿತ್ತೇ ಹೋದವಂತೆ. ಹೀಗೆ ರಾಮಣ್ಣರ ಆಗಮನದೊಂದಿಗೆ ಕಂಪನಿಗೆ ಒಂದು ಹೊಸರಂಗು ತುಂಬಿತು.

ವಾಮನ ನಿಂಗವ್ವನ ಕಂಪನಿಯಲ್ಲಿದ್ದುದು ಒಂದೇ ವರ್ಷ. ತರುವಾಯ ಅವನು ನಿಂಗವ್ವನ ಕಂಪನಿಯಿಂದ ಬೇರ್ಪಟ್ಟು ಮಹಾರಾಷ್ಟ್ರದ ನಾಟಕ ಕಂಪೆನಿಯೊಂದನ್ನು

---

೧. ನಣದಿ ಸರಕಾರ ಎಂದರೆ ನಣದಿ ದೇಸಾಯರು ಎಂದರ್ಥ. ರಾಮಣ್ಣನವರ ಮನೆತನ ಈ ದೇಸಾಯರಲ್ಲಿ ಆಶ್ರಿತ ಭಾವನೆ ತಾಳಿದ್ದರಿಂದ 'ಸರಕಾರ' ಎಂಬ ಶಬ್ದ ಪ್ರಯೋಗ.

ಸೇರಿದ. ರಾಮಣ್ಣ ಮಾತ್ರ ನಿಂಗವ್ವನ ಕಂಪನಿಯಲ್ಲಿ ನಾಲ್ಕು ವರ್ಷಗಳ ಕಾಲವಿದ್ದೂ ಕಂಪನಿಯನ್ನು ಉಚ್ಛ್ರಾಯ ಸ್ಥಿತಿಗೆ ಒಯ್ದರು. ನಿಂಗವ್ವ ರಾಮಣ್ಣರ ಕಲಾ ಪ್ರೌಢಿಮೆಯಲ್ಲಿಟ್ಟ ವಿಶ್ವಾಸ ಸುಳ್ಳಾಗಲಿಲ್ಲ. ಆಟದಿಂದ ಆಟಕ್ಕೆ ಆತನಿಂದ ತನ್ನ ಕಂಪನಿಗೆ ಹೆಸರು ತಂದುಕೊಂಡಳು. ಹೀಗೆ ಒಳ್ಳೆಯ ಕಲೆಯಿರುವಲ್ಲಿಗೆ ತಾನೇ ಬಂದು ಕಲಾವಿದರನ್ನು ಆಹ್ವಾನಿಸುವ, ಕರೆ ತರುವ ಕಲಾಪ್ರೇಮಿಯಾಗಿದ್ದಳು ನಿಂಗವ್ವ.

ಬರಗಿಯ ರಾಚಯ್ಯ ಸ್ವಾಮಿಗಳನ್ನಂತೂ ತುಂಬ ಚಾಣಾಕ್ಷತನದಿಂದ ತನ್ನ ಕಂಪನಿಗೆ ಸೇರಿಸಿಕೊಂಡಳು. ಬರಗಿ ರಾಚಯ್ಯ ಮತ್ತು ಅವರ ಗುರು ಬರಗಿ ಅಪ್ಪಾಲಾಲರು ಜಮಖಂಡಿಯ ಅಪ್ಪಾಲಾಲರ ಕಂಪನಿಯಲ್ಲಿದ್ದ ಸಂದರ್ಭ. ಒಂದು ದಿನ ನಿಂಗವ್ವ ಇವರಿಬ್ಬರನ್ನೂ ಮಹಾಲಿಂಗಪುರಕ್ಕೆ ಬರಮಾಡಿಕೊಂಡಳು. ತನ್ನ ಕಂಪನಿಯಲ್ಲಿ ಪಾತ್ರ ಮಾಡುತ್ತಿದ್ದ ಅನೇಕ ಕಲಾವಿದರು ಬಿಟ್ಟು ಹೋಗಿದ್ದಾರೆ. ಹೀಗಾಗಿ ಕಂಪನಿ ತುಂಬಾ ಆಪತ್ತಿನ ಸ್ಥಿತಿಯಲ್ಲಿದೆ, ಆದ್ದರಿಂದ ನೀವಿಬ್ಬರೂ ನನ್ನ ಕಂಪನಿಗೆ ಸೇರಿಕೊಳ್ಳಬೇಕೆಂದು ವಿನಂತಿಸಿಕೊಂಡಳು. ಇಬ್ಬರಿಗೂ ಐದೈದು ರೂಪಾಯಿ ಕೊಡುವುದಾಗಿ ಹೇಳಿದಳು. ನಿಂಗವ್ವ ಈ ರೀತಿ ವಿನಂತಿಸಿಕೊಳ್ಳುತ್ತಿರುವುದನ್ನು ಕಂಡ ಬರಗಿ ಅಪ್ಪಾಲಾಲ ಹಿಂದು ಮುಂದು ನೋಡದೆ ತಾವಿಬ್ಬರೂ ಬರುವೆವೆಂದು ಹೇಳಿ ಅವಳ ಆಹ್ವಾನವನ್ನು ಒಪ್ಪಿಕೊಂಡುಬಿಟ್ಟ. 'ಅತಿ ದೊಡ್ಡ ಮನಸ್ಯಾಳು ಆಕಿಮಾತ ಮೀರಾಕೀ ಬರತಿರಲಿಲ್ಲ' ಎನ್ನುತ್ತಾರೆ ರಾಚಯ್ಯನವರು. ಬರಗಿ ಅಪ್ಪಾಲಾಲ ಒಂದೇ ಕಂಪನಿಯಲ್ಲಿರುವ ಸ್ವಭಾವದವನಲ್ಲವೆಂದು ತನ್ನ ಕಂಪನಿಗೆ ಅವನನ್ನು ಸೇರಿಸಿಕೊಂಡ ವಿಷಯವನ್ನು ಪ್ರಸ್ತಾಪಿಸಿ ಅವನಿಂದ ಒಂದು ಕರಾರು ಪತ್ರ ಬರೆಯಿಸಿಕೊಂಡಳು. ಸರಿ, ಕರೆದಾಗ ಬಂದು ಪಾತ್ರಮಾಡುವುದಾಗಿ ಇಬ್ಬರೂ ತಿಳಿಸಿ ಊರಿಗೆ ಮರಳಿದರು.

ಬರಗಿ ಅಪ್ಪಲಾಲ ಮತ್ತು ಬರಗಿ ರಾಚಯ್ಯನವರು ನಿಂಗವ್ವನ ಕಂಪನಿಯನ್ನು ಸೇರಿರುವ ಸುದ್ದಿ ಕೂಡಲೇ ಮಹಾಲಿಂಗಪುರದ ತುಂಬ ಹರಡಿತು. ಇವರ ಕಲೆಗಾರಿಕೆಯನ್ನು ಈಗಾಗಲೇ ಕಂಡು, ಕೇಳಿದ್ದ ಮಹಾಲಿಂಗಪುರದ ಜನ ಜಾತ್ರೆ-ಓಕುಳಿ ಏನೊಂದೂ ಇಲ್ಲದೆ ಆಟವನ್ನು ಇಟ್ಟುಕೊಂಡು ಬಿಟ್ಟರು. ಮುಖ್ಯವಾಗಿ ಆಟ ಸುಳಿಸುವುದೊಂದೇ ಈ ಜನರ ಗುರಿಯಾಗಿತ್ತು. ಆಟವಿಟ್ಟುಕೊಂಡ ಸುದ್ದಿಯನ್ನು ತಿಳಿಸಲು ಒಬ್ಬ ಬರಗಿಗೆ ಬಂದ, ಕೃಷ್ಣ ಪಾತ್ರಕ್ಕಾಗಿ ಮಹಾಲಿಂಗಪುರಕ್ಕೆ ನಡೆಯಲು ರಾಚಯ್ಯನವರನ್ನು ಒತ್ತಾಯಿಸತೊಡಗಿದ. ಅಂದು ಬರಗಿ ಅಪ್ಪಾಲಾಲರು ಊರಲ್ಲಿರಲಿಲ್ಲ. ಗುರುವನ್ನು ಕೇಳದೆ ಊರು ಬಿಡುವಂತಿಲ್ಲ ಏನು ಮಾಡುವುದು ತೋಚದೆ ರಾಚಯ್ಯನವರು ಪೇಚಿಗೆ ಸಿಲುಕಿಕೊಂಡರು. ನಾಕು ಜನ ಹಿರಿಯರು ಕೂಡಿದರು. ಅಷ್ಟೊಂದು ವಿಶ್ವಾಸದಿಂದ ಕರೆಯಲು ಬಂದಿದ್ದಾರೆ, ಮಹಾಲಿಂಗಪುರಕ್ಕೆ ನೀನು ಹೋಗಬೇಕೆಂದು ಒತ್ತಾಯಪಡಿಸಿದರು. ಮನಸ್ಸಿಲ್ಲದಿದ್ದರೂ ರಾಚಯ್ಯನವರು ಕರೆಯಲು ಬಂದವನೊಂದಿಗೆ ಹೊರಟರು. ಬರಗಿಯಿಂದ ಹೊರಟ ಇವರು ಮುಧೋಳ ದಾಟಿ ಮಹಾಲಿಂಗಪುರವನ್ನು ತಲುಪಬೇಕು. ಇವರು ಮುಧೋಳ ತಲುಪುವ ವೇಳೆಗೆ ನಿಂಗವ್ವ

ಅಲ್ಲಿಗೆ ಬಂದು ಕುಳಿತಿದ್ದಳು. ರಾಚಯ್ಯ ಸ್ವಾಮಿಗಳು ತನ್ನ ಕಂಪನಿಯಿಂದ ಅಲುಗಾಡದಂತೆ ಒಂದು ಹಂಚಿಕೆಯನ್ನೇ ನಿಂಗವ್ವ ಸಜ್ಜು ಮಾಡಿಕೊಂಡು ಬಂದಿದ್ದಳು. ರಾಚಯ್ಯ ಬರುತ್ತಲೇ 'ನೀನು ನನ್ನ ಕಂಪನಿಯನ್ನು ಬಿಟ್ಟು ಹೋಗದಂತೆ ಕರಾರು ಪತ್ರ ಬರೆದುಕೊಡು' ಎಂದು ಹೇಳಿದಳು. ಈಗಾಗಲೇ ರಾಚಯ್ಯನವರ ಗುರು ಬರಗಿ ಅಪ್ಪಾಲಾಲ ಹಾಗೆ ಬರೆದುಕೊಟ್ಟಿರುವ ವಿಷಯವನ್ನು ತಿಳಿಸಿದಳು. ರಾಚಯ್ಯ ಎಷ್ಟೇ ಹಿಂದೆ ಮುಂದೆ ನೋಡಿದರೂ ನಿಂಗವ್ವ ಜಗ್ಗಲಿಲ್ಲ. ಬರಗಿ ಅಪ್ಪಾಲಾಲ ಶಿಷ್ಯನೊಂದಿಗೆ ತನ್ನ ಕಂಪನಿಯಲ್ಲಿ ನಿಲ್ಲಲು ವಚನಕೊಟ್ಟದ್ದನ್ನು ಉಲ್ಲೇಖಿಸಿ ಕರಾರುಪತ್ರ ಬರೆದುಕೊಡಲೇಬೇಕು ಎಂದು ಪಟ್ಟುಹಿಡಿದಳು. ಕೊನೆಗೂ ರಾಚಯ್ಯ ಸ್ವಾಮಿಗಳು ಆಕೆಯ ಒತ್ತಾಯಕ್ಕೆ ಮಣಿದು 'ಆಗಲಿ' ಎಂದರು. ಸಾವಿರ ರೂಪಾಯಿ ಕೊಟ್ಟು ರಾಚಯ್ಯನನ್ನು ಆಟದಲ್ಲಿ ತೆಗೆದುಕೊಂಡಿದ್ದೇನೆ, ಇವರು ಕಂಪನಿ ಬಿಟ್ಟು ಹೋಗುವಾಗ ರೂಪಾಯಿಯನ್ನು ಹಿಂದಿರುಗಿ ಕೊಡಬೇಕು ಎಂದು ಬರೆಯಿಸಿಕೊಂಡಳು. ಹೀಗೆ ನಿಂಗವ್ವನ ಕಂಪನಿಯನ್ನು ಸೇರಿದ ರಾಚಯ್ಯನವರು ಹೇಳುತ್ತಾರೆ. 'ಬಡವನಾದ ನಾನು ಸಾವಿರ ರೂಪಾಯಿ ಎಲ್ಲಿಂದ ತರುವುದಿತ್ತು? ಮೊದಮೊದಲು ಕರಾರುಪತ್ರಕ್ಕೆ ಅಂಜಿ ಆ ಕಂಪನಿಯಲ್ಲಿ ನಿಂತಿದ್ದ ನಾನು ಬರಬರುತ್ತ ತನ್ನ ಆ ಕಂಪನಿಗೆ ಮನಸಾ ಒಗ್ಗಿಕೊಂಡೆ' ಎಂದು ಹೇಳುತ್ತಾರೆ. ತಮ್ಮನ್ನು ತನ್ನ ಕಂಪನಿಗೆ ಸೇರಿಸಿಕೊಳ್ಳಲು ನಿಂಗವ್ವ ಹೂಡಿದ ಈ ತಂತ್ರ ರಾಚಯ್ಯನವರಿಗೆ ಮೋಸದ್ದೆನಿಸುವುದಿಲ್ಲ; ಕಂಪನಿಯ ಒಬ್ಬ ಯಜಮಾನತಿಯಾಗಿ ಅವಳು ನಟಿಸಿದ ಈ ವ್ಯವಹಾರಿಕ ಬುದ್ಧಿಯನ್ನು ಮೆಚ್ಚಿಕೊಳ್ಳುತ್ತಾರೆ.

ಹೆಸರುವಾಸಿಯಾಗಿದ್ದ ನಿಂಗವ್ವನ ಕಂಪನಿಯಲ್ಲಿ ಅನೇಕ ಕಲಾವಿದರು ದುಡಿದಿದ್ದಾರೆ. ಪ್ರಮುಖವಾಗಿ ನಣದಿ ರಾಮಣ್ಣ, ಬರಗಿ ರಾಚಯ್ಯ ಹುಕ್ಕೇರಿ ಸಿದ್ರಾಮಪ್ಪ, ಬಡಕುಂದ್ರಿ ಬಸಪ್ಪ, ಕೌಟಕೊಪ್ಪ ರಾಮಣ್ಣ, ಕರಗಾಂವಿ ಗುಂಡಪ್ಪ, ಬರಗಿ ಅಪ್ಪಾಲಾಲ ಮುಂತಾದ ಹಿರಿಯ ಕಲಾವಿದರು ಇವಳ ಕಂಪನಿಯಲ್ಲಿ ನಿಂತೋ ಪ್ರಸಂಗಾವಧಾನವಾಗಿ ಬಂದೋ ಪಾತ್ರಮಾಡಿದ್ದಾರೆ.

ಒಟ್ಟಾರೆ ನಿಂಗವ್ವ ತನ್ನ ಕಂಪನಿಯ ಏಳಿಗೆಗೆ ಏನೇನು ಬೇಕೋ ಅದನ್ನೆಲ್ಲ ಮಾಡಿದಳು. ಕೊನೆಯವರೆಗೆ ನಿಂಗವ್ವ ತನ್ನ ಕಂಪನಿ ಮೇಲಿನ ಪ್ರೀತಿಯನ್ನು ಕಳೆದುಕೊಳ್ಳದೆ ಮುಪ್ಪಾವಸ್ಥೆಯಲ್ಲಿಯೂ ಕೂಡ ಆಟಗಳಿಗೆ ಹೋಗುತ್ತಿದ್ದಳು. ಮೊಮ್ಮಗ ಮಹಾದೇವಪ್ಪ, ಮೊಮ್ಮಗಳು ಚಂದ್ರವ್ವ ಕಂಪನಿಯ ವ್ಯವಹಾರಗಳನ್ನು ನೋಡಿಕೊಳ್ಳಲು ಶಕ್ತರಾಗಿದ್ದರೂ ನಿಂಗವ್ವ ಮನೆಯಲ್ಲಿ ಮೂಲೆ ಹಿಡಿದು ಕುಳಿತುಕೊಳ್ಳಲು ಸಿದ್ಧಳಿರಲಿಲ್ಲ. ಆನಂದಕಂದರು ತಮ್ಮ ೨೫ ನೆಯ ವಯಸ್ಸಿನಲ್ಲಿ ನಿಂಗವ್ವನ ಆಟವನ್ನು ಮತ್ತೊಮ್ಮೆ ಬೆಟಗೇರಿಯಲ್ಲಿ ನೋಡಿದರು. ಆಗ ನಿಂಗವ್ವನಿಗೆ ಎಪ್ಪತ್ತರ ಸಮೀಪದ ವಯಸ್ಸು ಸುಗೂರಿ ಸತ್ಯಭಾಮಾ, ಕೊರವಂಜಿ ಪಾತ್ರ ಮಾಡುತ್ತಿದ್ದ. ನಿಂಗಾಸಾನಿ ಹಿಮ್ಮೇಳದಲ್ಲಿ ನಿಂತು ತಾಳ ಹಿಡಿದಿದ್ದಳು!

# ನಿಂಗವ್ವನ ಕಂಪನಿ : ಪ್ರಯೋಗಶೀಲತೆ

ನಿಂಗವ್ವನ ಕಂಪನಿ ದೀರ್ಘ ಇತಿಹಾಸವನ್ನು ಪಡೆದುಕೊಂಡಿರುವುದರೊಂದಿಗೆ ತನ್ನದೇ ಆದ ಹಲವು ವೈಶಿಷ್ಟ್ಯಗಳನ್ನು ಪಡೆದುಕೊಂಡಿದೆ. ಈ ಕಂಪನಿಯ ಕಾಲಾವಧಿ ದೀರ್ಘವಾಗಿರುವುದರಿಂದ ಪಾರಿಜಾತ ಪ್ರಯೋಗದ ಹಲವಾರು ಸ್ಥಿತ್ಯಂತರಗಳನ್ನು ಇಲ್ಲಿ ಕಾಣುತ್ತೇವೆ. ಸಂಗೀತ, ಮಾತು, ವೇಷಭೂಷಣ, ಆಧ್ಯಾತ್ಮ – ಹೀಗೆ ಬರುವ ಹಲವಾರು ಅಂಶಗಳು ಅವಳ ಕಂಪನಿಯ ವಿಶೇಷತೆಯನ್ನು ಖಚಿತಪಡಿಸುತ್ತವೆ.

ಕುಲಗೋಡ ತಮ್ಮಣ್ಣ ಯಾದವಾಡ ಮಲಕಪ್ಪನೊಂದಿಗೆ ಆಟವನ್ನು ಸಂಯೋಜಿಸುತ್ತಿದ್ದ ಕಾಲದಲ್ಲಿ, ಅಂದರೆ ೧೯ನೆಯ ಶತಮಾನದ ಮಧ್ಯದ ಸುಮಾರಿಗೆ ಉತ್ತರ ಕರ್ನಾಟಕದಲ್ಲಿ ಕರ್ನಾಟಕ ಸಂಗೀತ ಪದ್ಧತಿಯೇ ವಿಶೇಷವಾಗಿ ಜಾರಿಯಲ್ಲಿತ್ತು. 'ಈ ಕಾಲಕ್ಕೆ ಉತ್ತರ ಕರ್ನಾಟಕದಲ್ಲಿ ರೂಢವಾಗಿದ್ದ ಹಾಡುಗಳೆಂದರೆ ಹರಿದಾಸರ ಕೀರ್ತನೆಗಳು, ಜಾವಳಿ, ಶೃಂಗಾರ ಪದಗಳು, ಶ್ರೀ ಕೃಷ್ಣ ಪಾರಿಜಾತ, ಶ್ರೀ ವೆಂಕಟೇಶ ಪಾರಿಜಾತದಲ್ಲಿಯ ಹಾಡುಗಳು, ಬಳ್ಳಾರಿ ಬಸಪ್ಪನು ಕಲಿಸುತ್ತಿದ್ದ ಹರಿಶ್ಚಂದ್ರ, ಕೀಚಕವಧೆ ಮೊದಲಾದ ನಾಟಕದ ಕರ್ನಾಟಕೀ ಪದ್ಧತಿಯ ರಂಗಗೀತೆಗಳು ಇವೇ. ಮರಾಠಿ ನಾಟಕಕಾರರು ಈ ಹಾಡು ಕೀರ್ತನೆಗಳ ಧಾಟಿಗಳನ್ನೇ ಸ್ವೀಕರಿಸಿದ್ದಾರೆ.'[೧] ಇದೇ ಕಾಲಕ್ಕೆ ಪಾರಿಜಾತಕ್ಕೆ ಕೈಹಾಕಿದ ಕುಲಗೋಡ ತಮ್ಮಣ್ಣ ಹರಿದಾಸ ಪಂಥಕ್ಕೆ ಒಗ್ಗಿಕೊಂಡವನಷ್ಟೇ ಅಲ್ಲ, ಸ್ವತಃ ಜಾವಳಿ ಪದ್ಯಗಳನ್ನು ರಚಿಸುವವನಾಗಿದ್ದ.

ಕುಲಗೋಡ ತಮ್ಮಣ್ಣ ಅಪರಾಳ ತಮ್ಮಣ್ಣನ ಕಾವ್ಯವನ್ನು ಬಯಲಾಟವಾಗಿ ಮಾರ್ಪಡಿಸುವ ಹಂತದಲ್ಲಿ ಅಲ್ಲಿಂದ ಕಥೆ ಹಾಡುಗಳನ್ನು ಮಾತ್ರ ತೆಗೆದುಕೊಳ್ಳಲಿಲ್ಲ, ಆ ಕಾವ್ಯದ ಹಾಡುಗಳಿಗಿರುವ ಮಟ್ಟುಗಳನ್ನೂ ಕುಲಗೋಡ ತಮ್ಮಣ್ಣ ಸ್ವೀಕರಿಸಿದ. ಸಂಗೀತ ಬಲ್ಲ ಯಾದವಾಡ ಮಲಕಪ್ಪ ಪಾರಿಜಾತದ ಹಾಡುಗಳಿಗೆಲ್ಲ ಅಂದು ಪ್ರಚಾರದಲ್ಲಿದ್ದ ಕರ್ನಾಟಕೀ ಸಂಗೀತ ಪದ್ಧತಿಯನ್ನೇ ಅಳವಡಿಸಿರಲು ಸಾಕು. ಈ ಹಿನ್ನೆಲೆಯಲ್ಲಿ ಕುಲಗೋಡ ತಮ್ಮಣ್ಣನ ಕಾಲದಲ್ಲಿ ಪ್ರಯೋಗಗೊಂಡ ಪಾರಿಜಾತದ ಹಾಡುಗಳೆಲ್ಲ

---

೧. ಪ್ರಹ್ಲಾದ ಮುದ್ಗಲ್, ಸಾಧನೆ ೬–೪, ಮರಾಠಿ ಶ್ರೀ ಕೃಷ್ಣ ಪಾರಿಜಾತ ಮತ್ತು ನಮ್ಮ ನಾಟ್ಯ ಪರಂಪರೆ ಪು. ೧೩೬–೩೮.

ಕರ್ನಾಟಕಿ ಪದ್ಧತಿಯವು. ಇವನ ನಿರ್ದೇಶನದಲ್ಲಿ ಪಾತ್ರ ಮಾಡುತ್ತಿದ್ದವರೆಲ್ಲ ಕರ್ನಾಟಕಿ ಸಂಗೀತ ಪದ್ಧತಿಯನ್ನೇ ಅನುಸರಿಸಿದರು. ಕುಲಗೋಡ ತಮ್ಮಣ್ಣ, ಹುಕ್ಕೇರಿ ಸಿದ್ರಾಮಪ್ಪ ಯಾವ ರೀತಿ ಹಾಡುತ್ತಿದ್ದರೆಂದು ಹೇಳುವವರು ಇಲ್ಲವಾದರೂ ನಿಂಗಮ್ಮ ಕೊನೆಯವರೆಗೂ ಕರ್ನಾಟಕ ಸಂಗೀತ ಪದ್ಧತಿಯನ್ನೇ ತನ್ನ ಹಾಡುಗಳಿಗೆ ಆಧಾರವಾಗಿ ಇಟ್ಟುಕೊಂಡಿದ್ದಳೆಂದು ಅವಳ ಕಂಪನಿಯಲ್ಲಿ ಕೆಲಸ ಮಾಡಿದ, ಅವಳನ್ನು ಸಮೀಪವಾಗಿ ಕಂಡ ಅನೇಕ ಕಲಾವಿದರು ಹೇಳುತ್ತಾರೆ.[೨]

ನಿಂಗವ್ವನ ಕಂಪನಿಯಲ್ಲಿ ಕೆಲಸ ಮಾಡಿದ ಮಹಾಲಿಂಗಪುರದ ರಾಜೇಸಾಹೇಬ ಮತ್ತು ನಣದಿ ರಾಮಣ್ಣರು ಹಿಂದುಸ್ತಾನಿ ಪದ್ಧತಿಯ ಆಲೆಗಳನ್ನು ಪಾರಿಜಾತ ರಂಗಭೂಮಿಗೆ ತಂದರು. ಇವರ ಈ ಪ್ರವೇಶಕ್ಕೆ ಮೊದಲೇ ಅಂದರೆ ೧೯ನೆಯ ಶತಮಾನದ ಕೊನೆ ಕೊನೆಯಲ್ಲಿ ಉತ್ತರ ಕರ್ನಾಟಕವನ್ನು ಕ್ರಮೇಣ ಹಿಂದುಸ್ತಾನಿ ಸಂಗೀತ ಆಕ್ರಮಿಸಿಕೊಳ್ಳತೊಡಗಿತ್ತು ಎಂಬುದಕ್ಕೆ ಸಾಕಷ್ಟು ಸಾಕ್ಷ್ಯಾಧಾರಗಳಿವೆ. ಜನ ಕ್ರಮೇಣವಾಗಿ ಹೊಸರುಚಿಗೆ ಬಾಯಿ ಬಿಡುತ್ತಿದ್ದ ಕಾಲ. ಇಂಥ ಅವಸ್ಥೆಯಲ್ಲಿ ಹಿಂದೂಸ್ತಾನಿ ಸಂಗೀತ ಕಲಿತು ನಣದಿ ರಾಮಣ್ಣ ನಿಂಗವ್ವನ ಕಂಪನಿ ಸೇರಿದ್ದು ಪಾರಿಜಾತ ಸಂಗೀತ ಅಧ್ಯಯನದಲ್ಲಿ ಬಹುಮುಖ್ಯವಾದ ಮಜಲು.

೧೯೧೪ರಲ್ಲಿ ಪಾರಿಜಾತದ ಅಟ್ಟವನ್ನು ಏರಿದ ನಣದಿ ರಾಮಣ್ಣ ಬಾಲ್ಯದಲ್ಲಿಯೇ ಸಂಗೀತ ಕಲಿತವರು. ಇವರ ತಂದೆ ಕೃಷ್ಣಾಜಿ ಸಿತಾರ ಬಾರಿಸುತ್ತಿದ್ದರು. ಇವರ ಚಿಕ್ಕಪ್ಪ ನಾಟಕಗಳನ್ನಾಡುತ್ತಿದ್ದರು. ನಾಟಕವಾಡುತ್ತಿದ್ದ ಇವರ ಚಿಕ್ಕಪ್ಪನೇ ಇವರಿಗೆ ಗುರುವೂ ಹೌದು. ರಾಮಣ್ಣ ಎಂಟನೆಯ ವಯಸ್ಸಿನವರಿರುವಾಗಲೇ ಅವರನ್ನು ಸಿತಾರ ತಂಬೂರಿ ನುಡಿಸಲು ಅವರ ಚಿಕ್ಕಪ್ಪ ಒತ್ತಾಯಿಸುತ್ತಿದ್ದ. ಅಷ್ಟೇ ಅಲ್ಲ, ಬೆಳಗಾವಿಗೆ ನಾಟಕ ನೋಡಲು ಕರೆದುಕೊಂಡು ಹೋಗುತ್ತಿದ್ದ. ಇದು ೧೯೦೭ರ ಸುಮಾರಿಗೆ ಅಂದರೆ ಮರಾಠಿ ರಂಗಭೂಮಿ ಹಿಂದುಸ್ತಾನಿ ಸಂಗೀತವನ್ನು ರೂಢಿಸಿಕೊಂಡು ಅಳವಡಿಸಿಕೊಳ್ಳುತ್ತಿದ್ದ ಕಾಲದಲ್ಲಿ ನಡೆದುದು. ಹೀಗೆ ನಾಟಕಗಳನ್ನು ನೋಡಲು ಹೋಗುತ್ತಿದ್ದ ಬಾಲಕ ರಾಮಣ್ಣನಿಗೆ ಚಿಕ್ಕಪ್ಪನಂತೆಯೇ ಹಿಂದುಸ್ತಾನಿ ಸಂಗೀತದ ರುಚಿ ಹತ್ತಿಕೊಂಡಿತು. ಅದೇ ಬಗೆಯ ಶಿಕ್ಷಣ ಮನೆಯಲ್ಲಿಯೂ ದೊರೆಯಿತು. ೧೯೧೭ರ ಸುಮಾರಿಗೆ ನಿಂಗವ್ವನ ಕಂಪನಿಗೆ ಬಂದು ಸೇರಿದ ರಾಮಣ್ಣ ತಾನು ಕಲಿತ ಹಿಂದುಸ್ತಾನಿ ಸಂಗೀತವನ್ನೇ ಪಾರಿಜಾತ ಹಾಡುಗಳಿಗೆ ಹೊಂದಿಸತೊಡಗಿದ. ಈ ಹೊತ್ತಿಗಾಗಲೇ ಅಲ್ಲಲ್ಲಿ ಹಿಂದುಸ್ತಾನಿ ಸಂಗೀತವನ್ನು ಕೇಳಿದ್ದ ಹಳ್ಳಿಯ ಜನರಿಗೆ ರಾಮಣ್ಣ ಹಾಡುತ್ತಿದ್ದ ಹಿಂದುಸ್ತಾನಿ ಪದ್ಧತಿಯ ಪಾರಿಜಾತದ ಹಾಡುಗಳು ಹೊಸರುಚಿಯನ್ನು ನೀಡಿದವು. ಇದುವರೆಗೆ ಕರ್ನಾಟಕಿ ಪದ್ಧತಿಯ ಹಾಡುಗಳನ್ನು ಕೇಳಿದ ಕಿವಿಗಳಿಗೆ ಇದು ಹೊಸತೆನಿಸಿ ಅದ್ಭುತವಾಗಿ ಹಾಡುತ್ತಿದ್ದ ರಾಮಣ್ಣನ ಹಾಡಿನ ಸೊಗಸಿಗೆ ಜನ ಮಾರುಹೋದರು. ರಾಮಣ್ಣನ ಈ ಬಗೆಯ

---

೨. ಶ್ರೀ ಕೃಷ್ಣಪಾರಿಜಾತ : ಒಂದು ಅಧ್ಯಯನ : ಡಾ. ಶ್ರೀ ರಾಮ ಇಟ್ಟಣ್ಣವರ, ಪು. ೨೦೭

ಸಂಗೀತಕ್ಕೆ ನಿಂಗವ್ವನ ಕಂಪನಿಯಲ್ಲಿ ಯಾವ ತಡೆಯೂ ಉಂಟಾಗಲಿಲ್ಲ ಎನ್ನುವುದೇ ಒಂದು ವಿಶೇಷತೆ.

ನಿಂಗವ್ವ ತನ್ನ ಕಂಪನಿಯನ್ನು ಭಾವನಾತ್ಮಕವಾಗಿ ಪ್ರೀತಿಸುತ್ತಿರುವುದರೊಂದಿಗೆ ವ್ಯವಹಾರಿಕ ಜ್ಞಾನವನ್ನೂ ಪಡೆದವಳಾಗಿದ್ದಳು. ತನ್ನ ಕಂಪನಿಯ ಒಬ್ಬ ಹುಡುಗ ತನ್ನ ವಿಶಿಷ್ಟ ಸಂಗೀತ ಶಕ್ತಿಯ ಮುಖಾಂತರ ಜನರನ್ನು ಆಕರ್ಷಿಸುತ್ತಿದ್ದಾನೆ ಎಂದರೆ ಕೌಜಲಗಿ ನಿಂಗವ್ವ ಬಹುವಾಗಿ ಹೆಮ್ಮೆ ಪಟ್ಟು ಆವನನ್ನು ಹುರಿದುಂಬಿಸಿರಬೇಕು. ಕಂಪನಿಯ ಯಜಮಾನತಿಯೇ ತನ್ನ ಹೊಸ ಬಗೆಯ ರಾಗಾಲಾಪಕ್ಕೆ ಹುರುಪುಕೊಡುತ್ತಾಳೆ ಎಂದರೆ ರಾಮಣ್ಣರಿಗೆ ಇನ್ನಷ್ಟು ಇದನ್ನು ಬೆಳೆಸಬೇಕೆಂಬ ಹಂಬಲವುಂಟಾಗಿ ಈ ವಿಷಯದಲ್ಲಿ ನಿತ್ಯವೂ ಪ್ರಯೋಗಶೀಲನಾದ. ಹಾಡುಗಳಿಗೆಲ್ಲ ಬಗೆಬಗೆಯ ದಾಟಿಗಳನ್ನು ಹಾಕಿ ಊರಿಂದ ಊರಿಗೆ ದಾಟಿಗಳನ್ನು ಬದಲಾಯಿಸುತ್ತಿದ್ದ. ಹೀಗಾಗಿ ರಾಮಣ್ಣನ ಹಾಡುಗಳು ಹಳ್ಳಿಗರಿಗೆ ಕೇಳಿದಷ್ಟು ಸಲವೂ ನಾವೀನ್ಯತೆಯನ್ನು ಒದಗಿಸಿಕೊಡುವಂಥವಾಗಿದ್ದವು. ರಾಮಣ್ಣನ ಈ ಬಗೆಯ ಹಾಡುಗಳನ್ನು ಅವರ ತಲೆಮಾರಿನ ಕಲಾವಿದರು ಅನುಕರಿಸತೊಡಗಿದರು; ಅಷ್ಟೇ ಅಲ್ಲ, ಮುಂದಿನ ಕಲಾವಿದರಿಗೆಲ್ಲ ಇದೊಂದು ದಾರಿಯೇ ಆಯಿತು. ಬರಗಿ ರಾಚಯ್ಯ, ಕೌಟಕೊಪ್ಪ ರಾಮಣ್ಣ, ಜಾಡರ ಈರಪ್ಪ, ಟಕ್ಕಳರ ವಿಠ್ಠಲ ಮುಂತಾದ ಕಲಾವಿದರೆಲ್ಲ ರಾಮಣ್ಣ ಸೇರ್ಪಡಿಸಿದ ಸಂಗೀತದ ತೆಕ್ಕೆಗೆ ಸಿಲುಕಿಕೊಂಡರು. ಹೀಗಾಗಿ ಇವರೆಲ್ಲ ಕರ್ನಾಟಕ ಸಂಗೀತದಿಂದ ದೂರವೇ ಉಳಿದರು. ಪ್ರೇಕ್ಷಕರು ಕೂಡ ಈ ಹೊಸ ರುಚಿಗೆ ಸಂಪೂರ್ಣವಾಗಿ ಒಗ್ಗಿಕೊಂಡಿದ್ದರಿಂದ ಹಿಂದುಸ್ತಾನಿ ಸಂಗೀತಕ್ಕೇ ಹೊಂದಿಕೊಂಡರು, ಅದನ್ನೇ ಆರಾಧಿಸತೊಡಗಿದರು. ಶುದ್ಧ ಕರ್ನಾಟಕ ಸಂಗೀತದಲ್ಲಿಯೇ ಹಾಡುತ್ತಿದ್ದ ನಿಂಗವ್ವ ತಾನು ನೋಡನೋಡುತ್ತಿರುವಂತೆಯೇ ತನ್ನೆದುರು ತನ್ನ ಕಂಪನಿಯಲ್ಲಿಯೇ ಈ ಸ್ಥಿತ್ಯಂತರವನ್ನು ಕಾಣುವಂತಾಯಿತು.

ನಣದಿ ರಾಮಣ್ಣ, ಬರಗಿ ರಾಚಯ್ಯ ಮುಂತಾಗಿ ತನ್ನ ಕಂಪನಿಯಲ್ಲಿ ಆಗಿಹೋದ ಪ್ರಸಿದ್ಧ ಕಲಾವಿದರು ಯಾರು ಎಷ್ಟೇ ಹಿಂದುಸ್ತಾನಿ ಸಂಗೀತಕ್ಕೆ ಒಗ್ಗಿಕೊಂಡಿರಲಿ ನಿಂಗವ್ವ ಮಾತ್ರ ತಾನು ಕಲಿತು ಹಾಡುತ್ತ ಬಂದ ಕರ್ನಾಟಕ ಸಂಗೀತ ಪದ್ಧತಿಯನ್ನು ಮಾತ್ರ ಕೈಬಿಡಲಿಲ್ಲ. ಅವಳು ಹಾಡುತ್ತಿದ್ದ ಎಲ್ಲ ಹಾಡುಗಳೂ ಕರ್ನಾಟಕೀ ಸಂಗೀತ ಪದ್ಧತಿಯನ್ನೇ ಅವಲಂಬಿಸಿದ್ದವು. ಅವಳು ಕರ್ನಾಟಕ ಸಂಗೀತ ಪದ್ಧತಿಯಲ್ಲಿ ಹಾಡುತ್ತಿದ್ದ ಎರಡು ಹಾಡುಗಳನ್ನು ಬೆಟಗೇರಿ ಕೃಷ್ಣಶರ್ಮರು ಉದಾಹರಿಸುತ್ತಿದ್ದರು.

೧. ತರುಣಿಯ ಮಾತಿಗೆ ಮರುಳಾಗುವರೇ
೨. ಸುಂದರಾ ಛಲವ್ಯಾತರೋ
ಜಲಜಾಕ್ಷನ ಲಲನೆಯೊಳು

– ಎಂಬ ಈ ಎರಡೂ ಶೃಂಗಾರ ಪ್ರಧಾನವಾದ ಜಾವಡಿ(ಳಿ) ಹಾಡುಗಳು. ತನ್ನ ಕಂಪನಿಯಲ್ಲಿ ಬೇರೆಯವರು ಹಾಡುತ್ತಿದ್ದ ಹಿಂದುಸ್ತಾನಿ ಸಂಗೀತ ಪದ್ಧತಿಗೆ ನಿಂಗವ್ವ

ಮರುಳಾಗದಿದ್ದುದು ಆವಳ ವೈಯಕ್ತಿಕ ಅಭಿರುಚಿ, ಯಾದವಾಡ ಮಲಕಪ್ಪ, ಕುಲಗೋಡ ತಮ್ಮಣ್ಣರ ಕಾಲದಿಂದಲೂ ತಾನು ಇದೇ ಪದ್ಧತಿಯಲ್ಲಿ ಹಾಡುತ್ತ ಬಂದವಳು. ಇನ್ನು ಈ ಮುಪ್ಪಾವಸ್ಥೆಯಲ್ಲಿ ಪ್ರಯೋಗಶೀಲತೆಯೇಕೆ ಎನಿಸಿರಬೇಕು. ಅಥವಾ ಹಳೆಯದನ್ನು ಬಿಡಲಾರದ ಮೋಹವೂ ಆವರಿಸಿರಬೇಕು. ಅಂತೂ ನಿಂಗವ್ವ ಕರ್ನಾಟಕ ಸಂಗೀತ ಶೈಲಿಯಲ್ಲಿಯೇ ತನ್ನ ಜೀವಮಾನದ ಕೊನೆಯ ತನಕ ಹಾಡಿದಳು.

ನಿಂಗವ್ವನ ಕಂಪನಿಯಲ್ಲಿ ಮಾತು, ಸಂಭಾಷಣೆಯ್ನ ರೀತಿಯಲ್ಲೂ ಪ್ರಯೋಗಶೀಲತೆ ನಡೆದದ್ದುಂಟು, ಮಾರ್ಪಾಡು ತಂದದ್ದುಂಟು. ಮಹಾಲಿಂಗಪುರದ ರಾಜೇಸಾಬ ಅಥವಾ ನಣದಿ ರಾಮಣ್ಣ ಕೃಷ್ಣ ಪಾತ್ರವಾಗಿ ಪ್ರವೇಶಿಸುವುದಕ್ಕಿಂತ ಮೊದಲು ಕೃಷ್ಣ ಪಾತ್ರಕ್ಕೆ ಹೆಚ್ಚಿನ ಗಮನವನ್ನೇ ಹರಿಸಿರಲಿಲ್ಲವಂತೆ. ಮಲಕಪ್ಪ, ತಮ್ಮಣ್ಣರು ಆಟವಾಡುತ್ತಿದ್ದ ದಿನಗಳಲ್ಲಾಗಲಿ ಕೌಜಲಗಿ ನಿಂಗವ್ವನ ಕಂಪನಿಯನ್ನು ನಣದಿ ರಾಮಣ್ಣ ಸೇರುವುದಕ್ಕೆ ಮುಂಚಿನ ದಿನಗಳಲ್ಲಾಗಲಿ ಕೃಷ್ಣ ಪಾತ್ರಕ್ಕೆ ಸಂಭಾಷಣೆಯ ಕಳೆಯಿರಲಿಲ್ಲ. ಆಟದ ತುಂಬ ಆಕ್ರಮಿಸಿಕೊಳ್ಳುತ್ತಿದ್ದವರು ಸತ್ಯಭಾಮೆ ಮತ್ತು ರುಕ್ಮಿಣಿಯರು. ಒಬ್ಬ ಸಣ್ಣ ಹುಡುಗನನ್ನು ಇವರಿಬ್ಬರ ಮಧ್ಯದಲ್ಲಿ ನಿಲ್ಲಿಸಲಾಗುತ್ತಿತ್ತು. ಇವನ ಕೊರಳಿಗೊಂದು ದಡಿ ಧೋತ್ರವಿರುತ್ತಿತ್ತು. ಅವನಿಗೆ ಯಾವ ಹಾಡು ಸಂಭಾಷಣೆ ಬರಬೇಕೆಂಬ ನಿಯಮವಿರಲಿಲ್ಲ. ಕೇವಲ ಸತ್ಯಭಾಮೆ ರುಕ್ಮಿಣಿಯರ ಸಂಭಾಷಣೆ ಕೇಳುವವನಾಗಿದ್ದ. ಬಹಳವಾದರೆ ಒಬ್ಬೊಬ್ಬರ ಮಾತು ಮುಗಿದ ಮೇಲೆ 'ಇನ್ನು ನೀನು ಹೇಳು ರುಕ್ಮಿಣಿ, ಇನ್ನು ನೀನು ಹೇಳು ಸತ್ಯಭಾಮೆ' ಎನ್ನುವವನಾಗಿದ್ದ. ಅಪರಾಳ ಪಾರಿಜಾತ ಕಾವ್ಯವನ್ನು ಅರ್ಥೈಸಿಕೊಂಡಿದ್ದ ನಣದಿ ರಾಮಣ್ಣ ವಿಚಾರ ಮಾಡಿದರು. ಕೃಷ್ಣ ಪಾತ್ರ ಇಷ್ಟು ಸಪ್ಪೆಯಾಗಬೇಕೆ? ಮುಂದೆ ಈ ಪಾತ್ರಕ್ಕೆ ಹಾಡು–ಸಂಭಾಷಣೆಗಳನ್ನು ಹೊಂದಿಸಿ ಗಂಭೀರ ಸ್ವರೂಪ ಕೊಟ್ಟು ಬೆಳೆಸಿದವರು ನಣದಿ ರಾಮಣ್ಣ. ಈ ಪ್ರಯೋಗಶೀಲತೆ ನಡೆದದ್ದು ನಿಂಗಮ್ಮನ ಕಂಪನಿಯಲ್ಲಿ. ಇದಕ್ಕೆ ಕೌಜಲಗಿ ನಿಂಗವ್ವನ ಅನುಮತಿಯ ಮುದ್ರೆಯಿತ್ತು ಎಂಬುದನ್ನು ಬಿಡಿಸಿ ಹೇಳಬೇಕಾಗಿಲ್ಲ. ನಿಂಗವ್ವನ ಕಂಪನಿಯಲ್ಲಿ ರಾಮಣ್ಣ ಕೃಷ್ಣ ಪಾತ್ರ ಮಾಡುತ್ತಿರುವಾಗ ಈ ಪಾತ್ರದ ವಿಷಯದಲ್ಲಿ ಅವರು ತೋರಿದ ಪ್ರಯೋಗಶೀಲತೆಯನ್ನು ಬಹಳಷ್ಟು ಜನ ಮೆಚ್ಚಿದ್ದಾರೆ. ಸಂಗಡವೇ ನಿಂಗವ್ವ ಅವರಿಗೆ ಕೊಟ್ಟ ಪ್ರೋತ್ಸಾಹವನ್ನೂ ನೆನೆಯುತ್ತಾರೆ.

ಕೇವಲ ಕೃಷ್ಣ ಪಾತ್ರಕ್ಕಲ್ಲ ಇಡೀ ಪಾರಿಜಾತಕ್ಕೇ ಸಂಭಾಷಣೆಯ ಶಕ್ತಿ ತುಂಬಿದ ಪಾರಿಜಾತವನ್ನು ನಿಂಗವ್ವ ಜನಪ್ರಿಯಗೊಳಿಸಿದಳು. ಮೊದಮೊದಲು ಪಾರಿಜಾತದಲ್ಲಿ ಕೇವಲ ಹಾಡುಗಳೇ ಇದ್ದುವಂತೆ – ಕೇವಲ ಹಾಡುವುದು, ಹಾಡುವುದು. ಪಾರಿಜಾತದಲ್ಲಿ ಮಾತುಗಳಿಗೆ ಆದ್ಯತೆ ಕೊಟ್ಟು ಸಂಭಾಷಣೆಯನ್ನು ಬೆಳೆಯಿಸಿದವಳೇ ನಿಂಗವ್ವ ಎಂಬುದು ಬರಗಿ ರಾಚಯ್ಯನವರ ಖಚಿತ ಹೇಳಿಕೆ. ಇಡೀ ರಾತ್ರಿ ಹಾಡು ಹೇಳುವುದಾಗಲಿ, ಹಾಡು ಕೇಳುವುದಾಗಲಿ ಎಷ್ಟರ ಮಟ್ಟಿಗೆ ಸಹ್ಯ ಎಂಬುದನ್ನು ಆಲೋಚಿಸಬೇಕು. ಸಂಭಾಷಣೆಯನ್ನು ಹೆಣೆಯುತ್ತ ಹೋದರೆ ಬೇರೆ ಬೇರೆ ಭಾವಗಳನ್ನು ಹಾಕಿ ಪ್ರೇಕ್ಷಕರನ್ನು

ತಣಿಸಬಹುದು. ಕೇವಲ ಹಾಡು ಪ್ರಬುದ್ಧ ಪ್ರೇಕ್ಷಕರನ್ನು ತಣಿಸಬಹುದು, ಸಾಮಾನ್ಯರನ್ನಲ್ಲ. ಕಥೆಯನ್ನು ಹಿಂಬಾಲಿಸಲು ಸಂಭಾಷಣೆ ಮುಖ್ಯ. ಮೇಲಾಗಿ ಭಾವಾಭಿವ್ಯಕ್ತಿಗೆ ಹಾಡುವ ಪದ್ಯಗಳಿಗಿಂತ ಸಂಭಾಷಣೆಯ ಮಾತುಗಳು ಹೆಚ್ಚು ಉಚಿತವೆನಿಸುತ್ತವೆ. ಈ ಎಲ್ಲ ಹಿನ್ನೆಲೆಯಲ್ಲಿ ಯೋಚಿಸಿದ ನಿಂಗವ್ವ ತನ್ನ ಕಂಪನಿಯ ಸೃಜನಶೀಲ ಕಲಾವಿದರನ್ನು ಈ ದಿಶೆಯಲ್ಲಿ ಪ್ರೋತ್ಸಾಹಿಸಿದ್ದು ನಿಂಗವ್ವನ ಪ್ರಯೋಗಶೀಲ ವ್ಯಕ್ತಿತ್ವವನ್ನು ಬಿಂಬಿಸುತ್ತದೆ.

ಬರಗಿ ರಾಚಯ್ಯ ಸ್ವಾಮಿಗಳೂ ನಿಂಗವ್ವನ ಕಂಪನಿ ಸೇರಿದ ಮೇಲೆ ಆಧ್ಯಾತ್ಮದ ಅನೇಕ ವಿಷಯಗಳನ್ನು ಕೃಷ್ಣ ಪಾತ್ರಧಾರಿಯಾಗಿ ಸೇರಿಸಿದರು. ರಾಚಯ್ಯ ಸ್ವಾಮಿಗಳು ತಮಗೆ ಸೊಗಸೆನಿಸಿದ, ಪ್ರೇಕ್ಷಕರಿಗೆ ಹಿಡಿಸುವ ಯಾವ ಮಾತನ್ನು ಸೇರಿಸಿದರೂ ನಿಂಗವ್ವ ವಿರುದ್ಧ ಹೇಳುತ್ತಿರಲಿಲ್ಲ. ಸಂಗೀತದ ವಿಷಯದಲ್ಲಿ ಕೃಷ್ಣ ಪಾತ್ರ ವಿಷಯದಲ್ಲಿ ನಣದಿ ರಾಮಣ್ಣ ಮಾಡಿಕೊಂಡ ಮಾರ್ಪಾಡುಗಳಿಗೆ ಆಸ್ತು ಹೇಳಿದಂತೆಯೇ ಬರಗಿ ರಾಚಯ್ಯ ಸ್ವಾಮಿಗಳು ಹೇಳಿದ್ದನ್ನೂ ಒಪ್ಪಿಕೊಳ್ಳುತ್ತಿದ್ದಳು. ಬರಗಿ ರಾಚಯ್ಯ ಸ್ವಾಮಿಗಳು ಬಹುದೊಡ್ಡ ಕಲಾವಿದರಾದ್ದರಿಂದ ಅವರು ಆಟ್ಟದ ಮೇಲೆ ಹೇಳುವ ಮಾತುಗಳನ್ನು ತೆಗೆದು ಹಾಕುವ ಸಣ್ಣತನವನ್ನು ನಿಂಗವ್ವ ತೋರುತ್ತಿರಲಿಲ್ಲ.

ಇದು ನಿಂಗವ್ವನ ದೊಡ್ಡಸ್ಥಿಕೆ. ನಿಂಗವ್ವ, ತಾನು ಕಂಪನಿಗಷ್ಟೇ ಒಡತಿಯಾಗಿರಬಹುದು, ಆದರೆ ಕಲಾವಿದರ ಕಲಾಪ್ರೌಢಿಮೆಗಲ್ಲ ಎಂಬುದನ್ನರಿತ ಚಾಣಾಕ್ಷೆಯಾಗಿದ್ದಳು. ಕೇವಲ ಹಳೆಯದಕ್ಕೇ ಜೋತುಬಿದ್ದು ಪ್ರೇಕ್ಷಕರನ್ನು ಏಕತಾನದ ಬೇಸರದ ಕೂಪಕ್ಕೆ ಎಳೆಯುವವಳಾಗಿರಲಿಲ್ಲ, ಕಾಲಬದಲಾದಂತೆ ಪ್ರೇಕ್ಷಕರು ಬೇಡುವ ಹೊಸರುಚಿಗಳಿಗೆ ತನ್ನ ಕಲಾವಿದರ ಮುಖಾಂತರ ತನ್ನ ಕಂಪನಿಯನ್ನು ತೆರೆದಿಟ್ಟಳು.

ನಿಂಗವ್ವನ ಕಂಪನಿಯಲ್ಲಿ ಸುಮಾರು ೨೦ ವರ್ಷಗಳ ಕಾಲ ಕೃಷ್ಣ ಪಾತ್ರ ಮಾಡಿದ ಬರಗಿ ರಾಚಯ್ಯ ಸ್ವಾಮಿಗಳು ಹೇಳುವಂತೆ ಅವಳ ಕಂಪನಿಯ ಆರಂಭದ ವೇಷ ಭೂಷಣಗಳು ಹೀಗಿದ್ದವು.

ಆಗಿನ ಕಾಲದಲ್ಲಿ ಕೃಷ್ಣ ಪೈರಣ ಅಂಗಿ ತೊಟ್ಟು ಮೇಲೆ ಜಾಕೀಟು ಹಾಕಿ ಜರದ ಪಟಕಾ ಸುತ್ತಿಕೊಂಡು ಕೊರಳಿಗೆ ದಡಿಧೋತ್ರ ಹಾಕಿಕೊಳ್ಳುತ್ತಿದ್ದ. ಸ್ತ್ರೀವೇಷಧಾರಿಗಳು ಸೀರೆ ಕುಪ್ಪಸ ತೊಟ್ಟು ಕರಿನಾರಿಗೆ ಮಸಿ ಎದ್ದಿದ ಟೋಪನ್ನನ್ನು ಧರಿಸಿಕೊಳ್ಳುತ್ತಿದ್ದರು. ನಾರದ ಕರಿನಾರು ಹೆಣೆದು ಗಡ್ಡಮೀಸೆ ಕಟ್ಟಿಕೊಳ್ಳುತ್ತಿದ್ದ. ಒಂದು ಶಾಲು ಅಥವಾ ಕೆಂಪು ಮಡಿಯನ್ನು ಹೊದಿಕೆಯಾಗಿ ಬಳಸುತ್ತಿದ್ದ. ಕೊರವಂಜಿಯ ವೇಷ ವಿಶಿಷ್ಟವಾಗಿರುತ್ತಿತ್ತು. ಮಲಮಲ ಅರಿವೆಯನ್ನು ಗುಲಾಬಿ ಅಥವಾ ಹಳದಿ ಬಣ್ಣಕ್ಕೆ ಅದ್ದಿ ಉಡುವುದು ರೂಢಿಯಲ್ಲಿತ್ತು. ಉಪರಾಟಿ ಸೆರಗು ಹೊದಿಯುತ್ತಿದ್ದಳು. ಕೊರಳಲ್ಲಿ ಮುತ್ತಿನ ಲಡಿ ಕಟ್ಟುತ್ತಿದ್ದಳು. ಸತ್ಯಭಾಮಾ ರುಕ್ಮಿಣಿಯರು ಸೀರೆ ಉಡುವ ಪದ್ಧತಿ ಕಚ್ಚೆ ಹಾಕಿ ಉಡುವುದಾಗಿತ್ತು.

ಬಣ್ಣಕ್ಕೆ ಅರದಾಳವನ್ನು ಕೊಬ್ಬರಿ ಎಣ್ಣೆಯಲ್ಲಿ ಕಲಸಿ ಹಚ್ಚಿಕೊಳ್ಳುವುದು ರೂಢಿಯಲ್ಲಿತ್ತು. ಹುಬ್ಬು ಕೊರೆದುಕೊಳ್ಳಲು ಕಾಡಿಗೆಯನ್ನು ಬಳಸಲಾಗುತ್ತಿತ್ತು. ತೀರ ಪ್ರಾರಂಭದ ದಿನಗಳಲ್ಲಿ ಹಿಲಾಲೇ ದೀಪದ ವ್ಯವಸ್ಥೆಗಿತ್ತು. ಇಡೀ ರಾತ್ರಿ ಹಿಲಾಲದ ಕಾಡಿಗೆ ವೇಷಧಾರಿಗಳ ಮುಖಕ್ಕೆ ಬಡಿದು ಹಚ್ಚಿದ ಬಣ್ಣ ಹುಬ್ಬಿದ ಕಾಡಿಗೆ ಬೆಳಗಾಗುವುದರೊಳಗಾಗಿ ಒಂದಾಗಿ ಮುಖವೆಲ್ಲ ಕಪ್ಪುಬಣ್ಣಕ್ಕೆ ತಿರುಗುತ್ತಿತ್ತು. ತೊಟ್ಟ ವೇಷವೆಲ್ಲ ಕಾಡಿಗೆಯಾಗಿ ಮೂಗಿನಲ್ಲೆಲ್ಲ ಕಾಡಿಗೆ ಪ್ರವೇಶಿಸುತ್ತಿತ್ತು. ಕಾಲ ಕ್ರಮೇಣ ವೇಷಭೂಷಣಗಳಲ್ಲಿ ಬದಲಾವಣೆಗಳಾದವು. ಈ ಬದಲಾವಣೆಯ ಬಹಳಷ್ಟು ಹಂತಗಳನ್ನು ನಿಂಗವ್ವನ ಕಂಪನಿ ಕಂಡಿದೆ. ಬದಲುಗೊಂಡ ಹಲವಾರು ವೇಷಭೂಷಣಗಳಲ್ಲಿ ಅವಳು ಮಾಡಿದ ಬದಲಾವಣೆಯನ್ನು ಬೆರಳಿಟ್ಟು ತೋರಿಸುವುದು ಕಷ್ಟವಾದರೂ ಮುಂಚೆ ನೋಡಿದಂತೆ ನಿಂಗವ್ವನ ಪ್ರಯೋಗಶೀಲ ಮನಸ್ಸು ಬದಲಾವಣೆಗೊಂಡ ಕೆಲವಕ್ಕಾದರೂ ಕಾರಣವಾಗಿರಬೇಕು.

ನಿಂಗವ್ವನ ಕಂಪನಿಯ ಆರಂಭದಲ್ಲಿ ಹಾರ್ಮೋನಿಯಂ ಇರಲಿಲ್ಲ. ನೀರಿನಲ್ಲಿ ನವಿಲುಗರಿ ಇಟ್ಟು ಎಳೆದು ಧ್ವನಿ ಹೊರಡಿಸುವ ಉಪಕರಣವೊಂದನ್ನು ಸಂಗೀತಕ್ಕೆ ಆಧಾರವಾಗಿ ಜೋಡಿಸಲಾಗುತ್ತಿತ್ತು. ಗಲುಗಿನಿಂದ ಮಾಡಿದ ಉಪಕರಣವೂ ಹೀಗೆಯೇ ಸ್ವರಕ್ಕೆ ಆಧಾರವಾಗಿರುತ್ತಿತ್ತಂತೆ. ತರುವಾಯ ಪಿಟೀಲು ಬಂತು. ಆ ಮೇಲೆಯೇ ಹಾರ್ಮೋನಿಯಂ ಪ್ರವೇಶ ಮಾಡಿತು.

# ಕಲಾವಿದೆಯಾಗಿ ನಿಂಗವ್ವ

ನಿಂಗವ್ವ ಸಾಧಾರಣ ರೂಪವನ್ನು ಪಡೆದಿದ್ದರೂ ಒಳ್ಳೆಯ ಕಲಾವಿದೆಯಾಗಿದ್ದಳು. ಇವಳು ತನ್ನ ಕಲಾಜೀವನದುದ್ದಕ್ಕೂ ಸತ್ಯಭಾಮಾ ಪಾತ್ರವನ್ನೇ ನಿರ್ವಹಿಸುತ್ತ ಬಂದಳು. ಪಾತ್ರ ಧರಿಸಿದಾಗ ನಿಂಗವ್ವ ಮುಖಕ್ಕೆ ಬಣ್ಣ ಹಚ್ಚುತ್ತಿರಲಿಲ್ಲ. ಟೋಪಿನ ಸೆರಗಿನ ಸೀರೆಯುಟ್ಟು ಕೊರಳಿಗೆ ದೊಡ್ಡದಾದ ಗೆಜ್ಜೆಟಿಕ್ಕೆ ಹಾಕಿ ಹಣೆಗೆ ಅಗಲವಾದ ಕುಂಕುಮವಿಟ್ಟು ತುರುಬ ಕಟ್ಟುತ್ತಿದ್ದಳು. ತುಂಬಾ ಎತ್ತರದ ದನಿಯಲ್ಲಿ ನಿಂಗವ್ವ ಹಾಡುತ್ತಿದ್ದಳು. ನಿಂಗವ್ವನ ಈ ಎತ್ತರದ ಸೂರು ಕೇಳಲೆಂದೇ ದೂರದೂರಿನಿಂದ ಜನ ಇವಳ ಆಟ ನಡೆದಿರುವಲ್ಲಿಗೆ ಸೇರುತ್ತಿದ್ದರು. ಆವಳ ಮಾತು, ಅಭಿನಯಕ್ಕಿಂತ ಅವಳ ಎತ್ತರದ ದನಿಯನ್ನೇ ಜನ ಮೆಚ್ಚಿಕೊಂಡಿದ್ದರು.

ಇಂದು ಪಾರಿಜಾತ ರಂಗಭೂಮಿಯಲ್ಲಿ ನೃತ್ಯ ಕಡಿಮೆಯಾಗಿದೆ. ಆದರೆ ಕೌಜಲಗಿ ನಿಂಗವ್ವ ತನ್ನ ಕಾಲಕ್ಕೆ ಒಳ್ಳೆಯ ನೃತ್ಯಗಾತಿಯೆನ್ನಿಸಿಕೊಂಡಿದ್ದಳು. ಇವಳ ನೃತ್ಯದ ವಿಶೇಷತೆಯೆಂದರೆ ತಲೆಯ ಮೇಲೆ ಸಮೆಯನ್ನಿಟ್ಟುಕೊಂಡು ಕುಣಿಯುತ್ತಿದ್ದುದು. ಅವಳ ಸಮೆಯೊಂದಿಗಿನ ನೃತ್ಯದ ವಿಷಯವನ್ನು ಅನೇಕ ಜನ ಹೇಳುತ್ತಾರೆ. ನಿಂಗವ್ವನ ಸಂಬಂಧಿ ಕೌಜಲಗಿಯ ಚಂದ್ರವ್ವ ತನ್ನ ತಾಯಿ ಮತ್ತು ಅಜ್ಜಿ ಈ ವಿಷಯ ಹೇಳಿದ್ದನ್ನು ಸ್ಮರಿಸಿಕೊಳ್ಳುತ್ತಾಳೆ. ಹಾಗೆಯೇ ಕೌಜಲಗಿಯ ವಾಯ್.ಜಿ.ಕೌಜಲಗಿಯವರು ನಿಂಗವ್ವನ ಸಮೆಯ ನೃತ್ಯದ ವಿಷಯವನ್ನು ಉಲ್ಲೇಖಿಸುತ್ತಾರೆ. ನಿಂಗವ್ವ ಕೌಜಲಗಿಯ ದೇಸಾಯರ ವಾಡೆಯಲ್ಲೊಮ್ಮೆ ಪಾರಿಜಾತವನ್ನು ಮೂರು ದಿನಗಳ ಕಾಲ ಮಾಡಿದಳಂತೆ. ಈ ಸಂದರ್ಭದಲ್ಲಿ ತಲೆಯ ಮೇಲೆ ಸಮೆಯಿಟ್ಟುಕೊಂಡು ನೃತ್ಯ ಮಾಡಿದರೆ ಅದು ಕೆಳಗೆ ಬೀಳಲಿಲ್ಲವಂತೆ. ಈ ನೃತ್ಯವನ್ನು ನೋಡಿದ್ದ ಕೌಜಲಗಿಯ ಬಹಳಷ್ಟು ಜನ ಬಹಳ ದಿನಗಳ ಕಾಲ ಇದನ್ನು ಸ್ಮರಿಸಿಕೊಳ್ಳುತ್ತಿದ್ದರು. ನಿಂಗವ್ವ ಅಟ್ಟದ ಮೇಲೆ ಆಟವಾಡುವಾಗ ಕೈಯಲ್ಲಿ ಸಮೆ ಹಿಡಿದುಕೊಂಡು ಕುಣಿಯುತ್ತಿದ್ದುದಂತೂ ಸಾಮಾನ್ಯವಾಗಿತ್ತು. ಇದನ್ನು ಪ್ರೇಕ್ಷಕರು ಬಹಳಷ್ಟು ಸಲ ನೋಡಿದ್ದಾರೆ. ಇವಳ ಈ ವಿನೂತನ ನೃತ್ಯವನ್ನು ಪ್ರೇಕ್ಷಕರು ಸ್ತಬ್ಧರಾಗಿ ನೋಡುತ್ತಿದ್ದರಂತೆ.

ಕಲಾವಿದೆ ನಿಂಗವ್ವನನ್ನು ನೋಡಲೆಂದೇ ಗಾಡಿ ಕಟ್ಟಿಕೊಂಡು ಜನ ಧಾವಿಸಿ ಬರುತ್ತಿದ್ದರು. ಅವರ ಕಣ್ಣಲ್ಲಿ ಕುತೂಹಲ ಕುಣಿಯುತ್ತಿತ್ತು. ಈ ಕುತೂಹಲಕ್ಕೆ ಮುಖ್ಯಕಾರಣ

ಆ ಕಾಲಕ್ಕೆ ಹೆಣ್ಣೊಬ್ಬಳು ರಂಗಭೂಮಿಯ ಮೇಲೆ ಪಾತ್ರ ಮಾಡುವುದೇ ವಿಶೇಷವೆನಿಸಿದ್ದು. ನಿಂಗಮ್ಮನ ಹೆಸರು ಉತ್ತರ ಕರ್ನಾಟಕದ ಮನೆಮನೆಯ ಮಾತಾಗಿತ್ತು. ಪಾರಿಜಾತ ನೋಡಲು ಎಷ್ಟು ಕುತೂಹಲವಿರುತ್ತಿತ್ತೋ ಅಷ್ಟೇ ಕುತೂಹಲ ಆವಳನ್ನು ನೋಡುವುದರಲ್ಲಿತ್ತು. ನಿಂಗವ್ವನ ಕಂಪನಿ ಹೆಸರುವಾಸಿಯಾಗುತ್ತಿದ್ದಂತೆ ಸವದಿ ಕಂಪನಿ, ಆಲಗೂರ-ಕುಂಚನೂರ ಕಂಪನಿ, ಬಡಕುಂದ್ರಿ ಬಸಪ್ಪನ ಕಂಪನಿಗಳು ತಲೆಯೆತ್ತಿದರೂ ನಿಂಗವ್ವನ ಕಂಪನಿಗೆ ವಿಶೇಷ ಆಕರ್ಷಣೆಯಿತ್ತು. ಈ ಉಳಿದ ಕಂಪನಿಗಳಿಗಿಂತ ಇದು ಹೆಚ್ಚು ಪ್ರಾಚೀನವಾದದ್ದರಿಂದ ನುರಿತ ಕಲಾವಿದರಿಲ್ಲಿ ದೊರೆಯುತ್ತಾರೆ ಎಂಬ ಕಾರಣದಿಂದ, ನಿಂಗವ್ವ ಸ್ವತಃ ಸತ್ಯಭಾಮಾನ ಪಾತ್ರ ಮಾಡುತ್ತಾಳೆ ಎಂಬ ಕಾರಣದಿಂದ ಜನ ದಟ್ಟೈಸುತ್ತಿದ್ದರು.

ಜನಮೆಚ್ಚುವಂತೆ ಪಾತ್ರ ಮಾಡುತ್ತಿದ್ದ ನಿಂಗವ್ವ ಬೆಳಗು ಮುಂಜಾನೆ ದಶಾವತಾರದ ಸನ್ನಿವೇಶಕ್ಕೆ ಮೊದಲು ಪಾರಿಜಾತದ ಹುಟ್ಟು, ಬೆಳವಣಿಗೆಯ ಬಗೆಗೆ ಪ್ರವಚನ ಕೊಡುತ್ತಿದ್ದಳು. ಕೆಲವು ವರ್ಷಗಳ ಹಿಂದೆ ಅಪರಾಳ ತಮ್ಮಣ್ಣನೆಂಬ ಕವಿಯಿದ್ದ. ಆವನು ಭಗವದ್ಭಕ್ತನಾಗಿದ್ದ. ಯಾವುದೋ ಅಪರಾಧ ನಿಮಿತ್ತವಾಗಿ ತಮ್ಮಣ್ಣನನ್ನು ಸೆರೆಮನೆಯಲ್ಲಿಡಲಾಗಿತ್ತು. ಸೆರೆಮನೆಯಾದರೂ ಅವನ ಭಗವತ್ಪ್ರೀತಿ ಮಾಸಿರಲಿಲ್ಲ, ನಾಮಸ್ಮರಣೆ ನಿಂತಿರಲಿಲ್ಲ. ಆ ಸೆರೆಮನೆಯ ಗೋಡೆಯ ಮೇಲೆಯೇ ಈ ಶ್ರೀ ಕೃಷ್ಣ ಪಾರಿಜಾತ ಗ್ರಂಥವನ್ನು ಬರೆಯತೊಡಗಿದ. ಹೀಗೆ ಗ್ರಂಥವನ್ನು ಬರೆಯುತ್ತಿದ್ದಂತೆಯೇ ಅವನಿಗೆ ಹಾಕಿದ ಬೇಡಿಗಳು ಕಳಚಿಕೊಂಡವು. ಏಕಾಏಕಿ ಹೀಗೆ ಬೇಡಿ ಕಳಚಿಕೊಂಡದ್ದನ್ನು ಕಂಡು ಗಾಬರಿಗೊಂಡ ಸೆರೆಮನೆಯ ಅಧಿಕಾರಿಗಳು ರಾಜನಿಗೆ ಸುದ್ದಿ ಮುಟ್ಟಿಸಿದರು. ಸೆರೆಮನೆಗೆ ಬಂದ ರಾಜ ಬೇಡಿ ಕಳಚಿದ್ದನ್ನು ಕಣ್ಣಾರೆ ಕಂಡ. ಮೊದಲ ಸಲ ಆತ ಇದನ್ನು ಗಂಭೀರವಾಗಿ ಪರಿಗಣಿಸಲಿಲ್ಲ. ಏನೋ ಆಗಿರಬೇಕೆಂದು ಮತ್ತಷ್ಟು ಭಾರವಾದ ಬೇಡಿಗಳನ್ನು ಹಾಕಲು ಅಪ್ಪಣೆಯಿತ್ತ. ಎರಡನೆಯ ಸಲ ಹಾಕಿದ ಬೇಡಿಗಳೂ ಕೂಡ ಬಿಚ್ಚಿ ಬಿದ್ದವು. ಮತ್ತೆ ರಾಜನಿಗೆ ಸುದ್ದಿ ಹೋಯಿತು. ಈ ಸಲ ರಾಜ ಮತ್ತೆ ಅವನಿಗೆ ಬೇಡಿ ತೊಡಿಸದೆ ಕರೆಸಿಕೊಂಡು ಹೇಳಿದ – 'ನೀನು ಅಪರಾಧಿಯಲ್ಲ, ಜ್ಞಾನಿಯಾಗಿದ್ದೀ. ಆದ್ದರಿಂದ ನಿನ್ನನ್ನು ಕಾರಾಗ್ರಹದಿಂದ ಬಿಡುಗಡೆ ಮಾಡುತ್ತೇನೆ' ಎಂದು ಹೇಳಿ ತಮ್ಮಣ್ಣನನ್ನು ಮುಕ್ತಗೊಳಿಸಿದ. ಕಾರಾಗೃಹದಿಂದ ಹೀಗೆ ಮುಕ್ತನಾದ ತಮ್ಮಣ್ಣ ಮನೆಯಲ್ಲಿ ಮತ್ತೆ ಶ್ರೀ ಕೃಷ್ಣ ಪಾರಿಜಾತ ಗ್ರಂಥ ರಚನೆಗೆ ತೊಡಗಿದ. ಬರೆಯುತ್ತ ಹೋದ, ಗ್ರಂಥ ಬೆಳೆಯುತ್ತ ಹೋಯಿತು. ಗ್ರಂಥ ಇನ್ನೂ ಪೂರ್ಣ ಮುಗಿದಿರಲಿಲ್ಲ. ಊರಿಗೆ ಬಂದ ವಿದ್ವಾಂಸರಿಗೆ ತಮ್ಮಣ್ಣ ಇದನ್ನು ತೋರಿಸಿದ. ಗ್ರಂಥ ನೋಡಿದ ವಿದ್ವಾಂಸರು ತುಂಬ ಸಂತೋಷದಿಂದ 'ಗ್ರಂಥ ಸರಿಯಿದೆ, ಪ್ರಾಪಂಚಿಕರಿಗೆ ಪರಮಾನಂದ ಪ್ರಾಪ್ತಿಯಾಗುತ್ತದೆ' ಎಂದು ತಮ್ಮ ತೀರ್ಪುಕೊಟ್ಟರು. ಆದರೆ ಗ್ರಂಥದಲ್ಲಿ ಒಂದೆಡೆ ಶಬ್ದದೋಷವೊಂದನ್ನು ಈ ವಿದ್ವಾಂಸರು ಕಂಡುಹಿಡಿದರು. ಒಂದು ಸಂದರ್ಭದಲ್ಲಿ ಸತ್ಯಭಾಮೆ ರುಕ್ಮಿಣಿಗೆ 'ಮುದಿಗತ್ತೆ' ಎಂದು ಬೈಯುತ್ತಾಳೆ. ದೋಷವನ್ನು ಗಮನಿಸಿದ ವಿದ್ವಾಂಸರು ಎಂದರು – 'ರುಕ್ಮಿಣಿಯೆಂದರೆ ಲಕ್ಷ್ಮಿ, ಲಕ್ಷ್ಮಿಗೆ ಇಂಥ ಅವಾಚ್ಯ ಶಬ್ದಗಳನ್ನಿಡುವುದು ಯೋಗ್ಯವಲ್ಲ.

ಇದು ಆ ದೇವಿಯನ್ನು ಅಪಮಾನಿಸಿದಂತೆ. ಇಂಥ ಅಕಾರ್ಯ ನೀನು ಮಾಡಬಾರದಾಗಿತ್ತು. ಆದದ್ದಾಯಿತು. ಮುಂದೆ ನೀನು ಗ್ರಂಥ ಬರೆಯಬಾರದು.' ವಿದ್ವಾಂಸರ ಈ ಆದೇಶದಿಂದ ತಮ್ಮಣ್ಣನಿಗೆ ಖೇದವಾಯಿತು. ಆ ವಿದ್ವಾಂಸರ ಹೇಳಿಕೆಯನ್ನು ಮನ್ನಿಸಿ ಗ್ರಂಥ ಬರೆಯುವುದನ್ನು ನಿಲ್ಲಿಸಿಬಟ್ಟ. ಆದರೆ ತನ್ನಿಂದ ಆಗದಿದ್ದರೆ ಹೋಗಲಿ ಇನ್ನೊಬ್ಬರಿಂದಾದರೂ ಈ ಗ್ರಂಥ ಪೂರ್ಣಗೊಳ್ಳಬೇಕು ಎಂಬ ಆಶೆ ತಮ್ಮಣ್ಣನಿಗಾಯಿತು. ಆದ್ದರಿಂದ ತನ್ನ ಗೆಳೆಯ ಸಂಗಯ್ಯನೆಂಬುವವನನ್ನು ಕರೆದು ಗ್ರಂಥವನ್ನು ಪೂರ್ಣಗೊಳಿಸಲು ಹೇಳಿದ. ತಮ್ಮಣ್ಣ ಹೇಳಿದಂತೆ ಸಂಗಯ್ಯ [1] ಗ್ರಂಥವನ್ನು ಪೂರ್ಣಗೊಳಿಸಿದ.

– ನಿಂಗವ್ವ ಹೇಳುತ್ತಿದ್ದ ಈ ಹಿನ್ನೆಲೆ ಅಪರಾಳ ತಮ್ಮಣ್ಣನ ಕಾವ್ಯ ಶ್ರೀ ಕೃಷ್ಣಪಾರಿಜಾತಕ್ಕೆ ಸಂಬಂಧಪಟ್ಟುದು. ನಿಂಗವ್ವನ ಮಾತುಗಳು ಇಷ್ಟಕ್ಕೇ ನಿಲ್ಲುತ್ತಿರಲಿಲ್ಲ. ಮುಂದುವರಿದು ಈ ಕಾವ್ಯ ಆಟವಾದ ವಿಷಯವನ್ನೂ ಪ್ರಸ್ತಾಪಿಸುತ್ತಿದ್ದಳು:

'ಇದನ್ನು ಬರೆದವ ಅಪರಾಳ ತಮ್ಮಣ್ಣ. ರಂಗಭೂಮಿಗೆ ತಂದವನು ಕುಲಗೋಡ ತಮ್ಮಣ್ಣ. ಕುಲಗೋಡ ತಮ್ಮಣ್ಣ ನಾಲ್ಕು ಹುಡುಗರನ್ನು ತೆಗೆದುಕೊಂಡು ಕಲಿಸಿ ರಂಗಭೂಮಿಗೆ ತಂದು ಪ್ರಚಾರ ಮಾಡಿದರು. ಕುಲಗೋಡ ತಮ್ಮಣ್ಣನವರ ಪಶ್ಚಾತ್ (ತರುವಾಯ) ಯಾದವಾಡ ಮಲಕಪ್ಪ. ಅವರು ಈ ಪಾರಿಜಾತ ಮಾಡಿ ಜಗತ್ತಿನ ತುಂಬ ಪ್ರಚಾರ ಮಾಡಿದರು. ಯಾದವಾಡ ಮಲಕಪ್ಪ ನನ್ನ ಗುರು. ಅವನ ತರುವಾಯ ನಾನು ಈ ಆಟ ಮಾಡುತ್ತಿದ್ದೇನೆ ಬಡಕುಂದ್ರಿ ಬಸಪ್ಪ., ಹುಕ್ಕೇರಿ ಸಿದ್ರಾಮಪ್ಪ ನಮ್ಮ ಕಾಲದವರು ನಾವೆಲ್ಲ ಕೂಡಿ ಆಡಿದೆವು.'

– ಇದು ನಿಂಗವ್ವನ ವಿಶೇಷ ಪ್ರಜ್ಞೆಯನ್ನು ಎತ್ತಿ ತೋರಿಸುತ್ತದೆ. ಅವಳ ಈ ಮೇಲಿನ ಉಲ್ಲೇಖದಿಂದ ಹಲವಾರು ಅಂಶಗಳು ಸ್ಪಷ್ಟವಾಗುತ್ತವೆ:

೧. ಜನರಲ್ಲಿ ಪಾರಿಜಾತದ ಬಗೆಗೆ ಐತಿಹಾಸಿಕ ಪ್ರಜ್ಞೆಯಿರಬೇಕು ಎಂಬ ಕಳಕಳಿ ನಿಂಗವ್ವನಿಗಿತ್ತು.

೨. ಆಟದ ಮುಂಚಿನ ಕಾವ್ಯ ಒಬ್ಬನಿಂದಲೇ ನಿರ್ಮಾಣಗೊಂಡಿಲ್ಲ, ಅದರ ಕರ್ತೃಗಳು ಇಬ್ಬರು.

೩. ಕುಲಗೋಡ ತಮ್ಮಣ್ಣ ಈ ಆಟವನ್ನು ರಂಗಕ್ಕೆ ಅಳವಡಿಸಿದವ.

೪. ನಿಂಗವ್ವನ ಗುರು ಯಾದವಾಡ ಮಲಕಪ್ಪ.

೫. ಹುಕ್ಕೇರಿ ಸಿದ್ರಾಮಪ್ಪ, ಬಡಕುಂದ್ರಿ ಬಸಪ್ಪ, ಕೌಜಲಗಿ ನಿಂಗವ್ವ ಕೂಡಿ ಆಟವಾಡಿದ್ದಾರೆ.

---

೧. ಎರಡನೆಯ ಭಾಗವನ್ನು ಪೂರ್ಣಗೊಳಿಸಿದವನು ಸಂಗಯ್ಯನಲ್ಲ, ಸಿರಗುಪ್ಪಿ ಸದಾಶಿವಪ್ಪ.

ನಿಂಗವ್ವನ ಈ ಐತಿಹಾಸಿಕ ಪ್ರಜ್ಞೆ ವಿಶೇಷವಾಗಿ ಪಾರಿಜಾತ ಅಧ್ಯಯನಕ್ಕೆ ಸಂಬಂಧಪಟ್ಟದ್ದು, ಎಷ್ಟೋ ಸಹಾಯಕಾರಿಯಾಗಿದೆ. ಲಿಖಿತ ದಾಖಲೆಗಳಿಲ್ಲದೆ ಪಾರಿಜಾತ ರಂಗಭೂಮಿಯ ಅಭ್ಯಾಸಿಗಳು ಒದ್ದಾಡುತ್ತಿರುವ ಪ್ರಸಂಗದಲ್ಲಿ ನಿಂಗವ್ವನಾಡುತ್ತಿದ್ದ ಈ ಮಾತುಗಳು ಅವಳ ಕಂಪನಿಯಲ್ಲಿ ಆಟವಾಡಿದ ಬರಗಿ ರಾಚಯ್ಯನವರ ಮುಖಾಂತರ ಹರಿದು ಬಂದು ಇಂದು ಸಂಶೋಧನೆಗೆ ಉಪಯುಕ್ತವೆನಿಸುತ್ತವೆ.

ನಿಂಗವ್ವನ ಕಾಲದಲ್ಲಿ ಸಭಿಕರು ಎದ್ದು ನಿಂತೋ, ಚೀಟಿ ಕಳಿಸಿಯೋ ಪ್ರಶ್ನೆ ಕೇಳುವುದು ವಿಶೇಷವಾಗಿತ್ತು. (ಪಾತ್ರಧಾರಿ ಸ್ತ್ರೀ ಕಲಾವಿದೆಯಾಗಿದ್ದರಂತೂ ನಮ್ಮ ಇಂಥ ಪ್ರೇಕ್ಷಕರ ಜಿಜ್ಞಾಸೆಗೆ ಮಹಾಪೂರ ಬರುತ್ತದೆ!) ಇಂಥ ಸಂದರ್ಭದಲ್ಲಿ ನಿಂಗವ್ವ ಸಹನೆ ಕಳೆದುಕೊಳ್ಳಲಾರದೆ ಸಾವಧಾನವಾಗಿ ಕೇಳಿದವರ ಪ್ರಶ್ನೆಯನ್ನು ಪರಾಂಬರಿಸುತ್ತಿದ್ದಳು, ತಕ್ಕ ಉತ್ತರ ನೀಡುತ್ತಿದ್ದಳು. ಕೆಲವು ಸಲ ತನ್ನ ಸಹ ಕಲಾವಿದರಿಂದಲೂ ಉತ್ತರವನ್ನು ಕೊಡಿಸುತ್ತಿದ್ದಳು. ಇಂಥ ಎರಡು ಉದಾಹರಣೆಗಳನ್ನು ಬುದ್ನಿ ಈರಪ್ಪ ಕೊಡುತ್ತಾರೆ.

ಕುಲಗೋಡದಲ್ಲಿ ಒಮ್ಮೆ ನಿಂಗವ್ವನ ಆಟವಿತ್ತು. ಹಿಡಕಲ್ಲ ಭೀಮಪ್ಪ ಭಾಗವತ ಮಾಡುತ್ತಿದ್ದ ಆಟ ನಡೆಯುತ್ತಿದ್ದಂತೆ ಹುಡುಗನೊಬ್ಬ ಚೀಟಿಯೊಂದನ್ನು ತಂದುಕೊಟ್ಟ. ಚೀಟಿಯಲ್ಲಿ ಆವನು ಕೇಳಿದ ಪ್ರಶ್ನೆ – 'ನಾರದರು ದೇವಲೋಕದಿಂದ ಪಾರಿಜಾತ ಪುಷ್ಪವನ್ನು ತಂದರು, ಅವರು ತರುವ ಕಾಲಕ್ಕೆ ಗಿಡದಲ್ಲಿ ಎಷ್ಟು ಹೂಗಳಿದ್ದವು? ಒಂದೇ ಏಕೆ ತಂದರು?' ಇದೆಂಥ ಪ್ರಶ್ನೆಯೆಂದು ಚೀಟಿಯ ವಿಷಯವನ್ನು ಗಂಭೀರವಾಗಿ ತೆಗೆದುಕೊಳ್ಳದೆ ಇವರು ತಾಳ ಹಾಕಿ ಆಟ ಪ್ರಾರಂಭಿಸಿದರು. ಚೀಟಿ ಕೊಟ್ಟವ ಆಟ ಮುಂದುವರಿಯಲು ಅವಕಾಶ ಕೊಡಲಿಲ್ಲ. ತನ್ನ ಪ್ರಶ್ನೆಗೆ ಉತ್ತರ ಹೇಳಿಯೇ ಆಟವನ್ನು ಮುಂದುವರಿಸಬೇಕೆಂದು ಹಟಹಿಡಿದ. ಇವನಿಗೆ ಏನು ಹೇಳಬೇಕೆಂದು ಕಲಾವಿದರೆಲ್ಲ ಏನೂ ತೋಚದೆ ಸುಮ್ಮನೆ ನಿಂತಿದ್ದಾಗ ನಿಂಗವ್ವ ಮುಂದೆ ಬಂದು ಆವನಿಗೆ ಉತ್ತರ ಕೊಟ್ಟಳು. 'ಆಗ ನಾರದನಿಗೆ ಒಂದೇ ಹೂ ಬೇಕಾಗಿತ್ತು, ಪಾರಿಜಾತ ಗಿಡದಿಂದ ಹರಿದುಕೊಂಡರು. ಗಿಡದಲ್ಲಿಯ ಉಳಿದ ಹೂಗಳನ್ನೆಲ್ಲ ಎಣಿಸುವ ಅವಶ್ಯಕತೆ ಅವರಿಗೆ ತೋರಲಿಲ್ಲ. ನಾರದರು ಇನ್ನೊಮ್ಮೆ ಹೋದಾಗ ಎಣಿಸಿಕೊಂಡು ಬರುತ್ತಾರೆ. ಒಂದು ಹೂವಿನಿಂದ ಇಷ್ಟು ನ್ಯಾಯವಾಯಿತು, ನಾರದರೇನಾದರೂ ಗಿಡದ ಎಲ್ಲಾ ಹೂಗಳನ್ನು ತಂದಿದ್ದರೆ ದೇಶಕ್ಕೇ ನ್ಯಾಯ ಹತ್ತುತ್ತಿತ್ತೇನೋ! ಆಯಿತಲ್ಲ, ಈಗ ನೀನು ಕೂಡ್ರು.' ಪ್ರಶ್ನೆ ಕೇಳಿದವನನ್ನು ಜನರೂ ಬೈದರು.

ಇನ್ನೊಂದು ಸಂದರ್ಭ : ನಿಂಗವ್ವ ಸತ್ತಿಗೇರಿ ರುದ್ರಯ್ಯ ಮುಂತಾದವರು ವಿಜಾಪುರಕ್ಕೆ ಆಟಕ್ಕೆ ಹೋಗಿದ್ದರು. ಆಟ ನಡೆಯುತ್ತ ಸತ್ಯಭಾಮಾ ಪ್ರವೇಶ ಪ್ರಾರಂಭವಾಯಿತು. ಸತ್ಯಭಾಮಾ ಪಾತ್ರಧಾರಿ ನಿಂಗವ್ವ ತನ್ನ ಪಾತ್ರ ಪರಿಚಯ ಹೇಳುತ್ತ ಸತ್ರಾಜಿತ ರಾಜ ಎನಗೆ ತಂದೆಯಾಗಬೇಕು ಎಂಬ ಅರ್ಥದ ಹಾಡನ್ನು ಹಾಡಿದಳು. ಒಬ್ಬ ಎದ್ದುನಿಂತು 'ಸತ್ರಾಜಿತ ರಾಜನ ತಂದೆಯ ಹೆಸರೇನು?' ಎಂದು ಕೇಳಿದ. ಉತ್ತರ ಗೊತ್ತಿಲ್ಲದ

ಕಾರಣವಾಗಿ ಆಟವನ್ನು ಹಾಗೇ ಮುಂದುವರಿಸಲು ನೋಡಿದರು. ಪ್ರಶ್ನೆ ಕೇಳಿದವ ಆಟ ಮುಂದುವರಿಸಲು ಅವಕಾಶ ಕೊಡದೆ ಪ್ರಶ್ನೆಗೆ ಉತ್ತರವನ್ನು ಹೇಳಲೇಬೇಕು ಎಂದು ಪಟ್ಟು ಹಿಡಿದ. ಇದಕ್ಕೆ ಉತ್ತರವನ್ನು ಹೇಳಲು ಸತ್ತಿಗೇರಿ ರುದ್ರಯ್ಯನನ್ನು ನಿಂಗವ್ವ ಒಪ್ಪಿಸಿದಳು. ಸತ್ತಿಗೇರಿ ರುದ್ರಯ್ಯ ಮುಂದೆ ಬಂದವನೇ 'ಸತ್ರಾಜಿತನ ತಂದೆ ಅಟ್ರಾಜಿತ' ಎಂದು ಬಿಟ್ಟ. 'ನಮಗಂತೂ ಇಷ್ಟು ಗೊತ್ತಿದೆ. ಇನ್ನು ಇದನ್ನು ಮೀರಿ ನಿಮಗೇನಾದರೂ ಗೊತ್ತಿದ್ದರೆ ಹೇಳಬಹುದು. ಇದು ಹೇಗೆ ಎಂದು ಕುಳಿತವರೆಲ್ಲ ಒತ್ತಾಯಿಸಿದರೆ ಹೇಳುತ್ತೇವೆ. ಆದರೆ ಅದನ್ನು ಬಹಳ ದೂರದಿಂದ ತೆಗೆದುಕೊಳ್ಳಬೇಕಾಗುತ್ತದೆ' ಎಂದು ಸುಮ್ಮನೆ ಬಾಂಬು ಹಾಕಿದ. ಜನರೆಲ್ಲ 'ನಾವು ಆಟ ನೋಡಲು ಬಂದಿದ್ದೇವೆ, ಇವೆಲ್ಲ ನಮಗೆ ಬೇಡ ನೀವು ಆಡಿರಿ' ಎಂದು ಆಟದ ಮುನ್ನಡೆಗೆ ವಿನಂತಿಸಿಕೊಂಡರು.

ಈ ರೀತಿ ಕಲಾವಿದೆ ನಿಂಗವ್ವ ಸಭಿಕರನ್ನು ಅನುಸರಿಸದೆ ತಮಗೆ ಕಿರಿಕಿರಿಯಾದರೂ ಚಿಂತೆಯಿಲ್ಲ, ಅವರನ್ನು ನಾನಾ ಬಗೆಯಾಗಿ ಸಂತೃಪ್ತಿಗೊಳಿಸಲು ಯತ್ನಿಸುತ್ತಿದ್ದಳು.

ಸ್ವತಃ ಕಲಾರಾಧಕಳಾದ ನಿಂಗವ್ವ ಅನೇಕ ಕಲಾವಿದರನ್ನು ಪೋಷಿಸಿದ್ದಾಳೆ, ಆದರಿಸಿದ್ದಾಳೆ. ನಣದಿರಾಮಣ್ಣ, ಶಿವಗುರಿ, ಬರಗಿ ರಾಚಯ್ಯ ಮುಂತಾದವರು ಇವಳ ಕಂಪನಿಯನ್ನು ಸೇರಿದ ಪ್ರಸಂಗಗಳು ಅವಳು ಕಲೆಗೆ ಕೊಡುತ್ತಿದ್ದ ಮನ್ನಣೆಯನ್ನು ಎತ್ತಿ ಹೇಳುತ್ತವೆ. ಕುಲಗೋಡದ ಬಾರ್ಕಿ ನೀಲವ್ವ ಕುಲಗೋಡ ತಮ್ಮಣ್ಣನ ನಿರ್ದೇಶನದಲ್ಲಿ ಆಟವಾಡುತ್ತಿದ್ದಳು ಎಂಬ ಮಾತೊಂದಿದೆ. ಕುಲಗೋಡ ತಮ್ಮಣ್ಣನಿಗಿಂತಲೂ ಕೌಜಲಗಿ ನಿಂಗವ್ವನ ಕೈಯಲ್ಲಿಯೇ ಬಾರ್ಕಿ ನೀಲವ್ವ ಪರಿಣತಿ ಹೊಂದಿದಳು ಎನ್ನುವುದು ಬ. ಶ್ರೀ ಪಾಟೀಲರ ಹೇಳಿಕೆ. ನಿಂಗವ್ವನ ಕಂಪನಿಯಲ್ಲಿ ನೀಲವ್ವ ಸೇರಿದಂದಿನಿಂದ ಹಿಡಿದು ನಿಂಗವ್ವನ ಮುಖಾಂತರವೇ ಮಾರ್ಗದರ್ಶನ ಪಡೆದಳು. ನೀಲವ್ವ ಬೆಳವಣಿಗೆ ಹೊಂದುತ್ತ ಪಾರಿಜಾತದಲ್ಲಿ ಪರಿಣತಿ ಹೊಂದುವ ಹಂತದವರೆಗೂ ಆಶ್ರಯಿಸಿದ್ದು ನಿಂಗವ್ವನನ್ನು. ತಾನು ಇನ್ನೊಬ್ಬರಲ್ಲಿ ನಿಷ್ಠೆಯಿಟ್ಟು ಒಳ್ಳೆಯ ಶಿಷ್ಯಳೆನಿಸಿ ಪಾರಿಜಾತದ ಮಾತು, ಸಂಗೀತ ಕಲಿತ ನಿಂಗವ್ವನಲ್ಲಿ ಸಾಕಷ್ಟು ಅನುಭವವೀತು. ಈ ಅನುಭವದ ಅಡಿಯಲ್ಲಿಯೇ ನಿಂಗವ್ವ, ನೀಲವ್ವನಿಗೆ ಮಾರ್ಗದರ್ಶನ ನೀಡುತ್ತ ಅವಳನ್ನು ಬೆಳೆಸಿದ್ದೂ ಸತ್ಯವಾಗಿ ತೋರುತ್ತದೆ.

# ನಿಂಗವ್ವನ ಸ್ವಭಾವ

ನಿಂಗವ್ವ ನೇರ ಸ್ವಭಾವದ ದಿಟ್ಟೆಯಾಗಿದ್ದಳು, ಹಟವಾದಿಯಾಗಿದ್ದಳು. ಅವಳು ಮಾತು ರೀತಿಯಲ್ಲಿ ಗಂಡಸಿನ ದರತಿಯನ್ನು ಪಡೆದಿದ್ದಳು. ಜೀವನದಲ್ಲಿ ಎದುರಾದ ಸಂಕಷ್ಟಗಳು ಅವಳನ್ನು ಹೀಗೆ ನಿಷ್ಟುರ ಮಾಡಿರಲು ಸಾಕು. ಸಾಮಾಜಿಕ ಕೆಳವರ್ಗದಿಂದ ಬಂದ ಪ್ರಾಜ್ಞಳೊಬ್ಬಳು ಅದೇ ಸಾಮಾಜಿಕ ವ್ಯವಸ್ಥೆಯ ಹೊರಲೋಕಕ್ಕೆ ಬದ್ದಾಗ ಅನುಭವಗಳು ಬೆಳೆಯುತ್ತವೆ. ಉಂಡ ಕಹಿ ಅನುಭವಗಳು ಸ್ವಭಾವವನ್ನು ಕಠಿಣಗೊಳಿಸುತ್ತವೆ. ನಿಂಗವ್ವನಿಗೆ ಈ ಮಾತು ಸಂಪೂರ್ಣವಾಗಿ ಅನ್ವಯಿಸುತ್ತದೆ. ಕಂಪನಿಯನ್ನು ಕಟ್ಟ ಅದನ್ನು ಬೆಳೆಯಿಸುವದರೊಂದಿಗೆ ತನ್ನ ಆತ್ಮಸ್ಥೈರ್ಯವನ್ನು ನಿಂಗವ್ವ ಬೆಳೆಸಿಕೊಂಡಳು. ನಣದಿ ರಾಮಣ್ಣರು ಹೇಳುವ ಬೆಳಗಾವಿಯ ಸಂಬಂಧ ಮುಕ್ತಾಯಗೊಂಡ ಮೇಲೆ ಅವಳು ಬ್ರಹ್ಮಚರ್ಯವನ್ನು ಪಾಲಿಸಿಕೊಂಡು ಬಂದಳು. ಅವಳ ಸ್ವಭಾವ ನಿಷ್ಟುರತೆ ಮತ್ತು ಈ ಬ್ರಹ್ಮಚರ್ಯ ವ್ರತಗಳಿಂದಾಗಿ ಜನತೆ ಅವಳ ಬಗೆಗೆ ಅಪಾರ ಗೌರವ ಭಾವನೆಯನ್ನು ತಾಳುವಂತಾಗಿತ್ತು.

ತನ್ನ ಆಯುಷ್ಯದ ಅರ್ಧಕ್ಕಿಂತ ಹೆಚ್ಚು ವರ್ಷಗಳ ಕಾಲ ಕಂಪನಿಕಟ್ಟಿ ಪೋಷಿಸಿಕೊಂಡು ಬಂದವಳು ನಿಂಗವ್ವ. ಇಷ್ಟೆಲ್ಲ ಆಟವಾಡಿದರೂ ಯಾವುದೇ ಜಮೀನು, ವಸ್ತು ಒಡವೆ ಮುಂತಾಗಿ ಏನನ್ನೂ ಮಾಡಿಕೊಳ್ಳಲಿಲ್ಲ. ಕಂಪನಿ ಉರ್ಜಿತಾವಸ್ಥೆಯಲ್ಲಿ ಸಾಕಷ್ಟು ಹಣ ಮಾಡುತ್ತಿರುವಾಗಲೂ ನಾಳೆಗಾಗಿ ಹಣವನ್ನು ಕೂಡಿಸಿಡಬೇಕು ಎಂಬ ಸಂಗ್ರಹಬುದ್ಧಿ ಅವಳಿಗೆ ಬರಲಿಲ್ಲ. ದೇಹಿಯೆಂದು ಬಂದ ಬಡಬಗ್ಗರಿಗೆ ಇದ್ದುದನ್ನು ಕೊಟ್ಟುಬಿಡುವ ಉದಾರ ಸ್ವಭಾವ ಅವಳದಾಗಿತ್ತು. ಈ ಹೇಳಿಕೆಯಲ್ಲಿ ಯಾವುದೇ ಬಗೆಯ ಅತ್ಯುಕ್ತಿಯಿಲ್ಲ. ಅವಳನ್ನು ಸಮೀಪದಿಂದ ಕಂಡ ಕಲಾವಿದರು, ಜನಸಾಮಾನ್ಯರು, ಅವಳ ಈ ಉದಾತ್ತ ಸ್ವಭಾವವನ್ನು ಮುಕ್ತಕಂಠದಿಂದ ಹೊಗಳುತ್ತಾರೆ. ಮದುವೆ ಮುಂಜಿವೆ, ಕೋರ್ಟು-ಕಚೇರಿ, ಬಡವರ ಅಡಚಣೆ ಯಾವುದೇ ಇದ್ದರೂ ನಿಂಗವ್ವನ ಉದಾರ ಹಸ್ತ ಬಡವರ ಸಹಾಯಕ್ಕೆ ಸಿದ್ಧವಾಗಿರುತ್ತಿತ್ತು. ನಿಂಗವ್ವ ಆಟದಿಂದ ಬಂದ ಹಣವನ್ನಷ್ಟೇ ಬಡವರಿಗೆ ಕೊಡುತ್ತಿರಲಿಲ್ಲ; ಆಟದಿಂದ ಬಂದ ಸೀದಾ (ಅಕ್ಕಿ, ಗೋಧಿ ಮುಂತಾದ ಧಾನ್ಯ)ಗಳನ್ನೂ ಬಡವರಿಗೆ ಸುರಿದುಬಿಡುತ್ತಿದ್ದಳು.

ಒಂದು ಕಾಲಕ್ಕೆ ಕಂಪನಿಯ ಆದಾಯ ಒಳ್ಳೆಯದಿದ್ದಾಗ ಕೌಜಲಗಿ ದೇಸಾಯರಿಂದ ಹೊಲವೊಂದನ್ನು ಖರೀದಿಸಿದ್ದಳು. ಕಂಪನಿಗೆ ಅವೇ ಒಳ್ಳೆಯ ದಿನಮಾನಗಳು ಮುಂದೆಲ್ಲ ಉಳಿಯಲಿಲ್ಲ. ಕಂಪನಿ ಕಷ್ಟದ ದಿನಗಳನ್ನೂ ಕಾಣುವಂತಾಯಿತು. ನಿಂಗವ್ವನ ಸ್ವಭಾವವೆಂದರೆ ಕಂಪನಿಯ ಒಡತಿಯಾಗಿ ಲಾಭ ಪಡೆಯುವ ತಾನು ನಷ್ಟಕ್ಕೂ ಸಿದ್ಧಳಾಗಬೇಕೆನ್ನುವುದು ತನ್ನನ್ನು ನೆಚ್ಚಿ ತನ್ನೊಂದಿಗೆ ದುಡಿಯುವ ಕಲಾವಿದರು ಕಷ್ಟಪಡಬಾರದು ಎನ್ನುವುದು ನಿಂಗವ್ವನ ಧೋರಣೆಯಾಗಿತ್ತು. ಆದ್ದರಿಂದಲೇ ತನ್ನ ಕಷ್ಟನಷ್ಟಗಳನ್ನು ಇನ್ನೊಬ್ಬರ ಮುಂದೆ ತೋಡಿಕೊಳ್ಳಲಾರದೆ, ಯಾರಲ್ಲಿಯೂ ಅಂಗಲಾಚದೆ ಒಂದು ಕಾಲಕ್ಕೆ ಪಾರಿಜಾತ ಆಟದಿಂದಲೇ ಗಳಿಸಿದ ಹೊಲವನ್ನು ಯಾವುದೇ ಬಗೆಯ ವ್ಯಸನವಿಲ್ಲದೆ ಅದೇ ಕಂಪನಿಯ ಉಳಿವಿಗಾಗಿ ಮಾರಿಬಿಟ್ಟಳು. ಈ ಹಣದಿಂದ ಮತ್ತೆ ಕಂಪನಿಯನ್ನು ಮುಂದುವರಿಸಿದಳು. ತನ್ನಲ್ಲಿ ದುಡಿಯುವ ಕಲಾವಿದರಿಗೆ ಯಾವ ಕೊರತೆಯೂ ಆಗದಂತೆ ನೋಡಿಕೊಂಡಳು.

ನಿಂಗವ್ವನ ಈ ಬಗೆಯ ಶ್ರೇಷ್ಠಗುಣ ಅವಳ ಕಂಪನಿಯ ಕಲಾವಿದರು ಅವಳಲ್ಲಿ ಆತ್ಮೀಯ ಭಾವನೆಯನ್ನು ಹೊಂದುವಂತೆ ಮಾಡಿತ್ತು. ಯಜಮಾನತಿ ಮೊದಲು ಮಾಡಿ ಕಂಪನಿಯ ಎಲ್ಲರೂ ಒಂದೇ ಕುಟುಂಬದವರಂತೆ ಬಾಳುತ್ತಿದ್ದರು. ಆಗೀಗ ಅವಳು ತೋರುತ್ತಿದ್ದ ಸಿಟ್ಟು ಸೆಡವುಗಳನ್ನು ಕೂಡಲೇ ಮರೆತು ಬಿಡುವಷ್ಟರ ಮಟ್ಟಿಗೆ ಅವಳ ಆತ್ಮೀಯತೆ ಇತರರನ್ನು ಆರ್ದ್ರಗೊಳಿಸುತ್ತಿತ್ತು. ಅವಳನ್ನು ಸಂಬೋಧಿಸುತ್ತಿದ್ದ ಪದಗಳಲ್ಲೇ ಅನ್ಯ ಕಲಾವಿದರು ಅವಳ ಬಗೆಗಿರಿಸಿಕೊಂಡ ಸ್ವಚ್ಛ ದೃಷ್ಟಿ ವೇದ್ಯವಾಗುತ್ತದೆ. ಕರಗಾಂವಿ ಗುಂಡಪ್ಪ ಅವಳನ್ನು 'ಯಕ್ಕಾ' ಎಂದು ಸಂಬೋಧಿಸುತ್ತಿದ್ದ. ನಣದಿ ರಾಮಣ್ಣ 'ಯವ್ವಾ' ಎಂದು ಸಂಬೋಧಿಸುತ್ತಿದ್ದ.

ಅವಳ ಉದಾತ್ತಗುಣದಷ್ಟೇ ತೀವ್ರವಾಗಿ ಆಗೀಗ ಸಿಡಿಯುತ್ತಿದ್ದ ಅವಳ ಮುಂಗೋಪವೂ ಅವಳ ಇನ್ನೊಂದು ಮುಖವನ್ನು ತೋರಿಸುತ್ತದೆ. ಸಹಕಲಾವಿದರೊಂದಿಗೆ ಅನೇಕ ಸಲ ಇವಳು ಜಗಳಾಡಿದ್ದಕ್ಕೆ ಉದಾಹರಣೆಗಳು ಸಿಗುತ್ತವೆ. ಅವಳು ಪಾರಿಜಾತ ಮಾಡುತ್ತಿದ್ದ ಪ್ರಾರಂಭದ ದಿನಗಳಲ್ಲೇ ಇಂಥ ಒಂದು ಉದಾಹರಣೆ ಸಿಗುತ್ತದೆ. ಯಾದವಾಡ ಮಲಕಪ್ಪನಲ್ಲಿ ಆಟಕಲಿಯುತ್ತಿರುವಾಗ ಅವಳೊಂದಿಗೆ ಸಿದ್ದಯ್ಯ ಚಟ್ಟಿಮಠ ಎಂಬುವವನು ಕೃಷ್ಣ ಪಾತ್ರ ಮಾಡುತ್ತಿದ್ದ. ಯಾಕೊ ಏನೊ ಸಿದ್ದಯ್ಯನಿಗೂ ನಿಂಗವ್ವನಿಗೂ ಹೊಂದಿಕೊಳ್ಳಲೇಯಿಲ್ಲ. ಒಳಗೊಳಗೇ ಇದ್ದ ಈ ಹೊಗೆ ಒಂದು ದಿನ ಹೊರಗೆ ಸ್ಫೋಟಗೊಂಡು ಇಬ್ಬರೂ ವಾಗ್ವಾದಕ್ಕೆ ಇಳಿದರು. ಅಂದು ಅವಳನ್ನು ಬೈದು ಬಣ್ಣ ಒರಸಿಕೊಂಡ ಸಿದ್ದಯ್ಯ ಮುಂದೆ ಅಟ್ಟವನ್ನೇ ಹತ್ತಲಿಲ್ಲ. ಈ ಸಂಗತಿಯನ್ನು ಹೇಳಿದ ಯಾದವಾಡದ ಈರಯ್ಯ ಚಟ್ಟಿಮಠ ಎಂಬ ಹಿರಿಯರು 'ನಿಂಗವ್ವ ತುಂಬ ಹಠವಾದಿಯಾಗಿದ್ದಳು' ಎಂದರು.

ಬರಗಿ ಅಪ್ಪಾಲಾಲ ನಿಂಗವ್ವನಲ್ಲಿ ಭಾಗವತ ಮಾಡುತ್ತಿದ್ದ ದಿನಗಳು. ಒಂದು ದಿನ ತಾಲೀಮ ನಡೆದಿತ್ತು. ನಿಂಗವ್ವ ಹಾಡುತ್ತಿದ್ದಳು, ಅಪ್ಪಾಲಾಲ ತಾಳ ಬಾರಿಸುತ್ತಿದ್ದ. ಇದು ನಡೆಯುತ್ತಿದ್ದಂತೆಯೇ ಅಪ್ಪಾಲಾಲ ತಾಳ ತಪ್ಪಿದಂತೆ ಅನ್ನಿಸಿತು. ಅವನು ನಿಜವಾಗಿಯೂ ತಾಳ ತಪ್ಪಿದನೋ ಇವಳಿಗೇ ಹಾಗೆ ಭಾಸವಾಯಿತೋ ಸತ್ಯ ಯಾವುದೇ ಇರಲಿ, ನಿಂಗವ್ವನ ಸಿಟ್ಟು ಭುಗಿಲ್ ಎಂದಿತು. ಹಿಂದುಮುಂದು ನೋಡದೇ 'ಎತ್ತ ಬಾರಸ್ತಿಯೋ ನೀ ತಾಳ' ಎಂದು ಒಮ್ಮೆಲೇ ಜಾತಿಯೆತ್ತಿ ಬೈದುಬಿಟ್ಟಳು. ಅಪ್ಪಾಲಾಲನೂ ಅಷ್ಟೇ ಬಿರುಸಾಗಿ ಅವಳ ಜಾತಿ ಎತ್ತಿ 'ನೀ ಎತ್ತ ಹಾಡ್ತಿ ನೋಡಿಕೋ' ಎಂದು ಬೈದು ಬಿಟ್ಟ. ನಿಂಗವ್ವ ಸಾವಧಾನವಾಗಿ ವಿಷಯವನ್ನು ವಿವೇಚಿಸಿದ್ದರೆ ಈ ಜಗಳಕ್ಕೆ ಅವಕಾಶವೇ ಇರಲಿಲ್ಲ. ಜಗಳ ದೀರ್ಘಕ್ಕೇ ಹೋಯಿತು. ಹಲವಾರು ಜನರಿಗೆ ಪಾರಿಜಾತವನ್ನು ಕಲಿಸಿ ಸಾಕಷ್ಟು ಕಂಪನಿಗಳನ್ನು ತಯಾರಿಸಿದ್ದ ಬರಗಿ ಅಪ್ಪಾಲಾಲನಿಗೆ ಸಿಟ್ಟು ಆವರಿಸಿತ್ತು. ನಿಂಗವ್ವನಿಗೆ ಹೇಳಿದ 'ಮಹಾ ಲಿಂಗಪುರದೊಳಗ ಸಾಕಷ್ಟ ಜನಾ ಕಲತವರದಾರ. ಕರಸೂಣು. ನಂತ ತಪ್ಪ ಅನಿಸಿದರ ನೀ ನನಗ ಶಿಕ್ಷಾ ಕೊಡ. ನಿಂದ ತಪ್ಪ ಅನಿಸಿದರ ನಾ ನಿನಗ ಶಿಕ್ಷಾ ಕೊಡತನ.' ಯಾರು ಯಾರೋ ಮಧ್ಯ ಪ್ರವೇಶ ಮಾಡಿ ವಾಗ್ವಾದವನ್ನು ತಾತ್ಕಾಲಿಕ ನಿಲ್ಲಿಸಿದರು. ಆದರೆ ನಿಂಗವ್ವನ ಈ ನಡತೆ ಅಪ್ಪಾಲಾಲನಿಗೆ ವಿಪರೀತವೆನ್ನಿಸಿತು. ಅವಳ ಕಂಪನಿಯನ್ನೇ ಬಿಡಲು ನಿರ್ಧರಿಸಿದ. ಮರುದಿನ ಮುಂಜಾನೆ ಅಪ್ಪಾಲಾಲ ತನ್ನ ಮತ್ತು ನಿಂಗವ್ವನ ನಡುವಿನ ಹಣಕಾಸಿನ ಲೆಕ್ಕಾಚಾರ ಮಾಡಿಸಿದ. ತನ್ನ ಪಾಲಿನ ಹಣವನ್ನು ತೆಗೆದುಕೊಂಡು ನಿಂಗವ್ವನ ಕಂಪನಿಯನ್ನು ಬಿಟ್ಟು ಬರಗಿಯ ಕಡೆಗೆ ಹೊರಟುಹೋದ.

ಕುಡಿತದ ಚಟ ನಿಂಗವ್ವನ ಸ್ವಭಾವಕ್ಕಂಟಿದ ದೌರ್ಬಲ್ಯವಾಗಿತ್ತು. ವಿಪರೀತ ಕುಡಿಯುತ್ತಿದ್ದಳು. ಮುಂಜಾನೆ ಸೆರೆ, ಸಾಯಂಕಾಲ ಸಿಂದಿ. ಅವಳ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಕಲಾವಿದರು ಅವಳ ಈ ದೌರ್ಬಲ್ಯಕ್ಕಾಗಿ ತುಂಬ ಮರುಗುತ್ತಿದ್ದರು. ನಿಂಗವ್ವನ ಉದಾರಗುಣ, ನಿಂಗವ್ವನ ಕಂಪನಿ ಕಟ್ಟಿದ ಛಲ ಇವೆಲ್ಲವನ್ನೂ ಮುಕ್ತ ಕಂಠದಿಂದ ಹೊಗಳುತ್ತಿದ್ದ ನಣದಿ ರಾಮಣ್ಣ ಅವಳ ಈ ಕುಡಿತದ ಚಟವನ್ನು ಮಾತ್ರ ಅವಳ ಎದುರಿಗೇ ನೇರವಾಗಿ ಖಂಡಿಸುತ್ತಿದ್ದರು. 'ಯವ್ವಾ, ನೀ ಈ ಚಟಾ ಬಿಡ' ಎಂದು ವಾತ್ಸಲ್ಯಭಾವದಿಂದ ಹೇಳಿದ್ದು ಹಲವಾರು ಬಾರಿ. ನಿಂಗವ್ವ ತನ್ನ ದೌರ್ಬಲ್ಯವನ್ನು ಒಪ್ಪಿಕೊಂಡು 'ಚಟಾ ಬಿದ್ದೈತೆಲೊ ಮಗನ ಬಿಡಾನಾಗೂದಿಲ್ಲ ಏನ ಮಾಡ್ಲಿ' ಎಂದು ಹೇಳುತ್ತಿದ್ದಳು. ಏನೋ ದೌರ್ಬಲ್ಯ ಸೇರಿಕೊಂಡಿದೆ. ಉಳಿದ ವೇಳೆಯಲ್ಲಿ ಏನಾದರೂ ಮಾಡಿಕೊಳ್ಳಲಿ ಕನಿಷ್ಟ ಪಕ್ಷ ಆಟದ ಮೇಲಾದರೂ ಕುಡಿದು ಪಾತ್ರ ಮಾಡುವುದನ್ನು ಬಿಡಬೇಕೆನ್ನುವುದು ರಾಮಣ್ಣರ ಆಶೆಯಾಗಿತ್ತು. 'ಬಣ್ಣಾ ಹಚ್ಚೊ ತನಕಾ ನಾ ನಿನ್ನ ಮಗಾ ಇರಬಹುದು, ನೀ ನನ್ನ ತಾಯಿ ಇರಬಹುದು, ಹಚ್ಚಿದ ಮ್ಯಾಗ ನಾ ಕೃಷ್ಣ, ನೀ ಸತ್ಯಭಾಮಾ ಕನಿಷ್ಟ ಪಕ್ಷ ನಿನ್ನ ಪಾತ್ರಕ್ಕ ಕಿಮ್ಮತ್ತ ಕೊಟ್ಟಾದ್ರೂ ಕುಡಿಯೂದ ಬಿಡ' ಎಂದು ನಣದಿಯವರು ಬೇಡಿಕೊಳ್ಳುತ್ತಿದ್ದರು. ಇದಾವುದನ್ನೂ ಲಕ್ಷಿಸಲಾರದ ಮಟ್ಟಿಗೆ ಕುಡಿತದ

ಚಟ ನಿಂಗವ್ವನನ್ನು ಭೇದಿಸಿತ್ತು. ಅವಳ ಈ ಕುಡಿತದ ದೌರ್ಬಲ್ಯವೇ ರಾಮಣ್ಣ ಅವಳ ಕಂಪನಿಯನ್ನು ಬಿಡಬೇಕಾಗಿ ಬಂದಿತೆಂದು ವಿಷಾದದಿಂದ ಸ್ಮರಿಸಿಕೊಳ್ಳುತ್ತಾರೆ.

ಎಷ್ಟು ಕೇಳಿಕೊಂಡರೂ ನಿಂಗವ್ವ ತನ್ನ ಕುಡಿತದ ಚಟವನ್ನು ಬಿಡುತ್ತಿಲ್ಲ ಆದ್ದರಿಂದ ಅವಳ ಕಂಪನಿಯನ್ನೇ ತೊರೆಯಬೇಕೆಂದು ರಾಮಣ್ಣ ನಿಶ್ಚಯಿಸಿಕೊಂಡರು. ತನ್ನೊಂದಿಗೆ ಈ ಕಂಪನಿಯನ್ನು ಬಿಡಬೇಕೆಂದು ಮತ್ತೆ ಮೂರು ಜನರನ್ನು ತಯಾರಿಸಿದರು. ಈ ನಾಲ್ಕೂ ಜನ ಕಂಪನಿ ಬಿಡುವ ಅವಕಾಶಕ್ಕಾಗಿ ಕಾಯುತ್ತಿದ್ದರು. ಅಂಥ ಒಂದು ಅವಕಾಶ ತಾನಾಗಿಯೇ ಒದಗಿ ಬಂತು.

ನಿಂಗವ್ವ ಊರಲಿಲ್ಲದ ಒಂದು ದಿನ ಬೆಳಗಾವಿಯ ಹತ್ತಿರವಿರುವ ಮಾರಿಹಾಳ ಜಹಗೀರದಾರರು ಆಟಕ್ಕೆ ಆಹ್ವಾನಿಸಿ ವೀಳ್ಯ ಕಳಿಸಿದರು. ಆದರೆ ಅವರು ನೀಡಿದ ಒಂದು ಸೂಚನೆಯೆಂದರೆ, ನಿಮ್ಮ ಸಂಗಡ ನಿಂಗವ್ವ ಬರಕೂಡದು, ಅಥವಾ ಪಾತ್ರಧಾರಿಯಾಗಿ ಅವಳು ಭಾಗವಹಿಸಕೂಡದು. ನಿಂಗವ್ವ ಊರಲ್ಲಿರಲಿಲ್ಲವಾಗಿ ಒಳ್ಳೆಯ ಸುಸಂಧಿ ದೊರೆತಂತಾಗಿ ಆಟಕ್ಕೆ ಬರುತ್ತೇವೆ ಎಂದು ಒಪ್ಪಿಕೊಂಡುಬಿಟ್ಟರು. ಮಾರಿಹಾಳದವರೊಂದಿಗೆ ಮಾಡಿಕೊಂಡ ಒಪ್ಪಂದದ ಪ್ರಕಾರ ಇವರು ಅಲ್ಲಿ ಎರಡು ದಿನ ಆಟ ಮಾಡಬೇಕಿತ್ತು. ಇವರು ಆಟವನ್ನು ಒಪ್ಪಿಕೊಂಡ ಮೇಲೆ ಮಾರಿಹಾಳದವರು ಉತ್ಸಾಹದಿಂದ ಹ್ಯಾಂಡಬಿಲ್ಲು ಛಾಪಿಸಿ ಬೆಳಗಾವಿಯಲ್ಲಿ ಹಂಚಿಬಿಟ್ಟರು.

ಮೊದಲನೆಯ ದಿನ ಆಟವನ್ನು ನಡೆಸಿಕೊಟ್ಟಿದ್ದರು. ಎರಡನೆಯ ದಿನ ಆಟದ ವೇಳೆಗೆ ಸರಿಯಾಗಿ ನಿಂಗವ್ವ ಮಾರಿಹಾಳಕ್ಕೆ ಬಂದು ಬಿಟ್ಟಳು. ತನಗೆ ಗೊತ್ತಿರಲಾರದಂತೆ ಇವಳು ಮಾರಿಹಾಳಕ್ಕೆ ಆಟಕ್ಕೆ ಬಂದ ವಿಷಯವನ್ನು ಬೈಲಹೊಂಗಲದಲ್ಲಿ ತನ್ನ ಹೆಸರಿಲ್ಲದ ಹ್ಯಾಂಡಬಿಲ್ ನೋಡಿ ನಿಂಗವ್ವ ತಿಳಿದುಕೊಂಡಳು. ನಿಂಗವ್ವನಿಗೆ ತಳಮಳವಾಗಿತ್ತು. ನೇರವಾಗಿ ಬಣ್ಣದ ಕೋಣೆಯನ್ನು ಪ್ರವೇಶ ಮಾಡಿ ಸತ್ಯಭಾಮಾನ ಪಾತ್ರಕ್ಕೆ ಬಣ್ಣ ಹಚ್ಚಿಕೊಳ್ಳುತ್ತಿದ್ದ ಬಡಕುಂದ್ರಿಯ ಗೂಳಪ್ಪನೆದುರು ನಿಂತು 'ನೀ ಎಂದ ಮಾಡಿದ್ದಿ.........ಬಾಳ ಶ್ಯಾಣ್ಯಾ ಏನ ನೀ' ಎಂದು ಬೈದು ಬಿಟ್ಟಳು. ಅವಳಿಂದ ಓತಪ್ರೋತವಾಗಿ ಇವರೆಲ್ಲರ ಮೇಲೆ ಬೈಗಳಿನ ಮಳೆಯಾಗುತ್ತಿತ್ತು. ಬಣ್ಣದ ಕೋಣೆಯಲ್ಲಿ ಹೀಗಿರುವಂತೆಯೇ ಅಟ್ಟದ ಮೇಲೆ ಗೊಲ್ಲತಿಯ ಪ್ರವೇಶ ಪ್ರಾರಂಭವಾಗಿತ್ತು. ಇದುವರೆಗೆ ಸುಮ್ಮನೆ ಕುಳಿತು ಬಣ್ಣ ಹಚ್ಚಿಕೊಳ್ಳುತ್ತಿದ್ದ ರಾಮಣ್ಣನಿಗೆ ಸಮಸ್ಯೆ ಎದುರಾಯಿತು. ಆ ಕಡೆಗೆ ಆಟ ನಡೆದಿದೆ, ಇಲ್ಲಿ ಯಜಮಾನತಿ ನಿಂಗವ್ವ ಒದರಾಡುತ್ತಿದ್ದಾಳೆ. ರಾಮಣ್ಣ ಅವಳ ಕಡೆಗೆ ತಿರುಗುವ ಹೊತ್ತಿಗೆ ನಿಂಗವ್ವನಿಗೆ ಅಳು ಬಂದು ಬಿಟ್ಟಿತು. ಅಳುತ್ತಲೇ ಕೇಳಿದಳು "ನಾ ನಿಮ್ಮನ್ನೆಲ್ಲಾ ಮಕ್ಕಳಾಂಗ ಜ್ವಾಪಾನ ಮಾಡಿದ್ದೆ ನನ್ನ ಬಿಟ್ಟ ನಿಮಗ್ಹ್ಯಾಂಗ ಬಣ್ಣಾ ಹಚ್ಚೊವಂಗಾತು?' ರಾಮಣ್ಣ ಸಾಂತ್ವನ ಹೇಳಿದ 'ಈಗರ ನಿನ್ನ ಎಲ್ಲಿ ನಾವು ಬಿಟ್ಟ ಒಕ್ಕೊಟ್ಟೇವು? ಈಗೂ ನೀನೇ ಯಜಮಾನತಿ ನಿನಗೇನ ಮುಟ್ಟಬೇಕೋ ಅದೆಲ್ಲಾ ಮುಟ್ಟೇ

ಮುಟ್ಟತೈತಿ' ರಾಮಣ್ಣರ ಈ ಸಾಂತ್ವನ ನಿಂಗವ್ವನನ್ನು ಸಮಾಧಾನಗೊಳಿಸಲಿಲ್ಲ. ಗೂಳಪ್ಪನನ್ನು ಬಡಿಸಿ ತಾನೇ ಸತ್ಯಭಾಮಾನ ವೇಷತೊಟ್ಟಳು. ನಣದಿಯವರಿಗೆ ಬಹುದೊಡ್ಡ ಸಮಸ್ಯೆ ಎದುರಾಯಿತು. ಆಟ ಒಪ್ಪಿಸುವಾಗ ನಿಂಗವ್ವ ಭಾಗವಹಿಸುವಂತಿಲ್ಲವೆಂದು ಮಾರಿಹಾಳದವರು ಕರಾರುಮಾಡಿದ್ದರು. ಈಗ ತಾನೇ ಪಾತ್ರ ಮಾಡುವುದಾಗಿ ನಿಂಗವ್ವ ಹಟತೊಟ್ಟು ವೇಷ ಧರಿಸಿದ್ದಾಳೆ. ನಿಂಗವ್ವ ಬೇಡವೆಂದವರನ್ನು ಹೇಗೆ ಸಮಾಧಾನಗೊಳಿಸುವುದು? ಈ ಸಮಸ್ಯೆ ಒಂದು ಕಡೆಯಾದರೆ, ಇನ್ನೊಂದು ಕಡೆಗೆ ತನಗೆ ಹಚ್ಚಿದ ಬಣ್ಣವನ್ನು ಒರೆಸಿಕೊಳ್ಳುವ ಪ್ರಸಂಗ ಒದಗಿ ಅಪಮಾನವಾಯಿತೆಂದು ಗೂಳಪ್ಪ ಅಸಮಾಧಾನಗೊಂಡಿದ್ದ. ಅಂತೂ ಹೇಗೆ ಹೇಗೋ ಆ ಕಡೆಗೆ ಆಟತರಿಸಿದ ಹಿರಿಯರನ್ನು, ಈ ಕಡೆಗೆ ಗೂಳಪ್ಪನನ್ನು ಸಮಾಧಾನ ಪಡಿಸಿದ ರಾಮಣ್ಣ ಅಟ್ಟದ ಮೇಲೆ ಕೃಷ್ಣ ಪಾತ್ರಧಾರಿಯಾಗಿ ಸತ್ಯಭಾಮಾ ಪಾತ್ರಧಾರಿಯಾದ ನಿಂಗವ್ವನೊಂದಿಗೆ ಆಟಮಾಡಲು ನಿಂತರು.

ತನಗೆ ಇದುವರೆಗೆ ಆದ ಅಸಮಾಧಾನವನ್ನು ನಿಂಗವ್ವ ಅಟ್ಟದ ಮೇಲೆ ತೋಡಿಕೊಳ್ಳತೊಡಗಿದಳು. ನಿಂಗವ್ವ ಸತ್ಯಭಾಮೆಯಾಗಿ ಮಾತನಾಡುತ್ತಿದ್ದರೂ ಆ ಮಾತುಗಳೆಲ್ಲ ನೇರವಾಗಿ ನಣದಿ ರಾಮಣ್ಣರಿಗೇ ಅನ್ವಯಿಸುವಂತಿದ್ದವು. 'ಕೃಷ್ಣಾ, ನನ್ನಲ್ಲಿ ಏನು ಕಡಿಮೆಯಿತ್ತೆಂದು ನನ್ನನ್ನು ಬಿಟ್ಟೆ?' ಎಂದ ನಿಂಗವ್ವನ ಮಾತು ಮೇಲ್ನೋಟಕ್ಕೆ ಸತ್ಯಭಾಮೆಯದು ಎನ್ನಿಸುತ್ತಿದ್ದರೂ ಅದು ತನ್ನನ್ನು ಬಿಟ್ಟು ಆಟವಾಡಲು ಬಂದ ನಣದಿಯವರನ್ನೇ ಕುರಿತಾಗಿತ್ತು. ಅಷ್ಟೇ ಗಂಭೀರವಾಗಿ ಕೃಷ್ಣನಾಗಿ ರಾಮಣ್ಣ ಉತ್ತರ ಕೊಡಬೇಕಾಯಿತು. 'ನಿನ್ನಷ್ಟಕ್ಕೆ ನೀನು ದೊಡ್ಡವಳಿರಬಹುದು, ನನಗೆ ನನ್ನ ಮಾತಿಗೆ ಮರ್ಯಾದೆ ಇಲ್ಲವೆ?' ಇದು ನಿಂಗವ್ವನ ಕುಡಿತದ ಚಟವನ್ನೇ ಕುರಿತ ಮಾತಾಗಿತ್ತು. ಇಂಥವೇ ಮಾತನ್ನು ನಿಂಗವ್ವ ಆಡುತ್ತಿದ್ದಂತೆ ಇದೇ ಬಗೆಯಾದ ಉತ್ತರಗಳಿಂದ ರಾಮಣ್ಣ ಸಾವಧಾನವಾಗಿ ನಿರ್ವಹಿಸುತ್ತ ಬಂದರು. ಒಂದು ಹಂತದಲ್ಲಿ ನಿಂಗವ್ವ ರಾಮಣ್ಣರ ಜಾತಿಯೆತ್ತಿಯೂ ಮಾತನಾಡಿದಳು. ಇದು ಮಿತಿಮೀರಿ ಪ್ರೇಕ್ಷಕರೂ ಇದು ಇವರಿಬ್ಬರ ವೈಯಕ್ತಿಕ ಜಗಳವೆಂಬುದನ್ನು ತಿಳಿಯುವ ಮಟ್ಟಗಾಯಿತು. ಪ್ರೇಕ್ಷಕನೊಬ್ಬ ಎದ್ದು ನಿಂತು 'ನೀವೇನ ಆಟಾ ಆಡಾಕ ಬಂದೀರೋ ಜಗಳಾಡಾಕ ಬಂದೀರೋ' ಎಂದು ಕೇಳಿದ್ದೂ ಆಯಿತು. ಬೇಸತ್ತ ರಾಮಣ್ಣ ಕೊನೆಗೆ ಚೀಟಿಯೊಂದರಲ್ಲಿ ಬರೆದಂತೆ ಮಾಡಿ 'ತೆಗೆದುಕೋ ಇದೇ ನಾನು ನಿನಗೆ ಕೊಡುವ ಸೋಡಚೀಟಿ ಎಂದು ತಿಳಿ' ಎಂದು ಹೇಳಿ ಕೊಟ್ಟು ಒಳಗೆ ಬಂದುಬಿಟ್ಟರು. ನಿಂಗವ್ವನೊಂದಿಗೆ ಆಟವಾಡಿದ್ದು ಅಂದೇ ಕೊನೆಯಾಯಿತು. ಅಂದಿನ ಆಟವನ್ನು ಹೇಗೋ ಮುಗಿಸಿಕೊಂಡು ಎಲ್ಲರೂ ಕೂಡಿಯೇ ಕೊಣ್ಣೂರ ಸ್ಟೇಶನ್‌ವರೆಗೆ ಬಂದರು. ಅಲ್ಲಿ ಲೆಕ್ಕಪತ್ರವಾಗಿ ಎಲ್ಲರೂ ತಮ್ಮ ತಮ್ಮ ಪಾಲಿನದನ್ನು ತೆಗೆದುಕೊಂಡರು. ತಾವು ಆಟ ಬಿಟ್ಟಿದ್ದೇವೆ ಎಂಬುದನ್ನು ತಿಳಿಸದೆ 'ಮುಂದ ಆಟಾ ಹಿಡಿದರ ನಮ್ಮನ್ನ ಕರಿವಾ' ಎಂದು ಹೇಳಿ ಹೊರಟು ಬಿಟ್ಟರು. ಅಂದು ಹೊರಬಿದ್ದ ರಾಮಣ್ಣ ಮತ್ತೆ ಅವಳ ಕಂಪನಿಯನ್ನು ಪ್ರವೇಶಿಸಲಿಲ್ಲ.

ರಾಮಣ್ಣರಂಥ ಉನ್ನತಮಟ್ಟದ ಪಾತ್ರಧಾರಿಯನ್ನು ನಿಂಗವ್ವ ಈ ರೀತಿ ಕಳೆದುಕೊಂಡುದು ತನ್ನ ಕುಡಿತದ ದೌರ್ಬಲ್ಯದಿಂದಾಗಿ.

ನಿಂಗವ್ವನ ವಿಶೇಷತೆಯೆಂದರೆ ಎಂಥ ಪ್ರಸಂಗದಲ್ಲೂ ಧೃತಿಗೆಡದೆ ಇದ್ದುದು. ಯಾರೇ ಬಂದು ಸೇರಲಿ ಬಿಟ್ಟುಹೋಗಲಿ ನಿಂಗವ್ವ ಧೈರ್ಯವನ್ನು ಕಳೆದುಕೊಳ್ಳುತ್ತಿರಲಿಲ್ಲ, ಸಪ್ಪೆಯಾಗುತ್ತಿರಲಿಲ್ಲ.

ಆಟವಾಡುವ ಊರಿಗೆ ನಿಂಗವ್ವ ನಡೆದು ಹೋಗುತ್ತಿರಲಿಲ್ಲ, ಕುದುರೆ ಹತ್ತಿ ಆಗಮಿಸುತ್ತಿದ್ದಳು, ಕುದುರೆಗೆ ಒಂದು ಆಳೂ ಇತ್ತು. ನಿಂಗವ್ವ ಜರದ ಶೆಲ್ಲೆ, ಮಚ್ಚಿ ಧರಿಸುತ್ತಿದ್ದಳು. ಹೀಗೆ ಅವಳು ವೈಭವಯುತ ಜೀವನವನ್ನೇ ಕಳೆಯುತ್ತಿದ್ದಳೆಂದು ಕೌಟಕೊಪ್ಪ ರಾಮಣ್ಣ ಹೇಳುತ್ತಾರೆ. ಬಾಳಿನ ಏಳು ಬೀಳುಗಳಿಗೆ ಧೃತಿಗೆಡದೆ ಒಂದು ಕಂಪನಿಯ ಯಜಮಾನತಿಯಾಗಿ ಕುದುರೆಯ ಮೇಲೆ ಆಟಕ್ಕೆ ಬರುತ್ತಿದ್ದ ಈ ಪರಿ ಅವಳ ವ್ಯಕ್ತಿತ್ವದ ಗಾಂಭೀರ್ಯಕ್ಕೆ ತೆರೆದಿಟ್ಟ ಪುಸ್ತಕವಾಗಿದೆ. ಅವಳ ಉದಾತ್ತತೆ ತೇಜಗಳನ್ನು ನೋಡಿದರೆ ನಿಂಗವ್ವ ತನ್ನ ಕಾಲದ ಪಾರಿಜಾತ ರಂಗಭೂಮಿಯ ಸಾಮ್ರಾಜ್ಞೆಯಾಗಿ ಬಾಳಿದಳು.

# ನಿಂಗವ್ವನ ವಂಶ

ಕೌಜಲಗಿಯನ್ನು ಬಿಟ್ಟು ಮಹಾಲಿಂಗಪುರದಲ್ಲಿ ನೆಲಸಿದ ಮೇಲೆ ನಿಂಗವ್ವ ತನ್ನ ಕೊನೆಗಾಲದವರೆಗೂ ಅಲ್ಲಿಯೇ ಉಳಿದಳು. ನಿಂಗವ್ವನಿಗೆ ಐಹಿಕ ಸಂಪತ್ತಿನ ಬಗ್ಗೆ ಯಾವ ಮೋಹವೂ ಇರಲಿಲ್ಲ. ತನಗಂತೂ ಮಕ್ಕಳು ಮರಿಗಳಿಲ್ಲ. ಒಂದು ಬಗೆಯ ವಿರಕ್ತ ಜೀವನವನ್ನು ನಡೆಸುತ್ತಿದ್ದವಳು ಆಕಸ್ಮಿಕವಾಗಿ ಸಗರೆವ್ವ ಎನ್ನುವವಳನ್ನು ಸಲುಹತೊಡಗಿದಳು. ಸಗರೆವ್ವ ಎನ್ನುವವಳು ಪರದೇಶಿ ಗರ್ಭಿಣಿ ಯಾರಿಗೂ ಬೇಡವಾಗಿದ್ದ ಪಾಪಿ. ಮಹಾಲಿಂಗಪುರದಲ್ಲಿ ಭಿಕ್ಷೆ ಬೇಡಿ ತಿರುಗುತ್ತಿದ್ದವಳನ್ನು ನಿಂಗವ್ವ ಮನೆಗೆ ಕರೆದುಕೊಂಡು ಹೋಗಿ ಸಾಕತೊಡಗಿದಳು. ಈ ಸಗರೆವ್ವನಿಗೆ ಹುಟ್ಟಿದ ಕೂಸೇ ಲಕ್ಷ್ಮಿಬಾಯಿ. ಸಗರೆವ್ವನನ್ನು ಪೋಷಿಸುತ್ತಿದ್ದ ನಿಂಗವ್ವ ಕ್ರಮೇಣ ಲಕ್ಷ್ಮಿಬಾಯಿಯನ್ನು ಪೋಷಿಸಬೇಕಾಯಿತು. ಬರಬರುತ್ತ ಲಕ್ಷ್ಮಿಬಾಯಿಯಲ್ಲಿ ವಾತ್ಸಲ್ಯ ಮೊಳೆತು ಇವಳು ತನ್ನ ವಂಶ ಬೆಳೆಸುವ ಜೀವವಾಗಬೇಕು ಎಂಬ ಹಂಬಲ ಉಂಟಾಯಿತು. ತನ್ನ ತರುವಾಯ ತನ್ನದು ಎಂದು ಹೇಳಿಕೊಳ್ಳುವ ಜೀವ ಇರಬೇಕು ಎಂದು ಲಕ್ಷ್ಮಿಬಾಯಿಯನ್ನು ದತ್ತು ತೆಗೆದುಕೊಂಡಳು. ಈ ಲಕ್ಷ್ಮಿಬಾಯಿ ದೊಡ್ಡವಳಾದ ಮೇಲೆ ಸತ್ಯಭಾಮಾನ ಪಾತ್ರ ಮಾಡತೊಡಗಿದಳೆಂದು ಬುದ್ನಿಯ ಈರಪ್ಪ ಅಭಿಪ್ರಾಯ ಪಡುತ್ತಾರೆ. ಅವರಾದಿಯ ಬಡಿಗ ಮನೆತನದವನೊಬ್ಬನೊಂದಿಗೆ ಲಕ್ಷ್ಮಿಬಾಯಿಯ ವಿವಾಹವಾಯಿತು. ಅವರಿಗೆ ಜನಿಸಿದ ಮಕ್ಕಳೇ ಚಂದ್ರವ್ವ ಮತ್ತು ಮಹಾದೇವಪ್ಪ. ಚಂದ್ರವ್ವ ಹಿರಿಯವಳು. ಮಹಾದೇವಪ್ಪ ಕಿರಿಯವ. ಮಹಾದೇವಪ್ಪ ದೊಡ್ಡವನಾದ ಮೇಲೆ ಹಾರ್ಮೋನಿಯಂ ಬಾರಿಸತೊಡಗಿದ. ಅವನು ಬೆಳೆಯುತ್ತ ಮೇಲಾದ ಹಾರ್ಮೋನಿಯಂ ವಾದಕನಾದನೆಂದು ಅನೇಕರು ಅಭಿಪ್ರಾಯ ಪಡುತ್ತಾರೆ. ಚಂದ್ರವ್ವನೂ ಪಾರಿಜಾತದಲ್ಲಿ ಪಾತ್ರಮಾಡುತ್ತಿದ್ದಳು. ಮಹಾದೇವಪ್ಪ ಹೃದಯಾಘಾತದಿಂದ ತೀರಿಕೊಂಡ, ಚಂದ್ರವ್ವ ಕ್ಯಾನ್ಸರ್ ಆಗಿ ತೀರಿಕೊಂಡಳು.

ಕಂಪನಿ ನಿಲ್ಲಲಿಲ್ಲ. ಮಹಾದೇವಪ್ಪನ ಮಗ ನಿಂಗಪ್ಪ ಕಂಪನಿಯನ್ನು ಮುಂದುವರಿಸಿಕೊಂಡು ಬಂದ. ನಾಡಿನ ಮೂಲೆಮೂಲೆಗಳಲ್ಲಿ ಆಟವಾಗಿ ಹೆಸರುವಾಸಿಯಾದವಳು ನಿಂಗವ್ವ. ಅವಳ ತರುವಾಯದ ಇವರೆಲ್ಲ ತಮ್ಮ ಶಕ್ತ್ಯಾನುಸಾರವಾಗಿ ಕಲಾಸೇವೆ ಮಾಡಿದರು. ನಿಂಗವ್ವನ ವಂಶವನ್ನು ಈ ರೀತಿಯಾಗಿ ರೇಖಿಸಬಹುದು :

ನಿಂಗವ್ವ
↓
ಲಕ್ಷ್ಮೀಬಾಯಿ (ದತ್ತಕ ಮಗಳು)

ಚಂದ್ರವ್ವ ← → ಮಹಾದೇವಪ್ಪ
↓
ನಿಂಗಪ್ಪ

ನಿಂಗಪ್ಪ ಅನೇಕ ಆಟಗಳನ್ನಾಡಿ ನಿಂಗವ್ವನ ವಂಶವನ್ನು ಮುನ್ನಡೆಸಿಕೊಂಡು ಬಂದನು. ನಿಂಗಪ್ಪ ಮೊದಮೊದಲು ರುಕ್ಮಿಣಿ ಪಾತ್ರ ಮಾಡುತ್ತಿದ್ದ. ಮುಂದೆ ಸೂರು ಸಾಲದಾಗಿ ಪಾತ್ರ ಮಾಡುವುದನ್ನು ಬಿಟ್ಟ. ನಿಂಗಪ್ಪನ ನೇತೃತ್ವದಲ್ಲಿ ಮುಂದುವರಿದ ಕಂಪನಿಯ ಪಾತ್ರ ವಿವರ :

ಕೇಮನಕೋಲ ಯಲ್ಲಪ್ಪ – ಕೃಷ್ಣ
ಗಾಳೆಪ್ಪ ತೊಂಡಿಕಟ್ಟಿ – ಗೌಳಗಿತ್ತಿ
ಚಿಮ್ಮಡ ಮಹಾದೇವಪ್ಪ – ಭಾಗವತ
ಮಾಲಾಬಾಯಿ ಹಿಡಕಲ್ಲ – ಕೊರವಂಜಿ
ರೇಣುಕಾ ಮಾಲಾಪುರ – ರುಕ್ಮಿಣಿ

– ನಿಂಗವ್ವನೇ ಈ ಕಂಪನಿಯ ಸ್ಫೂರ್ತಿ ಲಕ್ಷ್ಮಿಬಾಯಿ, ಮಹಾದೇವಪ್ಪ, ಚಂದ್ರವ್ವ, ನಿಂಗಪ್ಪ ಮುಂತಾಗಿ ಅವಳ ವಂಶದ ಎಲ್ಲರಿಗೂ ಈ ಕಲೆ ರಕ್ತಗತವಾಗಿ ಹರಿದು ಬಂದಿತು. ಮುಂದುವರಿದ ಕಂಪನಿಗೂ ನಿಂಗವ್ವನ ಚೇತನವೇ ಬೆಳಕಾಯಿತು.

ಚಂದ್ರವ್ವ, ಮಹಾದೇವಪ್ಪ ಮುಂತಾದವರಿಗೆ ನಿಂಗವ್ವ ಮಹಾಲಿಂಗಪುರದಲ್ಲಿ ಪಾರಿಜಾತ ಕಲಿಸಿದಂತೆ ಕೌಜಲಗಿಯಲ್ಲಿಯೂ ಚಂದ್ರವ್ವನೆಂಬ ಬೇರೊಬ್ಬ ಹೆಣ್ಣು ಮಗಳಿಗೂ ಕಲಿಸಲು ಯತ್ನಿಸಿದ್ದುಂಟು. ಕೌಜಲಗಿಯ ಕಡೆಯಿಂದ ನಿಂಗವ್ವನಿಗೆ ರಕ್ತಸಂಬಂಧಿ ಈಕೆ. ನಿಂಗವ್ವ ಮಹಾಲಿಂಗಪುರದಲ್ಲಿ ನೆಲೆಸಿದ ಮೇಲೆ ಒಮ್ಮೆ ಅಲ್ಲಿಯ ಮೊಮ್ಮಕ್ಕಳೊಂದಿಗೆ ತಾತ್ಪೂರ್ತಿಕ ನ್ಯಾಯವಾಗಿ ಕೌಜಲಗಿಗೆ ಬಂದು ಇದ್ದಳು. ಈ ವೇಳೆಯಲ್ಲಿ ಆವಳು ಕೌಜಲಗಿಯಲ್ಲಿ ಉಳಿದುಕೊಂಡಿದ್ದು ಎರಡು ವರ್ಷಗಳ ಕಾಲ. ಈ ಅವಧಿಯಲ್ಲಿಯೇ ಪಾರಿಜಾತವನ್ನು ಚಂದ್ರವ್ವನಿಗೆ ಕಲಿಸಲು ಬಯಸಿ ಮೂರು ರಾತ್ರಿಗಳ ಕಾಲ ಮಾತು ಹಾಡು ಹೇಳಿಕೊಟ್ಟಳು. ಇದು ಚಂದ್ರವ್ವನಿಗೆ ಬಗೆಹರಿಯಲಿಲ್ಲ. ಚಂದ್ರವ್ವನ ತಾಯಿ ಮಗಳಿಗೆ ಸಿಟ್ಟು ಮಾಡಿದಳು : 'ಏನ ಮಾಡಾಕೆಳಕುಡಕ ಮನಸ್ಯಾಳಾಕಿ ಬ್ಯಾಡ', ತಾಯಿಯ ಅಣ್ಣನೂ ಸಿಟ್ಟು ಮಾಡಿದನು. 'ಯಾಕ ಸಾಬವ್ವ (ಚಂದ್ರವ್ವನ ತಾಯಿ) ಅದಕ ಕೆಲಸಬೇಕಂತಿಯೇನ್ ಕುಡ್ಯಾಕದು.' ಈ ತಕರಾರುಗಳಿಗೆ ಅಂಜಿದ ಚಂದ್ರವ್ವ ಪಾರಿಜಾತ ಕಲಿಯುವುದನ್ನು ಬಿಟ್ಟುಬಿಟ್ಟಳು.

ನಿಂಗವ್ವ ತೀರಿಕೊಂಡಾಗ ಅವಳಿಗೆ ಎಂಭತ್ತಕ್ಕಿಂತ ಹೆಚ್ಚು ವಯಸ್ಸಾಗಿತ್ತೆಂದು ಹೇಳುತ್ತಾರೆ. ನಿಂಗವ್ವ ತೀರಿಕೊಂಡ ದಿವಸ ಅವಳ ಕಂಪನಿ ಆಟವಾಡಲು ಬೆಳಗಾವಿಗೆ ಹೋಗಿತ್ತು. ಐದು ದಿವಸದ ಕಾಂಟ್ರ್ಯಾಕ್ಟ್ ಹಿಡಿದು ಬೆಳಗಾವಿಯವನೊಬ್ಬ ಕಂಪನಿ ತೆಗೆದುಕೊಂಡು ಹೋಗಿದ್ದ. ಎರಡನೆಯ ದಿನ ಬೆಳಗಾವಿಯಲ್ಲಿ ಆಟ ನಡೆದಾಗ ನಿಂಗವ್ವ ತೀರಿಕೊಂಡ ಸುದ್ದಿ ಬಂತು. ಇವರು ಹೋಗುತ್ತೇವೆ ಎಂದರೆ ಆಟಹಿಡಿದವ ಬಿಡಲಿಲ್ಲ. ನಿಂಗವ್ವ ಐತಿಹಾಸಿಕ ಸಾಧನೆ, ಇದೇ ಕಂಪನಿಯ ನಿರ್ಮಾಣಕ್ಕೆ ಅವಳು ಸಣ್ಣಾದದ್ದು, ಅವಳು ಕಲಾವಿದರೊಂದಿಗೆ ಇರಿಸಿಕೊಂಡ ನಿರ್ವ್ಯಾಜ ಮಮತೆಯ ಸಂಬಂಧ ಆಟ ಹಿಡಿದವನಿಗೇನು? ಯಾವಾಗಲೂ ಅಷ್ಟೇ, ಐತಿಹಾಸಿಕ ಜಾರುತ್ತದೆ, ವರ್ತಮಾನ ಕುಣಿಯುತ್ತದೆ! ಕೊನೆಗೂ ನಿಂಗವ್ವನ ಮಣ್ಣಿಗೆ ಮಹಾದೇವಪ್ಪನೊಬ್ಬನೇ ಹೋದ.

# ಸಮಾರೋಪ

ಜನಪದ ಸಾಹಿತ್ಯ ಕಲೆಗಳನ್ನು ಬೆಳೆಯಿಸಿದವರು ಕೆಳವರ್ಗದವರು. ಅದರಲ್ಲೂ ನಮ್ಮ ಗ್ರಾಮೀಣ ಹೆಣ್ಣು ಮಕ್ಕಳ ಕೊಡುಗೆ ಗಮನಾರ್ಹ. ಸಾಮಾನ್ಯವಾಗಿ ಜನಪದ ಸಾಹಿತ್ಯದಲ್ಲಿ ಹೆಣ್ಣು ಮಕ್ಕಳ ಪಾಲೆಂದರೆ ತ್ರಿಪದಿ, ಸೋಬಾನದ ಹಾಡು, ಕೋಲಾಟದ ಹಾಡು, ಜೋಗುಳ ಹಾಡುಗಳಿಗೆ ಸಂಬಂಧಪಟ್ಟದ್ದು. ಇದನ್ನು ಮೀರಿ ನಿಂಗವ್ವ ಬೇರೊಂದು ದಿಸೆಯಲ್ಲಿ ತನ್ನ ಅಭಿವ್ಯಕ್ತಿಗೆ ರಂಗಮಾಧ್ಯಮ ಕಂಡುಕೊಂಡಳು. ಕೇವಲ ನಟಿಯಾಗಿ ಅಲ್ಲ, ಒಂದು ಕಂಪನಿಯನ್ನು ಕಟ್ಟಿ ಅದನ್ನು ದೀರ್ಘಕಾಲ ವಿಸ್ತರಿಸಿದ್ದರಲ್ಲಿ ಅವಳ ಸಾಹಸವಿದೆ, ಕಲಾಪ್ರೀತಿಯಿದೆ. ಇವಳಿಂದ ಅನೇಕ ಕಲಾಚೇತನಗಳು ಬೆಳಕು ಕಂಡವು. ಅನೇಕ ಕಂಪನಿಗಳಿಗೆ ಇವಳೊಂದು ಮಾದರಿಯಾದಳು. ಕರ್ನಾಟಕದ ಉತ್ತರದ ಗಡಿಯಲ್ಲಿ ಪಾರಿಜಾತದ ಅನೇಕ ಪ್ರದರ್ಶನಗಳನ್ನಿತ್ತು, ಪಾರಿಜಾತವನ್ನು ಕುರಿತಾಗಿ ಜನರಲ್ಲಿ ಒಲವು ತುಂಬಿದಳು. ನಿಂಗವ್ವನ ದಿಟ್ಟತನ, ಕಲಾಭಿಜ್ಞತೆಗಳು ಅವಳ ತರುವಾಯದ ದಿನಗಳಲ್ಲಿ ಈ ಕ್ಷೇತ್ರದಲ್ಲಿ ಹೆಣ್ಣುಮಕ್ಕಳು ನುಗ್ಗಲು ಸ್ಫೂರ್ತಿಯನ್ನಿತ್ತಿವೆ. ಸೂಳಿಕೇರಿ ಯಮನವ್ವ ಜಮಖಂಡಿ ಚಂಪವ್ವ ಲೋಕಾಪುರ ಎಲ್ಲವ್ವ, ನಾವಲಗಟ್ಟಿ ಸಾವಕ್ಕ ಈ ಮುಂತಾದ ಪ್ರಸಿದ್ಧ ನಟಿಯರಿಗೆ ನಿಂಗವ್ವ ಸೂರ್ಯನ ಬೆಳಕಾಗಿದ್ದಾಳೆ.

ಇಂದು ಅನೇಕ ಪಾರಿಜಾತ ಕಂಪನಿಗಳು ಉತ್ತರ ಕರ್ನಾಟಕದಲ್ಲಿವೆ. ಅದರಲ್ಲೂ ವಿಶೇಷವಾಗಿ ವಿಜಾಪುರ ಜಿಲ್ಲೆಯ ಮಹಾಲಿಂಗಪುರ–ಜಮಖಂಡಿ ಭಾಗ ಇಂದು ಪಾರಿಜಾತ ಆಟಕ್ಕೆ ನೆಲೆಯಾಗಿದೆ. ಈ ಭಾಗದಲ್ಲಿ ಗಿಡಗಳಿಗೆ ಜೋತುಬಿದ್ದ ಪಾರಿಜಾತ ಕಂಪನಿಯ ಜಾಹೀರಾತು ಬೋರ್ಡುಗಳೇ ಇಲ್ಲಿಯ ಕಂಪನಿಗಳ ಆಧಿಕ್ಯವನ್ನು ಸಾರುತ್ತವೆ. ಈ ಕಂಪನಿಗಳ ಕಲಾವಿದರು ಪ್ರತ್ಯಕ್ಷವಾಗಿಯೋ ಅಪ್ರತ್ಯಕ್ಷವಾಗಿಯೋ ನಿಂಗಮ್ಮನಿಂದ ಸ್ಫೂರ್ತಿಪಡೆದವರು. ಅವಳ ಕತೆಯನ್ನು ಕೇಳಿ ಪುಳಕಗೊಂಡವರು. ಇಂದಿಗೂ ಅನೇಕ ಹಿರಿಯ ಕಲಾವಿದರಿಗೆ ಅವಳೊಂದು ಪುಣ್ಯದ ಸ್ಮರಣೆಯಾಗಿ ಉಳಿದುಕೊಂಡಿದ್ದಾಳೆ. ಕೆಲವರು ನಾವು ನಿಂಗವ್ವನ ಬಗ್ಗೆ ಕೇಳಿದ್ದೇವೆ ಎನ್ನುತ್ತಾರೆ. ಇನ್ನು ಕೆಲವರು ನಾವು ಅವಳನ್ನು ನೋಡಿದಾಗಿ ಹೇಳಿ ಸಂದರ್ಭವನ್ನು ಬಣ್ಣಿಸುತ್ತಾರೆ. ಮತ್ತೆ ಕೆಲವರು ಅವಳ ಆಶೀರ್ವಾದವನ್ನೇ ಪಡೆದಿರುವುದಾಗಿ ಹೇಳಿ ಭಾವುಕರಾಗುತ್ತಾರೆ.

ಜಮಖಂಡಿ ಅಪ್ಪಾಲಾಲರು ನಿಂಗವ್ವನ ಆಶೀರ್ವಾದ ನನಗೆ ಛಬ್ಬಿಯಲ್ಲಿ ಆಗಿದೆ! ಎಂದು ಹೇಳಿ ಆ ಘಟನೆಯನ್ನು ಸ್ಮರಿಸಿಕೊಳ್ಳುತ್ತಾರೆ. ಛಬ್ಬಿಯಲಿ ಒಮ್ಮೆ ಜಮಖಂಡಿ ಅಪ್ಪಾಲಾಲ ಹಾಗೂ ನಿಂಗವ್ವನ ಕಂಪನಿಯ ಎರಡೂ ಪ್ರದರ್ಶನಗಳು ಒಂದೇ ದಿನ ನಡೆದವು. ನಿಂಗವ್ವನ ಕಂಪನಿಯಲ್ಲಿ ಬಹಳ ಜನ ವಯಸ್ಸು ಹೋದವರು ಇದ್ದರು. ಅಪ್ಪಾಲಾಲರಿಗೆ ಆದೇ ಆಗ ತರುಣ ವಯಸ್ಸು. ಹೀಗಾಗಿ ಅಪ್ಪಾಲಾಲರ ಪಾರಿಜಾತ ಅಂದು ಜನರಿಗೆ ರೀಜ ಅನ್ನಿಸಿತು. ಜನ ಎಲ್ಲ ಅಪ್ಪಾಲಾಲರ ಕಂಪನಿಯತ್ತ ತಿರುಗಿಬಿಟ್ಟರು. ಆಗ ನಿಂಗವ್ವ ಅಪ್ಪಾಲಾಲರ ಆಟಕ್ಕೆ ಬಂದು 'ಇಂಥಾ ದಿಟ್ಟ ಹುಡಗನ್ನ ನಾ ಎಲ್ಲೂ ನೋಡಲಿಲ್ಲ. ನನ್ನ ಆಶೀರ್ವಾದ ಈ ಹುಡಗ್ಗ ಪೂರ್ಣ ಐತಿ' ಎಂದು ಆಶೀರ್ವಾದ ಮಾಡಿದಳಂತೆ.

ನಿಂಗವ್ವನ ತರುವಾಯ ಜಮಖಂಡಿ ಅಪ್ಪಾಲಾಲರು ಬೆಳೆದರು, ಬರಗಿ ರಾಚಯ್ಯ ಸ್ವಾಮಿಗಳು ಬೆಳೆದರು. ಲೋಕಾಪುರ ದೇಶಪಾಂಡೆ, ಟಕ್ಕಳಕಿ ವಿಠ್ಠಲ ಹೀಗೇ ನೂರಾರು ಜನ ಪಾರಿಜಾತವನ್ನು ನಿಂಗವ್ವನ ತರುವಾಯವೂ ಆಡಿದರು, ಬೆಳೆಸಿದರು. ಇವರೆಲ್ಲ ಇಂದಿಗೂ ಅವಳಲ್ಲಿರಿಸಿದ ಭಕ್ತಿ, ಶ್ರದ್ಧೆಗಳು ಅವಳಿಟ್ಟುಹೋದ ಹೆಜ್ಜೆಗಳನ್ನು ನೆನಪಿಸುತ್ತವೆ. ಸಮರ್ಪಣಾಭಾವ ಮತ್ತು ಆತ್ಮಶಕ್ತಿ ಎರಡೂ ರಂಗಲೋಕಕ್ಕೆ ನಿಂಗವ್ವ ಕೊಟ್ಟ ಕಾಣಿಕೆಗಳು. ನಿಂಗವ್ವನ ಮಾತೆತ್ತಿದರೆ ಸಾಕು, ಬರಗಿ ರಾಚಯ್ಯ ಸ್ವಾಮಿಗಳು ಭಾವುಕರಾಗಿ ನುಡಿಯುತ್ತಾರೆ "ಕೃಷ್ಣ ಪರಮಾತ್ಮನ ಹೆಸರಿನ ಮ್ಯಾಗ ಗುಳದಾಳಿ ಕಟ್ಟಿದಾಕಿ ನಿಂಗವ್ವ, ಖರೇ ಆತ್ಮಶಕ್ತಿ ಇದ್ದಾಕಿ ಆಕಿ."

## ಸಹಾಯಕ ಸಾಹಿತ್ಯ

ಅಪರಾಳ ತಮ್ಮಣ್ಣ ಕೃತ ಶ್ರೀ ಕೃಷ್ಣ ಪಾರಿಜಾತ : ಆರ್.ಜಿ. ಕುಲಕರ್ಣಿ
ಕುಲಗೋಡ ತಮ್ಮಣ್ಣ ಕೃತ ಶ್ರೀ ಕೃಷ್ಣ ಪಾರಿಜಾತ : ಡಾ. ಎಂ.ಎಸ್. ಸುಂಕಾಪುರ
ಕನ್ನಡ ಜಾನಪದ ಸಾಹಿತ್ಯ : ಡಾ. ಬೆಟಗೇರಿ ಕೃಷ್ಣಶರ್ಮ
ಕಲಾಜ್ಯೋತಿ ದಿ. ಕೌಜಲಗಿ ನಿಂಗಮ್ಮ : ಶ್ರೀ ಬಾಳೇಶ ಲಕ್ಷೆಟ್ಟಿ
ಶ್ರೀ ಕೃಷ್ಣ ಪಾರಿಜಾತ : ಒಂದು ಅಧ್ಯಯನ : ಶ್ರೀ ರಾಮ ಇಟ್ಟಣ್ಣವರ.